ಜನಮನದ ದನಿ


# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



22 ವರ್ಷಗಳ ಹಿಂದೆ ಟೆಸ್ಟ್ ಪಂದ್ಯದಲ್ಲಿ ಸಚಿನ್ ತೆಂಡೂಲ್ಕರ್ ಅವರಿಗೆ ಅಂಪೈರ್ ಸ್ಟೀವ್ ಬಕ್ನರ್ ಪ್ರಮಾದದಿಂದ ಎಲ್‌ಬಿಡಬ್ಲ್ಯು ಔಟ್ ತೀರ್ಪು ನೀಡಿದ್ದರು. ಅದು ಭಾರತದ ಕ್ರಿಕೆಟ್ ಪ್ರೇಮಿಗಳ ಪಾಲಿಗೆ ಕರಾಳ ನೆನಪು. ತಮ್ಮ ತೀರ್ಪು ತಪ್ಪಾಗಿತ್ತು ಎಂದು ಒಪ್ಪಿಕೊಂಡಿದ್ದಾರೆ.

25 ಫೆಬ್ರವರಿ 2026 ಬುಧವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 341 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629


ಹೊಸ ಅವಕಾಶಗಳ ಭಂಡಾರ ತೆರೆಯಲಿದೆ ಎಐ ! » 2


ಏಕಾಏಕಿ ತೆಂಗಿನ ಮರಗಳ ನಾಶ : ಕಿಡಿಗೇಡಿ ಕೃತ್ಯ ಶಂಕೆ » 3


ಹೆಣ್ಣು ಮಕ್ಕಳು ವಿದ್ಯಾವಂತರಾಗಿ ಮೌಢ್ಯತೆ ಹಿಮ್ಮೆಟ್ಟಿಸಿ » 4

# ಸರ್ಕಾರಕ್ಕೆ ಬಿಸಿ ಮುಟ್ಟಿಸಿದ ಉದ್ಯೋಗಾಕಾಂಕ್ಷಿಗಳು

## ರಾಜ್ಯದಲ್ಲಿ 2.7 ಲಕ್ಷ ಸರ್ಕಾರಿ ಹುದ್ದೆ ಖಾಲಿ : ಧಾರವಾಡದಲ್ಲಿ ಬೃಹತ್ ಪ್ರತಿಭಟನೆ

• ಪ್ರಜೋದಯ ವರದಿ

**ಬೆಂಗಳೂರು:** ಶಿಕ್ಷಣ, ಪೊಲೀಸ್ ಮತ್ತು ಆರೋಗ್ಯ ಸೇರಿ ವಿವಿಧ ಇಲಾಖೆಗಳಲ್ಲಿನ 2.7 ಲಕ್ಷ ಖಾಲಿ ಹುದ್ದೆಗಳನ್ನು ರಾಜ್ಯ ಸರ್ಕಾರ ಭರ್ತಿ ಮಾಡಬೇಕೆಂದು ಆಗ್ರಹಿಸಿ ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿ ಸಂಘ ಮತ್ತು ಬಿಜೆಪಿ ಕಾರ್ಯಕರ್ತರ ನೇತೃತ್ವದಲ್ಲಿ ಬುಧವಾರ ಸಾವಿರಾರು ಉದ್ಯೋಗಾಕಾಂಕ್ಷಿಗಳು ಧಾರವಾಡದಲ್ಲಿ ಬೃಹತ್ ಪ್ರತಿಭಟನೆ ನಡೆಸಿ ಸರ್ಕಾರಕ್ಕೆ ಬಿಸಿ ಮುಟ್ಟಿಸಿದರು.

ಖಾಲಿ ಇರುವ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡುವಂತೆ ಘೋಷಣೆ ಕೂಗಿದ ಪ್ರತಿಭಟನಾಕಾರರು, ಕಾಂಗ್ರೆಸ್ ನಾಯಕರ ಫೋಟೋಗಳಿಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನಾಕಾರರನ್ನು ನಿಯಂತ್ರಿಸಲು ಪೊಲೀಸರ ಹರಸಾಹಸ ಪಡಬೇಕಾಯಿತು. ವಿಧಾನ ಸಭೆಯ ಪ್ರತಿಪಕ್ಷದ ನಾಯಕ ಆರ್. ಅಶೋಕ್ ಸೇರಿ ಹಲವು ಬಿಜೆಪಿ ನಾಯಕರು ಪ್ರತಿಭಟನೆಗೆ ಬೆಂಬಲ ನೀಡಿದ್ದಾರೆ.

### ಪ್ರತಿಭಟನೆ ಗಂಭೀರವಾಗಿ ಪರಿಗಣಿಸಿದ್ದೇನೆ : ಸಿ.ಎಂ.

ಉದ್ಯೋಗಾಕಾಂಕ್ಷಿಗಳು ನಡೆಸುತ್ತಿರುವ ಪ್ರತಿಭಟನೆಯನ್ನು ನಾನು ಗಂಭೀರವಾಗಿ ಪರಿಗಣಿಸಿದ್ದೇನೆ. ರಾಜ್ಯದ ಸರ್ಕಾರಿ ಉದ್ಯೋಗಾಕಾಂಕ್ಷಿಗಳು ಅನುಭವಿಸುತ್ತಿರುವ ಆತಂಕ, ನಿರಾಶೆ, ಅನಿಶ್ಚಿತತೆಯನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಅವರು, ನಾವು ಅಧಿಕಾರಕ್ಕೆ ಬಂದಾಗ, 2.64 ಲಕ್ಷಕ್ಕೂ ಹೆಚ್ಚು ಸರ್ಕಾರಿ ಹುದ್ದೆಗಳು ಖಾಲಿ ಇದ್ದವು. ಇದು ಒಂದೆರೆಡು ದಿನಗಳಲ್ಲಿ ಸೃಷ್ಟಿಯಾದುದಲ್ಲ. ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಸಕಾಲದಲ್ಲಿ ನೇಮಕಾತಿಗಳನ್ನು ಆರಂಭಿಸದಿರುವುದು ಮತ್ತು ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು

» ನಾಲ್ಕನೇ ಪುಟದಲ್ಲಿ



### ಸರ್ಕಾರಕ್ಕೆ ಹೆಚ್.ಡಿ. ಕುಮಾರಸ್ವಾಮಿ ಎಚ್ಚರಿಕೆ

ರಾಜ್ಯದಲ್ಲಿ ಖಾಲಿ ಇರುವ ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡದಿರುವ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಕೇಂದ್ರ ಸಚಿವರಾದ ಹೆಚ್.ಡಿ.ಕುಮಾರಸ್ವಾಮಿ ಅವರು, ನಿರುದ್ಯೋಗಿ ಯುವಜನರ ಪ್ರತಿಭಟನೆಯನ್ನು ಲಘುವಾಗಿ ಪರಿಗಣಿಸಬೇಡಿ ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

ಯುವಜನರ ಪ್ರತಿಭಟನೆ ಶಾಂತಿಯುತವಾಗಿರಲಿ, ನಿಮ್ಮೊಂದಿಗೆ ನಾನಿದ್ದೇನೆ. ರಾಜ್ಯದಲ್ಲಿ 2.94 ಲಕ್ಷ ಸರ್ಕಾರಿ ಹುದ್ದೆಗಳು ಖಾಲಿ ಬಿದ್ದಿವೆ. ಸಂಪುಟ ದರ್ಜೆ ಹುದ್ದೆಗಳು ಮಾತ್ರ ಸೂಪರ್‌ಫಾಸ್ಟ್ ಆಗಿ ಭರ್ತಿ ಆಗುತ್ತಿವೆ. ಕಾಂಗ್ರೆಸ್ ಸರ್ಕಾರದ ಆದ್ಯತೆ ಯಾವ ರೀತಿಯಲ್ಲಿದೆ ಎಂಬುದು ಅರ್ಥವಾಗುತ್ತದೆ. ಆರ್.ವಿ. ದೇಶಪಾಂಡೆ ಅವರ ಅಧ್ಯಕ್ಷತೆಯ ಕರ್ನಾಟಕ ಆಡಳಿತ ಸುಧಾರಣೆ ಆಯೋಗದ ವರದಿಯಂತೆ ರಾಜ್ಯದಲ್ಲಿ 7 ಲಕ್ಷ ನಿರುದ್ಯೋಗಿಗಳಿದ್ದಾರೆ ಎಂದರು.

### 5 ವರ್ಷ ವಯೋಮಿತಿ ಸಡಿಲಿಕೆ: ಸಿಎಂ

ನಮ್ಮ ಸರ್ಕಾರ ಕಳೆದ ಎರಡೂವರೆ ವರ್ಷಗಳಲ್ಲಿ ವಿವಿಧ ಇಲಾಖೆಗಳಲ್ಲಿ 40,000ಕ್ಕೂ ಹೆಚ್ಚು ನೇಮಕಾತಿಗಳನ್ನು ನಡಸಲಾಗಿದೆ. ವರ್ಷಗಳ ಕಾಲ ಕಾಯಬೇಕಾದ ಅನೇಕ ಅಭ್ಯರ್ಥಿಗಳ ಕಷ್ಟವನ್ನು ನಾವು ಅರಿತಿದ್ದೇವೆ. ಈ ಕಷ್ಟವನ್ನು ಗುರುತಿಸಿ, ಮುಂಬರುವ ನೇಮಕಾತಿಗಳಿಗೆ ಗರಿಷ್ಠ ವಯೋಮಿತಿಯನ್ನು 5 ವರ್ಷ ಸಡಿಲಗೊಳಿಸಲಾಗಿದೆ. ಇದರಿಂದ ನೇಮಕಾತಿಯಲ್ಲಾದ ವಿಳಂಬದಿಂದ ಅರ್ಹ ಅಭ್ಯರ್ಥಿಗಳು ಅನ್ಯಾಯಕ್ಕೊಳಗಾಗದಂತೆ ತಡೆಯಲಾಗಿದೆ ಎಂದು ಸಿದ್ದರಾಮಯ್ಯ ಅವರು ತಿಳಿಸಿದ್ದಾರೆ.

# ತಂಬಾಕಿಗೆ ನ್ಯಾಯಯುತ ಬೆಲೆ ದೊರಕಿಸಿಕೊಡಲು ಆಗ್ರಹ

## ಸಂಸದರ ಅಧ್ಯಕ್ಷತೆಯಲ್ಲಿ ಸಭೆ ನಡೆಸಲು ಮನವಿ

• ಪ್ರಜೋದಯ ವರದಿ

**ಅರಕಲಗೂಡು :** ತಾಲೂಕಿನ ರಾಮನಾಥಪುರ ತಂಬಾಕು ಹರಾಜು ಮಾರುಕಟ್ಟೆಯಲ್ಲಿ ದಿನದಿಂದ ದಿನಕ್ಕೆ ಹೊಗೆಸೊಪ್ಪಿನ ಬೆಲೆ ಕುಸಿಯುತ್ತಿರುವುದರಿಂದ ರೈತರು ಸಂಕಷ್ಟಕ್ಕೆ ಒಳಗಾಗುವ ಸಾಧ್ಯತೆ ಹೆಚ್ಚಿದ್ದು, ಕೂಡಲೇ ಸಂಸದರು ಮಾರುಕಟ್ಟೆಗೆ ಆಗಮಿಸಿ ವರ್ತಕರು, ಬೆಳೆಗಾರರ ಸಭೆ ನಡೆಸಿ ನ್ಯಾಯಯುತ ಬೆಲೆ ದೊರಕಿಸಿ ಕೊಡಬೇಕಿದೆ ಎಂದು ರೈತ ಸಂಘದ ಅಧ್ಯಕ್ಷ ಭುವನೇಶ್ ಆಗ್ರಹಿಸಿದರು.

ಮಂಗಳವಾರ ತಂಬಾಕು ಹರಾಜು ಮಾರುಕಟ್ಟೆಗೆ ರೈತರೊಂದಿಗೆ ಭೇಟಿ ನೀಡಿ ಹರಾಜು ಪ್ರಕ್ರಿಯೆಯನ್ನು ವೀಕ್ಷಣೆ ವೇಳೆ ದಿಢೀರ್ ಬೆಲೆ ಕುಸಿತಗೊಂಡಿರುವುದನ್ನು ಕಂಡು ಆಕ್ರೋಶ ವ್ಯಕ್ತಪಡಿಸಿದ ಅವರು, ಕೇಂದ್ರದ ಬಜೆಟ್ ಹಿನ್ನಲೆಯಲ್ಲಿ ವರ್ತಕರು ತಂಬಾಕು ಖರೀದಿಯನ್ನು ಸ್ಥಗಿತಗೊಳಿಸಿದ್ದರು. ಕೇಂದ್ರ ಸರ್ಕಾರ ತಂಬಾಕು ಉತ್ಪನ್ನಗಳ ಮೇಲಿನ ಶೇ.18ರಷ್ಟು ತೆರಿಗೆಯನ್ನು ಹಿಂದಕ್ಕೆ ಪಡೆದಿದೆ. ಈ ಸಲುವಾಗಿ ಉತ್ತಮ ದರ್ಜೆಯ ತಂಬಾಕು ಕೆ.ಜಿಗೆ 350 ರೂ. ದಾಟಬೇಕಿತ್ತು. ಆದರೆ, ಇಂದಿನ ದರವನ್ನು ನೋಡಿದರೇ ಉತ್ತಮ



ದರ್ಜೆಯ ತಂಬಾಕು ಕೆ.ಜಿ.ಗೆ 240 ರಿಂದ 250 ರೂ. ದರದಲ್ಲಿ ಮಾರಾಟವಾಗಿದೆ. ಮಾರುಕಟ್ಟೆ ಆರಂಭದಲ್ಲಿ 315 ರೂ. ತನಕ ಬೆಲೆ ಸಿಕ್ಕಿದೆ. ಆರಂಭದ ಬೆಲೆ ಹೋಲಿಸಿದರೇ 60 ರಿಂದ 70ರೂ ಬೆಲೆ ಕಡಿಮೆಯಾಗಿದೆ. ಈಗ ತೆರಿಗೆ ಕಡಿಮೆಯಾಗಿರುವುದ ರಿಂದ ಬೆಲೆ ಏರಿಕೆಯಾಗಬೇಕಿತ್ತು. ಬದಲಾಗಿ ಬೆಲೆ ಕುಸಿತಗೊಂಡಿದೆ. ಅದಕ್ಕೆ ತಂಬಾಕು ಮಂಡಳಿ, ಕೇಂದ್ರ ಸರ್ಕಾರ, ವರ್ತಕರು ಕಾರಣವಾಗಿದೆ. ಈ ಎಲ್ಲರೂ ಸೇರಿಕೊಂಡು ಬೆಳೆಗಾರರಿಗೆ ದೊಡ್ಡಮಟ್ಟದಲ್ಲಿ ಮೋಸ ಮಾಡುತ್ತಿದ್ದಾರೆಂದು ಆರೋಪಿಸಿದರು.

ಈಗಾಗಲೇ ಶೇ.60ರಷ್ಟು ತಂಬಾಕು ಖರೀದಿ ಆಗಿದ್ದು, ಇನ್ನೂ 40ರಷ್ಟು ಬಾಕಿ ಉಳಿದಿದೆ. ಈಗಾಗಲೇ ಉತ್ತಮ ದರ್ಜೆ ಸೊಪ್ಪನ್ನು ಮಾತ್ರ ಮನಸಿಗೆ ಬಂದ ಬೆಲೆಯಲ್ಲಿ ಖರೀದಿಸಲಾಗುತ್ತಿದೆ. ಕೆಳದರ್ಜೆಯ ಸೊಪ್ಪನ್ನು ಕೇಳುವವರೇ ಇಲ್ಲವಾಗಿದೆ. ಈ ಹಂತದ ಸೊಪ್ಪನ್ನು ಖರೀದಿ ಮಾಡದಿದ್ದರೆ ಬೆಳೆಗಾರರ ಆತ್ಮಹತ್ಯೆಯಂತಹ ದಾರಿ ಹಿಡಿಯುತ್ತಾರೆ.ಇದಕ್ಕೆ ರೈತ ಸಂಘ ಅವಕಾಶ ಮಾಡಿಕೊಡುವುದಿಲ್ಲ. ಮಾರ್ಚ್ 2 ರಂದು ರಾಮನಾಥಪುರ ತಂಬಾಕು ಹರಾಜು ಮಾರುಕಟ್ಟೆಯಲ್ಲಿ ಸಂಸದ ಶ್ರೇಯಸ್ ಪಟೇಲ್, ಶಾಸಕ ಎ.ಮಂಜು ಹಾಗೂ ಬೆಳೆಗಾರರ ಸಭೆಯನ್ನು ಕರೆದು ಉತ್ತಮ ಬೆಲೆ ಒದಗಿಸಲು ತಂಬಾಕು ಮಂಡಳಿ ಕ್ರಮ

» ನಾಲ್ಕನೇ ಪುಟದಲ್ಲಿ

# ಹೆರಿಗೆ ಬಳಿಕ ಮಹಿಳೆ ಸಾವು: ವೈದ್ಯರ ನಿರ್ಲಕ್ಷ್ಯ ಆರೋಪ

## ಆಸ್ಪತ್ರೆ ಆವರಣದಲ್ಲಿ ಸಂಬಂಧಿಕರಿಂದ ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ನಗರದ ಚಾಮರಾಜೇಂದ್ರ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ (ಹಿಮ್ಸ್)ಗೆ ದಾಖಲಾಗಿದ್ದ ಮಹಿಳೆ ಹೆರಿಗೆ ಬಳಿಕ, ವೈದ್ಯರ ನಿರ್ಲಕ್ಷ್ಯದಿಂದ ಮೃತಪಟ್ಟಿದ್ದಾರೆಂದು ಆರೋಪಿಸಿ ಸಂಬಂಧಿಕರು ಆಸ್ಪತ್ರೆ ಆವರಣದಲ್ಲಿ ವೈದ್ಯರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ಪ್ರತಿಭಟನೆ ನಡೆಸಿದರು.

ದುದ್ದ ಹೋಬಳಿ ಹೆರಗು ಹನುಮನಹಳ್ಳಿಯ ನಿವಾಸಿ, ಪ್ರಸ್ತುತ ಕೆ.ಆರ್.ಪೇಟೆ ಸಮೀಪದ ಚಿಕ್ಕ ಗಾಡೇನಹಳ್ಳಿ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಅತಿಥಿ ಶಿಕ್ಷಕಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರುತಿ (30) ಮೃತ ಮಹಿಳೆ. ಶ್ರುತಿ ಫೆ. 22ರಂದು ಹೆರಿಗೆಗಾಗಿ ನಗರದ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಗೆ ದಾಖಲಾಗಿದ್ದರು.





ಬಳಿಕ ಸಾಮಾನ್ಯ ಹೆರಿಗೆಯಲ್ಲಿ ಹೆಣ್ಣು ಮಗುವಿಗೆ ಜನ್ಮ ನೀಡಿದ್ದರು.

ಹೆರಿಗೆ ಬಳಿಕ ಮಹಿಳೆಯ ಆರೋಗ್ಯ ಏಕಾಏಕಿ ಹದಗೆಟ್ಟಿದ್ದು, ತಕ್ಷಣ ರಕ್ತದ ಅವಶ್ಯಕತೆ ಇದೆ ಎಂದು ವೈದ್ಯರು ಹೇಳಿದ್ದರಿಂದ ಸಂಬಂಧಿಕರು ತಕ್ಷಣವೇ ರಕ್ತದ ವ್ಯವಸ್ಥೆ ಮಾಡಿ ಕೊಟ್ಟರೂ, ಮಹಿಳೆಯನ್ನು ಬೇರೆ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ಸೂಚನೆ ನೀಡಿದರು. ಆದರೆ, ಮಾರ್ಗಮಧ್ಯೆ ಶ್ರುತಿ ಮೃತಪಟ್ಟಿದ್ದಾರೆಂದು ಪತಿ ಪುನೀತ್ ಆರೋಪಿಸಿದ್ದಾರೆ.

ಪ್ರಸೂತಿ ತಜ್ಞೆ ಸುಮಾ ಅವರು ಹೆರಿಗೆ ಮಾಡಿಸಿದ್ದರು. ಆದರೆ, ಸರಿ

» ನಾಲ್ಕನೇ ಪುಟದಲ್ಲಿ

# ಈ ಬಾರಿ ಉತ್ತಮ ಮಾವಿನ ಫಸಲು ನಿರೀಕ್ಷೆ


## ಚ.ರಾ.ಪಟ್ಟಣ ತಾಲ್ಲೂಕಿನಲ್ಲಿ 170 ಎಕರೆಯಲ್ಲಿ ಬೆಳೆ

ಆರ್. ಶ್ರೀನಿವಾಸ್ ಉಳ್ಳಾವಳ್ಳಿ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ :** ಪೂರಕ ವಾತಾವರಣದ ಕಾರಣದಿಂದಾಗಿ ಈ ಸಲ ತಾಲ್ಲೂಕಿನಲ್ಲಿ ಮಾವಿನ ಫಸಲು ಕೈ ಹಿಡಿಯಲಿದೆ ಎಂಬ ನಿರೀಕ್ಷೆಯಲ್ಲಿ ಬೆಳೆಗಾರರಿದ್ದಾರೆ.

ಡಿಸೆಂಬರ್‌ನಿಂದಲೇ ಹೂವು ಬಿಡುವ ಪ್ರಕ್ರಿಯೆ ಆರಂಭವಾಗಿದ್ದು, ಈಗಾಗಲೇ ಸಣ್ಣ ಸಣ್ಣ ಕಾಯಿ-ಕುಸುರಿಗಳಾಗಿ ಫಸಲು ಹಿಡಿಯುತ್ತಿರುವುದನ್ನು ಕಾಣಬಹುದಾಗಿದೆ. ನಾಟಿ ಸೇರಿ ರಸಪುರಿ, ಬಾದಾಮಿ, ಮಲ್ಲಿಕಾ, ತೋತಾಪುರಿ ವಿವಿಧ ತಳಿಗಳ ಮಾವಿನ ಮರಗಳಲ್ಲಿ ಫಸಲು ದೊರೆಯುವ ಸಾಧ್ಯತೆ ಹೆಚ್ಚಾಗಿದೆ ಎಂದು ಬೆಳೆಗಾರರು ಹರ್ಷ ವ್ಯಕ್ತಪಡಿಸಿದ್ದಾರೆ.



> ಚನ್ನರಾಯಪಟ್ಟಣ ತಾಲ್ಲೂಕಿನಾದ್ಯಂತ 170 ಎಕರೆ ಪ್ರದೇಶದಲ್ಲಿ ಮಾವು ಬೆಳೆ ಕೈಗೊಳ್ಳಲಾಗಿದೆ. ಹೂವು ಹಿಡಿಯುವ ಹಾಗು ಕಾಯಿ ಕಟ್ಟುವ ಹಂತದಲ್ಲಿ ಸೂಕ್ತ ಕ್ರಮ ವಹಿಸುವ ಬಗ್ಗೆ ಇಲಾಖೆಯ ತಜ್ಞರ ಸಲಹೆ ಪಡೆಯಬೇಕು. ಹನಿ ನೀರಾವರಿ ಹಾಗು ಹಣ್ಣು ಮಾಗಿಸಲು ಇಲಾಖೆಯಿಂದ ಸಿಗುವ ಸೌಲಭ್ಯಗಳ ಪ್ರಯೋಜನ ಪಡೆಯಬೇಕು.
>
> -ಬಿ.ಆರ್.ಶಿವಕುಮಾರ್, ಪ್ರಭಾರ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ

ಕಳೆದ ವರ್ಷ ಫಸಲು ಹಿಡಿಯುವ ಹಂತದಲ್ಲಿ ಅಕಾಲಿಕ ಆಲಿಕಲ್ಲು ಮಳೆ ಹಾಗು ಹವಾಮಾನ ವೈಪರೀತ್ಯದಿಂದ ಸಮಸ್ಯೆಯಾಗಿತ್ತು. ಹೂವು ಉದುರುವುದು, ಕೀಟ ಬಾಧೆ ಹಾಗು ಅನಿಶ್ಚಿತ ಮಾರುಕಟ್ಟೆ ಪರಿಣಾಮ ರೈತರು ನಷ್ಟ ಅನುಭವಿಸುವಂತಾಗಿತ್ತು. ಈ ಬಾರಿ ಉತ್ತಮ ಫಸಲು ಹಾಗು ಲಾಭದ ನಿರೀಕ್ಷೆ ಇದೆ ಎಂದು ಪಿ.ಹೊಸಹಳ್ಳಿ ಗ್ರಾಮದ ರೈತ ಹೆಚ್.ಕೆ.ಗೋವಿಂದ ರಾಜು ಹೇಳಿದರು.

ಈಗಾಗಲೇ ಮಾವಿನ ಹಣ್ಣು ವ್ಯಾಪಾರಸ್ಥರು, ಗುತ್ತಿಗೆದಾರರು ಹಾಗು ಮಧ್ಯವರ್ತಿಗಳು ರೈತರನ್ನು ಸಂಪರ್ಕಿಸಿ ಫಸಲಿನ ಆಧಾರದ ಮೇಲೆ ಮುಂಗಡ ಹಣ ನೀಡಿ ಒಪ್ಪಿಗೆ ಮಾಡಿಕೊಳ್ಳುತ್ತಿದ್ದಾರೆ. ಆದರೆ,

# ಅತಿವೃಷ್ಟಿ ಪರಿಹಾರ ಹಣವೂ ಬೇರೆ ಜಿಲ್ಲೆಗೆ ವರ್ಗ

## ಸರ್ಕಾರದ ನಡೆಗೆ ಶಾಸಕ ಸಿಮೆಂಟ್ ಮಂಜು ಖಂಡನೆ | ಪ್ರಗತಿ ಪರಿಶೀಲನಾ ಸಭೆ

• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿಗೆ ಬಿಡುಗಡೆಯಾಗಿದ್ದ 25.90 ಕೋ.ರೂ. ಅತಿವೃಷ್ಟಿ ಪರಿಹಾರವನ್ನು ಕಲಬುರಗಿ ಜಿಲ್ಲೆಗೆ ವರ್ಗಾಯಿಸಿರುವುದನ್ನು ಖಂಡಿಸುತ್ತೇನೆ. ಈ ಬಗ್ಗೆ ಸಂಬಂಧಪಟ್ಟ ಸಚಿವರು, ಅಧಿಕಾರಿಗಳೊಂದಿಗೆ ಚರ್ಚಿಸುತ್ತೇನೆಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.

ಪಟ್ಟಣದ ತಾಲ್ಲೂಕು ಪಂಚಾಯಿತಿ ಆವರಣದಲ್ಲಿ ಮಂಗಳವಾರ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ನಿರಂತರ ಮಳೆಯಿಂದ ತಾಲ್ಲೂಕಿನಲ್ಲಿ ಸಾಕಷ್ಟು ಹಾನಿಯುಂಟಾಗಿದೆ. ಕಾಡಾನೆ ಹಾವಳಿಯಿಂದ ಮಲೆನಾಡು ಭಾಗದ ಜನರು ತತ್ತರಿಸಿದ್ದಾರೆ. ಈ ನಡುವೆ ಬಿಡುಗಡೆಯಾಗಿದ್ದ ಅನುದಾನವನ್ನೂ ಬೇರೆ ಜಿಲ್ಲೆಗೆ ವರ್ಗಾಯಿಸುವುದು




ಯಾವ ನ್ಯಾಯವೆಂದು ಪ್ರಶ್ನಿಸಿದರು.

### ಅಧಿಕಾರಿಗಳ ವಿರುದ್ಧ ಆಕ್ರೋಶ

ಮಾಹಿತಿ ನೀಡದೆ ಗೈರಾಗಿದ್ದ ಲೋಕೋಪಯೋಗಿ ಇಲಾಖೆಯ ಎಇಇ ಮುರುಗೇಶ್ ಅವರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಶಾಸಕರು, ಕ್ಷೇತ್ರದ ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಿಸಿ ಸಮರ್ಪಕ ಮಾಹಿತಿ ಕೊಡದೆ ಸಭೆಗೆ ಬಾರದಿರುವುದು ನಿರ್ಲಕ್ಷ್ಯದ ಪರಮಾವಧಿ. ಸಾರ್ವಜನಿಕರ ಕೆಲಸ ಮಾಡುವಾಗ ನಿರ್ಲಕ್ಷ್ಯ ವಹಿಸಬಾರದು. ಕರ್ತವ್ಯ ಲೋಪ ಎಸಗುವುದನ್ನು ಯಾವ ಕಾರಣಕ್ಕೂ ಸಹಿಸುವುದಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದರು.

ಬೇಸಿಗೆಯಲ್ಲಿ ಕುಡಿಯುವ ನೀರಿಗೆ ತೊಂದರೆ ಆಗದಂತೆ ಎಚ್ಚರ ವಹಿಸಬೇಕು. ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಬಾರದು. ಹಿಂದುಳಿದ ವರ್ಗಗಳ ಕಲ್ಯಾಣ ವತಿಯಿಂದ ಹೆತ್ತೂರು ಹಾಗು ಆಜಾದ್ ರಸ್ತೆ ಭಾಗದಲ್ಲಿರುವ ಬಾಡಿಗೆ ಕಟ್ಟಡಗಳ ಸ್ಥಿತಿ ಪರಿಶೀಲಿಸಿ ಶಾಶ್ವತ ಪರಿಹಾರ ಕಂಡುಕೊಳ್ಳಬೇಕು. ಕಪ್ಪಿನಕೋಡಿ ಪ್ರದೇಶದ ಶಿಥಿಲಾವಸ್ಥೆಯ ಕಟ್ಟಡಗಳ ದುರಸ್ತಿಗೆ ಕ್ರಮ ಕೈಗೊಳ್ಳಬೇಕೆಂದು ಸೂಚಿಸಿದರು.

ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಪ್ರಕಾಶ್ ಅವರು ಮಾತನಾಡಿ, ಸ್ಪ್ರಿಂಕ್ಲರ್ ನೀರಾವರಿ ಘಟಕಗಳಿಗೆ ಬೇಡಿಕೆ ಹೆಚ್ಚಿದ್ದು, ಅನುದಾನ ಕಡಿಮೆ ಇದೆ. 2000 ಮೆಣಸು ಬೆಳೆಗಾರರಿಗೆ 400 ಕೋ.ರೂ. ವಿಮೆ ಬಂದಿದೆ ಎಂದರು.

ಪಶುವೈದ್ಯಕೀಯ ಇಲಾಖೆ ಸಹಾಯಕ ನಿರ್ದೇಶಕ ವೆಂಕಟೇಶ್ ಅವರು ಮಾತನಾಡಿ, ತಾಲ್ಲೂಕಿನಲ್ಲಿ ಪಶುವೈದ್ಯಕೀಯ ಇಲಾಖೆಗೆ 68 ಸಿಬ್ಬಂದಿ ಅಗತ್ಯವಿದ್ದರೂ ಕೇವಲ 16 ಮಂದಿ ಮಾತ್ರ ಕಾರ್ಯನಿರ್ವಹಿಸುತ್ತಿದ್ದಾರೆ. ಖಾಲಿ ಹುದ್ದೆ ಭರ್ತಿ ಮಾಡಲು ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದರು.

ಶಾಸಕ ಸಿಮೆಂಟ್ ಮಂಜು ಅವರು ಪ್ರತಿಕ್ರಿಯಿಸಿ, ಪಶು ಇಲಾಖೆಯ ಆ್ಯಂಬುಲೆನ್ಸ್ ಸೇವೆ ಬೆಳಿಗ್ಗೆ 9 ರಿಂದ ಸಂಜೆ 5ರ ವರೆಗೆ ಮಾತ್ರ ಸೀಮಿತವಾಗಿದ್ದು, ಎರಡು ಪಾಳಿಯಲ್ಲಿ ವಿಸ್ತರಣೆ ಮಾಡಲು ಕ್ರಮ

» ನಾಲ್ಕನೇ ಪುಟದಲ್ಲಿ

# ಪಾಲಿಕೆ ಇಂಜಿನೀಯರ್ ವಿರುದ್ಧ ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ನಗರಪಾಲಿಕೆಯ ಪರಿಸರ ಇಂಜಿನೀಯರ್ ಕೆ.ಆರ್.ಕವಿತಾ ಅವರು ದಲಿತ ವಿರೋಧಿ ಭಾವನೆ ಹೊಂದಿದ್ದಾರೆಂದು ಆರೋಪಿಸಿ ಪೌರ ಕಾರ್ಮಿಕರು ಮತ್ತು ಸಿಬ್ಬಂದಿ ಪಾಲಿಕೆ ಕಚೇರಿ ಎದುರು ಮಂಗಳವಾರ ಪ್ರತಿಭಟನೆ ನಡೆಸಿದರು.

ರಾಜ್ಯ ಪೌರ ನೌಕರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಲೋಕೇಶ್ ಅವರು ಮಾತನಾಡಿ, ಕಳೆದ ಒಂದು ತಿಂಗಳಿನಿಂದ ಸಭೆಗಳ ಹೆಸರಿನಲ್ಲಿ ಕೆಲ ನೌಕರರನ್ನು ಗುರಿಯಾಗಿಸಿಕೊಂಡು ಮಾನಸಿಕ ಒತ್ತಡ ಹೇರಲಾಗುತ್ತಿದೆ. ದಲಿತ ಸಮುದಾಯದ ಪೌರಕಾರ್ಮಿಕರೊಂದಿಗೆ ಬೇಧಭಾವದಿಂದ ವರ್ತಿಸಲಾಗುತ್ತಿದೆ. ಆಡಳಿತಾತ್ಮಕ ಕ್ರಮಗಳಲ್ಲಿ ಏಕಪಕ್ಷೀಯ ನಿರ್ಧಾರಗಳನ್ನು ಕೈಗೊಳ್ಳಲಾಗುತ್ತಿದೆ.

» ನಾಲ್ಕನೇ ಪುಟದಲ್ಲಿ



### ಅಕ್ರಮಕ್ಕೆ ಕಡಿವಾಣ ಹಾಕಿದ್ದಕ್ಕೆ ಪ್ರತಿಭಟನೆ: ಕವಿತಾ

ಸೆಪ್ಟೆಂಬರ್ ತಿಂಗಳಲ್ಲಿ ಪರಿಸರ ಇಲಾಖೆಯ ಪ್ರಭಾರಿ ಇಂಜಿನೀಯರ್ ಆಗಿ ಅಧಿಕಾರ ವಹಿಸಿಕೊಂಡ ಬಳಿಕ ಈ ವಿಭಾಗದಲ್ಲಿ ನಡೆಯುತ್ತಿದ್ದ ಡೀಸೆಲ್, ಟೈರ್ ಕಳ್ಳತನ ಸೇರಿ ವಿವಿಧ ಅಕ್ರಮಗಳನ್ನು ಪತ್ತೆ ಹಚ್ಚಿ ಕ್ರಮ ಕೈಗೊಳ್ಳಲಾಗಿದೆ. ಪೌರ ಕಾರ್ಮಿಕರ ಹಾಜರಾತಿ ಹಾಗು ಕೆಲಸದ ವೈಖರಿಯನ್ನು ಕಟ್ಟುನಿಟ್ಟಾಗಿ ಪರಿಶೀಲಿಸಿ, ಕರ್ತವ್ಯ ನಿರ್ವಹಣೆಯಲ್ಲಿ ಶಿಸ್ತನ್ನು ಜಾರಿಗೊಳಿಸಲು ಮುಂದಾಗಿರುವುದಕ್ಕೆ ತನ್ನ ವಿರುದ್ಧ ಪ್ರತಿಭಟನೆ ನಡೆಸಲಾಗುತ್ತಿದೆ ಎಂದು ಇಂಜಿನೀಯರ್ ಕೆ. ಆರ್.ಕವಿತಾ ಅವರು ಸ್ಪಷ್ಟಪಡಿಸಿದ್ದಾರೆ.

ಕೆಲವರು ಪೌರ ಕಾರ್ಮಿಕರನ್ನು ಪ್ರೇರೇಪಿಸಿ ತಮ್ಮ ವಿರುದ್ಧ ಪ್ರತಿಭಟನೆ ನಡೆಸಿದ್ದಾರೆ. ಜಾತಿಯನ್ನು ಮುಂದಿಟ್ಟುಕೊಂಡು ಅನಗತ್ಯ ಆರೋಪ ಮಾಡುತ್ತಿರುವುದು ದುಃಖಕರ ಬೆಳವಣಿಗೆ. ಇದರಿಂದ ಮನನೊಂದು, ಪರಿಸರ ಇಲಾಖೆಯ ಪ್ರಭಾರಿ ಇಂಜಿನೀಯರ್ ಹುದ್ದೆಯಿಂದ ತಮ್ಮನ್ನು ಬಿಡುಗಡೆ ಗೊಳಿಸುವಂತೆ ಆಯುಕ್ತರು, ಜಿಲ್ಲಾ ಉಸ್ತುವಾರಿ ಸಚಿವರಿಗೆ ಮನವಿ ಸಲ್ಲಿಸಲಾಗಿದೆ ಎಂದರು.

# ಇಂದಿನಿಂದ ಸನ್ಯಾಸ ದೀಕ್ಷೆ-ಶಿಷ್ಯ ಸ್ವೀಕಾರ ಸಮಾರಂಭ

• ಪ್ರಜೋದಯ ವರದಿ

**ಹಾಸನ:** ಅರಕಲಗೂಡು ತಾಲ್ಲೂಕಿನ ಅರೇಮಾದನಹಳ್ಳಿ ವಿಶ್ವಬ್ರಾಹ್ಮಣ ಮಹಾಸಂಸ್ಥಾನ ಮಠದಲ್ಲಿ ಫೆ.25 ಹಾಗು 26ರಂದು ಮಠದ ಉತ್ತರಾಧಿಕಾರಿಗಳಿಗೆ ಸನ್ಯಾಸ ದೀಕ್ಷೆ ಮತ್ತು ಶಿಷ್ಯ ಸ್ವೀಕಾರ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ವಿಶ್ವಕರ್ಮ ಸಮಾಜದ ಅಧ್ಯಕ್ಷ ಹೆಚ್.ವಿ.ಹರೀಶ್ ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ಉತ್ತರಾಧಿಕಾರಿಗಳು ಸಂಸ್ಕೃತ ಅಧ್ಯಯನ ಮಾಡಿದ್ದು, ಇಂಜಿನೀಯರಿಂಗ್ ಪದವೀಧರರಾಗಿದ್ದಾರೆ. ಹಿಮಾಲಯದ ಹೃಷಿಕೇಷದ ದಯಾನಂದ ಸರಸ್ವತಿ ಆಶ್ರಮದಲ್ಲಿ ವೇದಾಧ್ಯಯನ ಮಾಡಿದ್ದಾರೆ. ಸಮಾರಂಭದ ಸಾನ್ನಿಧ್ಯವನ್ನು ಅರೇಮಾದನಹಳ್ಳಿ ಮಠದ ಪೀಠಾಧ್ಯಕ್ಷ ಶ್ರೀ ಶಿವಸುಜ್ಞಾನತೀರ್ಥ ಸ್ವಾಮೀಜಿ ವಹಿಸುವರು. ಬೆಳಿಗ್ಗೆಯಿಂದಲೇ ಧಾರ್ಮಿಕ ಕಾರ್ಯಕ್ರಮಗಳು ಪ್ರಾರಂಭವಾಗಲಿದ್ದು, ದಶವಿಧ ಸ್ನಾನ, ಅಷ್ಟ ಶ್ರದ್ಧಾದಿ ಕಾರ್ಯ, ವಿರಜಾ ಹೋಮ, ಫೆ. 26ರಂದು ರಾಮನಾಥಪುರದ ಕಾವೇರಿ ನದಿಯಲ್ಲಿ ಸನ್ಯಾಸ ದೀಕ್ಷೆ, ಶ್ರೀ ಸುಜ್ಞಾನಪ್ರಭು ಸ್ವಾಮೀಜಿ ಸಮಾಧಿಸ್ಥ ಅಧಿಷ್ಠಾನದಲ್ಲಿ ಶಿಷ್ಯ ಸ್ವೀಕಾರ, ಮಹಾ ವಾಕ್ಯೋಪದೇಶ ನೆರವೇರಲಿದೆ ಎಂದರು.




ಕಾರ್ಯಕ್ರಮದಲ್ಲಿ ಶ್ರೀ ಮೂರುಝೂವಾಧೀಶ್ವರ ಮಠದ ರಾಮಚಂದ್ರ ಸ್ವಾಮೀಜಿ, ಕಾಳಹಸ್ತೇಂದ್ರ ಶ್ರೀ, ಶ್ರೀ ಶಂಕರಾತ್ಮಾನಂದ ಸರಸ್ವತಿ, ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ, ಶಿವಾನಂದ ಭಾರತಿ ಸ್ವಾಮೀಜಿ, ಬಸವರಾಜೇಂದ್ರ ಸ್ವಾಮೀಜಿ ಸೇರಿ ಅನೇಕ ಮಠಾಧೀಶರು ಭಾಗವಹಿಸುವರು. ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ, ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಸಂಸದ ಶ್ರೇಯಸ್ ಪಟೇಲ್, ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ, ಶಾಸಕ ಕೆ.ಎಂ. ಶಿವಲಿಂಗೇಗೌಡ, ಮಾಜಿ ಸಚಿವ ಹೆಚ್.ಡಿ.ರೇವಣ್ಣ ಉಪಸ್ಥಿತಿ ವಹಿಸುವರು. ಅರಕಲಗೂಡು ಶಾಸಕ ಎ.ಮಂಜು ಅಧ್ಯಕ್ಷತೆ ವಹಿಸಲಿದ್ದಾರೆಂದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ವಿಶ್ವಕರ್ಮ ಸಮಾಜ ಮಾಜಿ ಅಧ್ಯಕ್ಷ ಬಿ.ಸಿ.ಶಂಕರಾಚಾರ್, ಉಪಾಧ್ಯಕ್ಷ ಎ.ಸಿ.ನಾರಾಯಣ್, ಕೆ.ವಿ. ಯೋಗೇಶ್, ಚಂದ್ರಶೇಖರ್, ಬಿ. ಲೋಕೇಶ್, ನರೇಂದ್ರಾಚಾರ್ ಇತರರಿದ್ದರು.

## ಬ್ರೆಜಿಲ್, ವಿಯಟ್ನಾಂನಲ್ಲಿ ಹೆಚ್ಚಿದ ಉತ್ಪಾದನೆ | ಭಾರತೀಯ ಕಾಫಿ ರಫ್ತಿನ ಮೇಲೆ ನೇರ ಪರಿಣಾಮ

# ಜಾಗತಿಕ ಪೂರೈಕೆ ಹೆಚ್ಚಳ: ನಾಗಾಲೋಟದಲ್ಲಿದ್ದ ಕಾಫಿ ಧಾರಣೆ ಕುಸಿತ

• ಪ್ರಜೋದಯ ವರದಿ

**ಹಾಸನ:** ನಾಗಾಲೋಟದಲ್ಲಿದ್ದ ಕಾಫಿ ಧಾರಣೆ ಕುಸಿತ ಕಾಣುತ್ತಿರುವುದು ಬೆಳೆಗಾರರಲ್ಲಿ ನಿರಾಸೆ ಮೂಡಿಸಿದೆ. ಬ್ರೆಜಿಲ್, ವಿಯಟ್ನಾಂ ದೇಶಗಳಲ್ಲಿ ಉತ್ತಮ ಇಳುವರಿಯಿಂದ ಜಾಗತಿಕ ಪೂರೈಕೆ ಹೆಚ್ಚಳವಾಗಿರುವುದು ಪ್ರಮುಖ ಕಾರಣವಾಗಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಕಳೆದ ವರ್ಷ ಫೆಬ್ರವರಿ ತಿಂಗಳಲ್ಲಿ ಕಾಫಿ ಧಾರಣೆ ಐತಿಹಾಸಿಕ ದಾಖಲೆ ಬರೆದಿತ್ತು. ಆದರೆ, ಪ್ರಸಕ್ತ ವರ್ಷದಲ್ಲಿ ದಿನದಿಂದ ದಿನಕ್ಕೆ ಬೆಲೆ ಕುಸಿಯುತ್ತಿರುವುದು ಬೆಳೆಗಾರರನ್ನು ನಿದ್ದೆಗೆಡಿಸಿದೆ. 2025 ಫೆಬ್ರವರಿ ಎರಡನೇ ವಾರದ ಪ್ರಾರಂಭದಲ್ಲೇ ಎಪಿ-30,000ರೂ., ಎಸಿ-17,000 ರೂ., ಆರ್‌ಪಿ- 24, 500 ರೂ., ಆರ್‌ಸಿ-13,250 ರೂ. ತಲುಪಿತ್ತು. ಆದರೆ, 2026 ಫೆಬ್ರವರಿ ಕೊನೆಯ ವಾರದಲ್ಲಿ ಎಪಿ- 22,300 ರೂ., ಎಸಿ-12,000ರೂ., ಆರ್‌ಪಿ-17,500 ರೂ., ಆರ್‌ಸಿ-9,500 ರೂ. ಗೆ ಕುಸಿತ ಕಂಡಿರುವುದು ಉತ್ತಮ ಬೆಲೆ ನಿರೀಕ್ಷೆಯಲ್ಲಿದ್ದ ಕಾಫಿ ಬೆಳೆಗಾರರ ಆತಂಕಕ್ಕೆ ಕಾರಣವಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಎಪಿ- 8000 ರೂ., ಎಸಿ-5000 ರೂ., ಆರ್‌ಪಿ-6,500 ರೂ., ಆರ್‌ಸಿ-3,750ರೂ. ಭಾರೀ ಕುಸಿತ ಕಂಡಿದೆ.

ಈ ವರ್ಷ ಹೊಸ ಫಸಲು ಮಾರುಕಟ್ಟೆಗೆ ಬಂದ ಆರಂಭದಲ್ಲಿ ಅಂದರೆ ಡಿಸೆಂಬರ್ ಅಂತ್ಯದಲ್ಲಿ ಕೆಲ ದಿನ ಮಾತ್ರ 29,000ರೂ. ಇದ್ದ ಅರೇಬಿಕಾ ಪಾರ್ಚ್‌ಮೆಂಟ್ ಬೆಲೆಯು ಜನವರಿ ಮಧ್ಯಭಾಗದಿಂದ ಕುಸಿಯಲಾರಂಬಿಸಿತು. ಫೆಬ್ರವರಿ ಮೊದಲ ವಾರದಲ್ಲಿ ಎಪಿ-25,500 ರೂ., ಎಸಿ-13,600 ರೂ., ಆರ್‌ಪಿ-18,000 ರೂ., ಆರ್‌ಸಿ-10,000 ರೂ. ಇತ್ತು. ಆದರೆ, ಕೆಲವೇ ದಿನಗಳ ಅಂತರದಲ್ಲಿ 2 ರಿಂದ 3 ಸಾವಿರರೂ. ಬೆಲೆ ಕಡಿಮೆಯಾಗಿರುವುದು ಬೆಳೆಗಾರರಲ್ಲಿ ದಿಗಿಲು ಹುಟ್ಟಿಸಿದೆ. ಉತ್ತಮ ಬೆಲೆ ನಿರೀಕ್ಷೆಯಲ್ಲಿ ಇನ್ನೂ ಮಾರಾಟ ಮಾಡದೇ ಸಂಗ್ರಹಿಸಿಟ್ಟುಕೊಂಡಿರುವ ಬೆಳೆಗಾರರು ಈಗಿರುವ ಬೆಲೆಗೆ ಮಾರಾಟ ಮಾಡುವುದೋ ಅಥವಾ ಹಾಗೆ ಇಟ್ಟುಕೊಳ್ಳುವುದೋ ತಿಳಿಯದ ಸ್ಥಿತಿಯಲ್ಲಿದ್ದಾರೆ. ಕಳೆದ ಒಂದು ತಿಂಗಳಿಂದ ಸತತವಾಗಿ ಬೆಲೆ ಕುಸಿಯುತ್ತಿರುವುದರಿಂದ ಸಿಕ್ಕ ಬೆಲೆಗೆ ಮಾರಾಟ ಮಾಡುವುದೇ ಉತ್ತಮ ಎಂಬ



| 2025 ಫೆಬ್ರವರಿ ಕಾಫಿ ಧಾರಣೆ | |
|---|---|
| ಅರೇಬಿಕಾ ಪಾರ್ಚ್‌ಮೆಂಟ್: | 30,000 ರೂ. |
| ಅರೇಬಿಕಾ ಚೆರಿ : | 17,000 ರೂ. |
| ರೊಬಸ್ಟಾ ಪಾರ್ಚ್‌ಮೆಂಟ್: | 24,500 ರೂ. |
| ರೊಬಸ್ಟಾ ಚೆರಿ : | 13,250 ರೂ. |
| **2026 ಫೆ.24ರ ಕಾಫಿ ಧಾರಣೆ** | |
| ಅರೇಬಿಕಾ ಪಾರ್ಚ್‌ಮೆಂಟ್: | 22,500 ರೂ. |
| ಅರೇಬಿಕಾ ಚೆರಿ : | 12,000 ರೂ. |
| ರೊಬಸ್ಟಾ ಪಾರ್ಚ್‌ಮೆಂಟ್: | 17,500 ರೂ. |
| ರೊಬಸ್ಟಾ ಚೆರಿ : | 9,500 ರೂ. |

> ವಿಯಟ್ನಾಂ, ಬ್ರೆಜಿಲ್, ಕೊಲಂಬಿಯಾದಲ್ಲಿ ಕಾಫಿ ಉತ್ಪಾದನೆ ಹೆಚ್ಚಾಗಿರುವುದರಿಂದ ಅಂತರ‍್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೆಲೆ ಕುಸಿತವಾಗಿದೆ. ಸದ್ಯಕ್ಕೆ ಬೆಲೆ ಏರಿಕೆಯನ್ನು ನಿರೀಕ್ಷೆ ಮಾಡಲು ಸಾಧ್ಯವಿಲ್ಲ. ಮಾರ್ಚ್ ತಿಂಗಳಲ್ಲಿ ಏನಾಗುತ್ತದೆ ಎಂದು ಗ್ಯಾರಂಟಿಯಾಗಿ ಹೇಳಲು ಆಗುವುದಿಲ್ಲ. ಬಹುತೇಕ ಬೆಳೆಗಾರರು ಕಾಫಿಯನ್ನು ಇನ್ನೂ ಮಾರಾಟ ಮಾಡದೆ, ಸಂಗ್ರಹಿಸಿಟ್ಟುಕೊಂಡಿದ್ದಾರೆ. ಸಾಲದ ಹೊರೆಯಿಂದ ತಪ್ಪಿಸಿಕೊಳ್ಳಲು ಸದ್ಯಕ್ಕೆ ಈಗಿರುವ ಬೆಲೆಯಲ್ಲಿ ಅಗತ್ಯ ಇರುವಷ್ಟು ಮಾರಾಟ ಮಾಡುವುದು ಸೂಕ್ತ.
>
> -ಮೋಹನ್ ಕುಮಾರ್, ಅಂತರ‍್ರಾಷ್ಟ್ರೀಯ ಕಾಫಿ ಸಂಸ್ಥೆ ಸದಸ್ಯ

ನಿರ್ಧಾರಕ್ಕೆ ಬಂದಂತೆ ಕಾಣುತ್ತಿದೆ.

### ವಿದೇಶಗಳಲ್ಲಿ ಹೆಚ್ಚು ಉತ್ಪಾದನೆ

ಬ್ರೆಜಿಲ್, ವಿಯೆಟ್ನಾಂ ಮುಂತಾದ ಪ್ರಮುಖ ಕಾಫಿ ಉತ್ಪಾದಕ ರಾಷ್ಟ್ರಗಳಲ್ಲಿ ಕಳೆದ ವರ್ಷ ಉತ್ಪಾದನೆ ತೀವ್ರ ಕುಸಿತ ಕಂಡಿತ್ತು. ಇದರ ಪರಿಣಾಮವಾಗಿ ಜಾಗತಿಕವಾಗಿ ಭಾರತದ ಕಾಫಿಗೆ ದೊಡ್ಡ ಬೇಡಿಕೆ ಇತ್ತು. ಭಾರತ ಅತೀ ಹೆಚ್ಚು ಕಾಫಿ ರಫ್ತು ದಾಖಲಿಸಿತು. ಆದರೆ, ಈ ಬಾರಿ ಆ ದೇಶಗಳಲ್ಲಿ ನಿರೀಕ್ಷೆಗೂ ಮೀರಿದ ಉತ್ಪಾದನೆ ಆಗಿದೆ. ಸರಬರಾಜು ಹೆಚ್ಚಿರುವುದರಿಂದ ಸಹಜವಾಗಿಯೇ ಬೆಲೆ ಇಳಿಕೆಯಾಗಿದೆ. ಯೂರೋಪ್ ಮತ್ತು ಅಮೇರಿಕಾದಂತಹ ಪ್ರಮುಖ ಕಾಫಿ ಬೇಡಿಕೆ ಇರುವ ಪ್ರದೇಶಗಳಲ್ಲಿ ಆರ್ಥಿಕ ಒತ್ತಡ, ಹಣದುಬ್ಬರ ಮತ್ತಿತರ ಕಾರಣದಿಂದ ಕಾಫಿ ಬಳಕೆ ಸ್ವಲ್ಪ ಮಟ್ಟಿಗೆ ಇಳಿಕೆಯಾಗಿದೆ. ವಿಶೇಷವಾಗಿ ಪ್ರಿಮಿಯಂ ಮತ್ತು ಸ್ಪೆಷಾಲಿಟಿ ಕಾಫಿಗಳಿಗೆ ಬೇಡಿಕೆ ಕಡಿಮೆಯಾಗಿರುವುದು ಭಾರತೀಯ ಕಾಫಿ ರಫ್ತಿನ ಮೇಲೆ ನೇರ ಪರಿಣಾಮ ಬೀರಿದೆ. ಇದಲ್ಲದೇ ಡಾಲರ್ ಮತ್ತು ರೂಪಾಯಿ ವಿನಿಮಯ ದರದ ಅಸ್ಥಿರತೆ ಕೂಡ ದರ ಕುಸಿತಕ್ಕೆ ಕಾರಣವಾಗಿದೆ. ರಫ್ತು ಆಧಾರಿತ ವಸ್ತುವಾಗಿರುವ ಕಾಫಿಗೆ ಡಾಲರ್ ಮೌಲ್ಯ ಮುಖ್ಯವಾಗಿದ್ದು, ಇತ್ತೀಚಿನ ದಿನಗಳಲ್ಲಿ ವಿನಿಮಯ ದರದಲ್ಲಿ ಕಂಡು ಬಂದಿರುವ ಏರಿಳಿತಗಳಿಂದ ವ್ಯಾಪಾರಿಗಳು ಎಚ್ಚರಿಕೆಯಿಂದ ಇರುವಂತಾಗಿದ್ದು, ಖರೀದಿ ದರವನ್ನು ತಗ್ಗಿಸುವ ಪರಿಸ್ಥಿತಿ ನಿರ್ಮಾಣವಾಗಿದೆ.

### ಬೆಲೆ ಇದ್ದರೂ ಲಾಭ ಸಿಕ್ಕಿಲ್ಲ

ಈ ಹಿಂದಿನ ಎರಡು ವರ್ಷಕ್ಕೆ ಹೋಲಿಸಿದರೆ ಬೆಲೆ ಸಮಾಧಾನಕರ ಎಂದು ಭಾವಿಸಿದರೂ, ವಾಸ್ತವಿಕವಾಗಿ ಲಾಭದಾಯಕ ಬೆಲೆಯಲ್ಲ. ವರ್ಷಪೂರ್ತಿ ಕಾಫಿ ತೋಟ ನಿರ್ವಹಣೆಗೆ ಕಾಫಿಗಿಡಗಳ ಪೋಷಣೆ, ಗೊಬ್ಬರ, ಔಷಧ, ಕ್ರಿಮಿ-ಕೀಟ ಬಾಧೆ, ನೀರು ಕೊಡುವುದು, ಕೂಲಿ ಕಾರ್ಮಿಕರ ಸಂಬಳ ಎಲ್ಲವನ್ನೂ ಕ್ರೋಢೀಕರಿಸಿದರೆ ಲಾಭ-ನಷ್ಟದ ಲೆಕ್ಕಾಚಾರ ಹಾಕಲೇಬೇಕಾಗುತ್ತದೆ. ಬೆಲೆ ಏರಿಕೆಯಿಂದ ಭಾರೀ ಲಾಭ ಸಿಕ್ಕಿತು ಎನ್ನುವುದಕ್ಕೆ ಬದಲಾಗಿ ನಷ್ಟದ ಸುಳಿಗೆ ಸಿಲುಕಿಲ್ಲವೆಂಬುದೇ ಸಮಾಧಾನಕರ ಸಂಗತಿ. ಆದರೆ, ಈಗ ದಿನೇ ದಿನೇ ಬೆಲೆ ಕುಸಿಯುತ್ತಿರುವುದು ಬೆಳೆಗಾರರನ್ನು ಮತ್ತಷ್ಟು ಸಂಕಷ್ಟಕ್ಕೆ ತಳ್ಳಿದಂತಾಗುತ್ತಿದೆ.

# ಹೊಸ ಅವಕಾಶಗಳ ಭಂಡಾರ ತೆರೆಯಲಿದೆ ಎಐ!

» ಸಮಯ ಮೀರುವುದಕ್ಕೆ ಮುಂಚೆ ನಾವು ಬದಲಾಗಬೇಕು. ಸಮಯಕ್ಕೆ ತಕ್ಕಂತೆ ಹೊಂದಿ ಕೊಳ್ಳಬೇಕು. ಸಮಯದ ಜತೆಗೆ ಹೆಜ್ಜೆ ಹಾಕಬೇಕು. ಇಲ್ಲವಾದಲ್ಲಿ ನಾವೆಷ್ಟೇ ದೊಡ್ಡವರು ಎಂದು ಕೊಂಡರೂ ಅವನತಿಯನ್ನು ತಪ್ಪಿಸಲು ಸಾಧ್ಯವಿಲ್ಲ. ಈಗ ಮುಖ್ಯ ವಿಚಾರಕ್ಕೆ ಬರೋಣ. ದೆಹಲಿಯಲ್ಲಿ ಜಾಗತಿಕ ಮಟ್ಟದ ಎಐ ಇಂಪ್ಯಾಕ್ಟ್ ಸಮ್ಮಿಟ್ ನಡೆಯಿತು.

ವಿಶ್ವರಂಗ ಬದುಕಿನಲ್ಲಿ ಆಶಾಭಾವ ಬೇಕು, ಆದರೆ ಅದರ ಜತೆಗೆ ಜಗತ್ತಿನಲ್ಲಿ ಆಗುತ್ತಿರುವ ಬದಲಾವಣೆಗಳಿಗೂ ನಮ್ಮನ್ನು ನಾವು ಒಡ್ಡಿಕೊಳ್ಳಬೇಕು. ಆಲ್ ಈಸ್ ವೆಲ್ ಎನ್ನುವ ಟೊಳ್ಳು ಆಶಾಭಾವ ಚಲನಚಿತ್ರದಲ್ಲಷ್ಟೇ ಕೆಲಸ ಮಾಡಬಹುದೇ ವಿನಾ, ನಿಜಜೀವನದಲ್ಲಲ್ಲ.

ಸಮಯದ ಜತೆಗೆ ಹೆಜ್ಜೆ ಹಾಕುವುದನ್ನು ನಾವೆಲ್ಲರೂ ಕಲಿಯಬೇಕು, ಈ ಅವಶ್ಯಕತೆ ಹಿಂದಿಗಿಂತ ಇಂದು ಹೆಚ್ಚಾಗಿದೆ. ಇದರರ್ಥ ಹಿಂದೆ ಇರಲಿಲ್ಲ ಎಂದಲ್ಲ. ಸಮಯದ ಜತೆಜತೆಗೆ ಹೆಜ್ಜೆ ಹಾಕುವವರು ಮಾತ್ರ ಸಮಾಜದಲ್ಲಿ ಉತ್ತಮ ಬದುಕು ಕಟ್ಟಿಕೊಳ್ಳಲು ಸಾಧ್ಯ. ಸಮಯಕ್ಕೆ ತಕ್ಕಂತೆ ಬದಲಾವಣೆಗಳು ಅವಶ್ಯಕ. ಸಮಯದ ಒಂದು ಹಂತದಲ್ಲಿ ಗೆದ್ದಿದ್ದ ವಿಚಾರಗಳು ಸೋಲುವುದು, ಸಮಯಕ್ಕೆ ತಕ್ಕಂತೆ ಬದಲಾಗಲಿಲ್ಲ, ಹೆಜ್ಜೆ ಹಾಕಲಿಲ್ಲ ಎನ್ನುವ ಕಾರಣಕ್ಕೆ ಎನ್ನುವುದಕ್ಕೆ ನೂರಾರು ಉದಾಹರಣೆಗಳು ನಮ್ಮ ಕಣ್ಣ ಮುಂದೆ ಸಿಗುತ್ತವೆ.

ಕೆಲವೊಂದು ಉದಾಹರಣೆಗಳ ವ್ಯಾಪ್ತಿ ಸೀಮಿತವಾಗಿದ್ದರೆ, ಕೆಲವೊಂದು ಉದಾಹರಣೆಗಳು ಜಗವ್ಯಾಪಿ. ನಮ್ಮೂರಲ್ಲಿ ಶೆಟ್ಟರ ದಿನಸಿ ಅಂಗಡಿ ಬಹಳ ಪ್ರಸಿದ್ಧವಾಗಿತ್ತು. ಅವರ ಅಂಗಡಿಯಲ್ಲಿ ಸಿಗದೆ ಇರುವ ವಸ್ತುವೇ ಇಲ್ಲ ಎಂದು ಊರಿನ ಜನ ಮಾತಾಡಿಕೊಳ್ಳುತ್ತಿದ್ದರು.

ಅವತ್ತಿಗೆ ಊರಿನ ಜನರ ಅವಶ್ಯಕತೆಯ ಎಲ್ಲಾ ವಸ್ತುಗಳನ್ನು ಶೆಟ್ಟರು ತಮ್ಮ ಅಂಗಡಿಯಲ್ಲಿ ಮಾರಲು ಇಟ್ಟಿದ್ದರು. ಬೇರೆ ಅಂಗಡಿಗಳಲ್ಲಿ ಒಂದಿದ್ದರೆ ಇನ್ನೊಂದಿಲ್ಲ ಎನ್ನುವಂಥ ಪರಿಸ್ಥಿತಿ. ಹೀಗಾಗಿ ಊರಿನ ಜನರೆ ಶೆಟ್ಟರ ಅಂಗಡಿಯಲ್ಲಿ ದಿನಬಳಕೆಯ ಎಲ್ಲಾ ವಸ್ತುಗಳನ್ನೂ ಕೊಳ್ಳುತ್ತಿದ್ದರು. ಕೇವಲ ಎರಡರಿಂದ ಮೂರು ದಶಕದಲ್ಲಿ ಇಂಥ ಅಂಗಡಿಗಳು ಇಲ್ಲ ಎನ್ನುವಷ್ಟು ಕಡಿಮೆಯಾಗಿವೆ.

ಸಣ್ಣ ಪುಟ್ಟ ಊರುಗಳಲ್ಲಿ ಕೂಡ ಪುಟಾಣಿ ಸೂಪರ್ ಮಾರ್ಕೆಟ್‌ಗಳು ತಲೆಯೆತ್ತಿ ನಿಂತಿವೆ. ಒಂದು ಸಮಯದಲ್ಲಿ ಇತರರಿಗಿಂತ ಮುಂದಿದ್ದ, ಯಶಸ್ವಿಯಾಗಿದ್ದ ಶೆಟ್ಟರ ಅಂಗಡಿಗಳು, ಕಾಲಕ್ಕೆ ತಕ್ಕಂತೆ ಅಪ್‌ಗ್ರೇಡ್ ಆಗದ ಕಾರಣ ಇವತ್ತಿಗೆ ಇಲ್ಲವಾಗಿವೆ. ನಮ್ಮೂರ ಶೆಟ್ಟರ ಅಂಗಡಿ ಕಥೆ ನಿಮ್ಮೂರಲ್ಲಿ ಕೂಡ ಇನ್ನೊಂದು ಹೆಸರಿನಲ್ಲಿ ಇದ್ದೇ ಇರುತ್ತೆ.

ಹೀಗಾಗಿ ಇಂಥ ಉದಾಹರಣೆಗಳ ವ್ಯಾಪ್ತಿ ಸೀಮಿತ. ಜಗತ್ ಪ್ರಸಿದ್ಧವಾಗಿದ್ದ ನೋಕಿಯಾ ಎನ್ನುವ ಸಂಸ್ಥೆ ಮೊಬೈಲ್ ಮಾರುಕಟ್ಟೆಯ 40 ರಿಂದ 50 ಪ್ರತಿಶತ ಆಕ್ರಮಿಸಿಕೊಂಡಿತ್ತು. ಹೌದು, ನೋಕಿಯಾ ಜಾಗತಿಕವಾಗಿ 50 ಪ್ರತಿಶತ ಮಾರುಕಟ್ಟೆಯ ಮೇಲೆ ಅಧಿಪತ್ಯ ಸಾಧಿಸಿತ್ತು.

2007ರವರೆಗೂ ಇದು ತನ್ನ ಹಿಡಿತವನ್ನು ಕಾಪಾಡಿಕೊಂಡಿತ್ತು. ಆ ನಂತರದ ದಿನಗಳಲ್ಲಿ ಸ್ಮಾರ್ಟ್‌ಫೋನ್‌ಗಳಲ್ಲಿ ಆದ ಶೀಘ್ರ ಬದಲಾವಣೆಯನ್ನು ಅದು ಗುರುತಿಸಲು ಮತ್ತು ಅದಕ್ಕೆ ತಕ್ಕಂತೆ ಹೊಂದಿಕೊಳ್ಳಲು ಆಗದ ಕಾರಣ 2013ರ ವೇಳೆಗೆ ಮಾರುಕಟ್ಟೆಯಲ್ಲಿ ನೇಪಥ್ಯವನ್ನು ಸೇರುವಂತಾಯಿತು.

ಇದರ ಲೆಕ್ಕಾಚಾರದಲ್ಲಿ ಬರುವ ಇನ್ನೊಂದು ಜಗತ್ ಪ್ರಸಿದ್ಧ ಸಂಸ್ಥೆ ಕೊಡಾಕ್. 1974ರ ಸಮಯದಲ್ಲಿ ಅಮೆರಿಕದ ಕ್ಯಾಮರಾ ಮಾರುಕಟ್ಟೆಯ 90 ಪ್ರತಿಶತ ಅಧಿಪತ್ಯವನ್ನು ಇದು ಹೊಂದಿತ್ತು. 30 ವರ್ಷಗಳ ಕಾಲ ಜಗತ್ತಿನ ಈ ವಲಯದ ಅನಭಿಷಿಕ್ತ ರಾಜನಂತೆ ಈ ಸಂಸ್ಥೆ ರೂಲ್ ಮಾಡಿತು.

ಜಗತ್ತು ಸದ್ದಿಲ್ಲದೇ ಡಿಜಿಟಲ್ ಕಡೆಗೆ ಮುಖ ಮಾಡಿತು. ಸ್ಮಾರ್ಟ್ ಫೋನ್‌ಗಳಲ್ಲಿ ಇನ್-ಬಿಲ್ಟ್ ಕ್ಯಾಮರಾ ಬರುವುದು ಶುರುವಾಯ್ತು. ಅದು ಜಗತ್ತು ಫೋಟೋ ತೆಗೆಯುವ ರೀತಿಯನ್ನೇ ಬದಲಿಸಿಬಿಟ್ಟಿತು. ಈ ರೀತಿಯ ಬದಲಾವಣೆಗೆ ಹೊಂದಿಕೊಳ್ಳಲಾಗದ ಕೊಡಾಕ್ 2012ರಲ್ಲಿ ದಿವಾಳಿ ಘೋಷಿಸಿಕೊಳ್ಳುವಂತಾಯ್ತು.

2013ರಲ್ಲಿ ಮರುಜೀವ ಪಡೆದುಕೊಂಡರೂ ಮರಳಿ ತನ್ನ ಹಿಂದಿನ ಗತ್ತು ಪಡೆದುಕೊಳ್ಳಲು ಅದು ವಿಫಲವಾದದ್ದು ಇಂದು ಎಲ್ಲರಿಗೂ ಗೊತ್ತಿರುವ ವಿಷಯ. ಜಗವ್ಯಾಪಿ. ಇದಕ್ಕೆ ಪೂರಕವಾದಂತೆ ಇನ್ನೊಂದು ಉದಾಹರಣೆ ಹೇಳಿ, ಪೀಠಿಕೆಯನ್ನು ಕೊನೆ ಮಾಡುವೆ. ಇವತ್ತಿನ ಮುಖ್ಯ ವಿಷಯಕ್ಕೆ ಆ ನಂತರ ಬರುವೆ. ಒಂದೂರಲ್ಲಿ ಮೂರು ಹೆಗ್ಗಣಗಳು ಇದ್ದವಂತೆ. ಊರ ಹೊರಗೆ, ಊರವರು ಹಾಕುವ ಉಳಿದ ಊಟ, ತ್ಯಾಜ್ಯ ವಸ್ತುಗಳನ್ನು ತಿಂದುಂಡು ಚೆನ್ನಾಗಿ ಕೊಬ್ಬಿ ಜೀವನ ಸಾಗಿಸುತ್ತಿದ್ದವು.

ಊರಿಗೆ ಕ್ಷಾಮ ಬಂದ ಕಾರಣ ಊರಿನಿಂದ ಬಹುತೇಕರು ಗುಳೆ ಹೋಗುತ್ತಾರೆ. ಸಹಜವಾಗೇ, ಹೆಗ್ಗಣಗಳಿಗೆ ಸಿಗುತ್ತಿದ್ದ ಆಹಾರದಲ್ಲಿ ಭಾರಿ ಪ್ರಮಾಣದಲ್ಲಿ ಕಡಿತವಾಗುತ್ತದೆ. ಇದನ್ನು ಕಂಡ ಹೆಗ್ಗಣವೊಂದು ಬೇರೆ ಕಡೆಗೆ ಹೋಗೋಣ ಎಂದು ಹೇಳುತ್ತದೆ. ಉಳಿದೆರಡು ಹೆಗ್ಗಣಗಳು, ಬೇರೆಡೆಗೆ ಹೋಗುವ ಅವಶ್ಯಕತೆಯಿಲ್ಲ. ಇಲ್ಲೇ ಎಲ್ಲವೂ ಸರಿಹೋಗುತ್ತದೆ ಎಂದವಂತೆ.

ಸರಿ ನಿಮ್ಮಿಷ್ಟ ಎಂದ ಆ ಹೆಗ್ಗಣ ಬೇರೆ ಕಡೆಗೆ ಆಹಾರ ಅರಸಿ ಹೊರಟುಹೋಗುತ್ತದೆ. ವಾರ ಕಳೆದ ನಂತರ ಉಳಿದ ಎರಡು ಹೆಗ್ಗಣದಲ್ಲಿ ಒಂದು, ನಾವು ಬೇರೆ ಕಡೆಗೆ ಹೋಗೋಣ ಎನ್ನುತ್ತದೆ. ಎಲ್ಲಿಗೂ ಹೋಗುವುದು ಬೇಕಿಲ್ಲ, ಇಲ್ಲೇ ಎಲ್ಲವೂ ಸರಿ ಹೋಗುತ್ತದೆ ಎನ್ನುತ್ತದೆ ಇನ್ನೊಂದು ಹೆಗ್ಗಣ.

ಸರಿ ನಿನ್ನಿಷ್ಟ, ನಾನು ಬೇರೆಡೆಗೆ ಹೋಗುವೆ ಎಂದು ಆ ಹೆಗ್ಗಣವೂ ಆಹಾರ ಅರಸಿ ಕೊಂಡು ಹೋಗುತ್ತದೆ. ಉಳಿದ ಒಂದು ಹೆಗ್ಗಣ, ಇಂದು-ನಾಳೆ ಎಂದು ಕಾಯುತ್ತಾ ದಿನೇ ದಿನೆ ಕೃಶವಾಗುತ್ತಾ ಹೋಗುತ್ತದೆ. ಬೇರೆ ಕಡೆ ಹೋಗೋಣ ಎಂದು ಅದು ಮನಸ್ಸು ಮಾಡಿ ಕೊಳ್ಳುತ್ತದೆ. ಆದರೆ ದೇಹದಲ್ಲಿ ಶಕ್ತಿಯಿಲ್ಲದ ಕಾರಣ ಅದು ಹೋಗಲಾಗದೆ ಮರಣಿಸುತ್ತದೆ. ಮೇಲಿನ ಎಲ್ಲಾ ಉದಾಹರಣೆಗಳ ಸಾರಾಂಶ ಮಾತ್ರ ಸೇಮ್!

ಸಮಯ ಮೀರುವುದಕ್ಕೆ ಮುಂಚೆ ನಾವು ಬದಲಾಗಬೇಕು. ಸಮಯಕ್ಕೆ ತಕ್ಕಂತೆ ಹೊಂದಿ ಕೊಳ್ಳಬೇಕು. ಸಮಯದ ಜತೆಗೆ ಹೆಜ್ಜೆ ಹಾಕಬೇಕು. ಇಲ್ಲವಾದಲ್ಲಿ ನಾವೆಷ್ಟೇ ದೊಡ್ಡವರು ಎಂದುಕೊಂಡರೂ ಅವನತಿಯನ್ನು ತಪ್ಪಿಸಲು ಸಾಧ್ಯವಿಲ್ಲ. ಈಗ ಮುಖ್ಯ ವಿಚಾರಕ್ಕೆ ಬರೋಣ. ದೆಹಲಿಯಲ್ಲಿ ಜಾಗತಿಕ ಮಟ್ಟದ ಎಐ ಇಂಪ್ಯಾಕ್ಟ್ ಸಮ್ಮಿಟ್ ನಡೆಯಿತು.

ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ (ಎಐ) ನಮ್ಮೆಲ್ಲರ ಕೆಲಸ ಕದಿಯುತ್ತದೆ, ಜಗತ್ತು ಪೂರ್ಣವಾಗಿ ಬದಲಾಗುತ್ತದೆ ಎನ್ನುವ ಮಾತುಗಳು ಎಲ್ಲಾ ವರ್ಗದಲ್ಲೂ ಚರ್ಚೆಗೆ ಗುರಿಯಾಗಿವೆ. ಇಂಥ ಸಮಯದಲ್ಲಿ ಕೂಡ ಕೆಲವು ಸಾಫ್ಟ್‌ವೇರ್ ಉದ್ಯೋಗಿಗಳು, ಎಂಜಿನಿಯರ್‌ಗಳು ಆರ್ಟಿಫಿಷಿಯಲ್ ಇಂಟೆಲಿಜೆನ್ಸ್‌ನಿಂದ ಕೆಲಸ ಹೋಗುವುದಿಲ್ಲ ಎನ್ನುವ ವಿಚಾರ ಬರೆಯುತ್ತಿದ್ದಾರೆ.

ಎಲ್ಲವೂ ಸರಿಹೋಗುತ್ತೆ ಎಂದು ಕಾಯುತ್ತ ಕುಳಿತ ಮೂರನೇ ಹೆಗ್ಗಣದ ಕಥೆ ಇವರದು. ಬದುಕಿನಲ್ಲಿ ಆಶಾಭಾವ ಬೇಕು, ಆದರೆ ಅದರ ಜತೆಗೆ ಜಗತ್ತಿನಲ್ಲಿ ಆಗುತ್ತಿರುವ ಬದಲಾವಣೆಗಳಿಗೂ ನಮ್ಮನ್ನು ನಾವು ಒಡ್ಡಿಕೊಳ್ಳಬೇಕು. ಎಲ್ಲವೂ ಸರಿ ಹೋಗುತ್ತೆ, ಆಲ್ ಇಸ್ ವೆಲ್ ಎನ್ನುವ ಟೊಳ್ಳು ಆಶಾಭಾವ ಚಲನಚಿತ್ರದಲ್ಲಿ ಮಾತ್ರ ಕೆಲಸ ಮಾಡಬಹುದು.

ನಿಜಜೀವನದಲ್ಲಿ ಅದು ಸಾಧ್ಯವಿಲ್ಲ. ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಇವತ್ತಿನ ಬಹುತೇಕ ಕೆಲಸಗಳನ್ನು ಇಲ್ಲವಾಗಿಸುವುದು ಸತ್ಯ. ಅದರಲ್ಲೂ ಕ್ಲರಿಕಲ್ ಮತ್ತು ಪುನರಾವರ್ತನೆ ಆಗುವ ಕೆಲಸಗಳನ್ನು, ಹೆಚ್ಚು ಸಮಯ ತಿನ್ನುವ ಕೆಲಸಗಳನ್ನು ಕ್ಷಣದಲ್ಲಿ ಮಾಡಿ ಮುಗಿಸುತ್ತದೆ.

ಹೀಗಾಗಿ ಅಂಥ ಕೆಲಸಗಳನ್ನು ಮಾಡುತ್ತಿದ್ದವರಿಗೆ ಮೊದಲು ಪೆಟ್ಟು ಬೀಳುತ್ತದೆ. ಅದೇ ಸಮಯದಲ್ಲಿ ಇದೇ ಎಐ ಹೊಸ ಕೆಲಸಗಳನ್ನು ಕೂಡ ಸೃಷ್ಟಿಸುತ್ತದೆ. ನಾವು ಅದಕ್ಕೆ ಸಿದ್ಧರಿರಬೇಕು. ನಾವು ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಅನ್ನು ಒಪ್ಪಿಕೊಳ್ಳಲಿ ಅಥವಾ ಬಿಡಲಿ, ಅದು ನಮ್ಮ ಬದುಕಿನಲ್ಲಿ ಈಗಾಗಲೇ ಬಂದಿದೆ. ಅದು ನಮ್ಮ ಬದುಕಿನಲ್ಲಿ ಇನ್ನಷ್ಟು ಸೇರಿಕೊಳ್ಳಲಿದೆ.

ನಾವು ದುಡಿಯುವ, ಬದುಕುವ ರೀತಿಯನ್ನು ಅದು ಬದಲಾಯಿಸಲಿದೆ. ಇದನ್ನು ಒಪ್ಪಿ ಕೊಂಡು ಅಗತ್ಯವಿರುವ ಸೂಕ್ತ ಹೊಂದಾಣಿಕೆ ಮಾಡಿಕೊಂಡವರಿಗೆ ಯಶಸ್ಸು ಸಿಗುತ್ತದೆ. ಇದೇನೂ ಮಾಡುವುದಿಲ್ಲ, ಕೆಲಸಗಳು ಹೋಗುವುದಿಲ್ಲ ಎನ್ನುವ ಮಾತುಗಳನ್ನು ಆಡುತ್ತಾ, ಬರೆಯುತ್ತಾ, ಯಾವುದೇ ಕೌಶಲ ವೃದ್ಧಿಮಾಡಿಕೊಳ್ಳದೆ ಹೋದರೆ ನಷ್ಟವಾಗುವುದು ಎಐಗಲ್ಲ, ನಮಗೆ ಎನ್ನುವ ಪರಿಜ್ಞಾನ ಬೆಳೆಸಿಕೊಳ್ಳುವುದು ಇಂದಿನ ತುರ್ತು ಅಗತ್ಯ.

ಇಲ್ಲಿ ನಿಮಗೊಂದು ವಿಚಾರವನ್ನು ಹೇಳುತ್ತೇನೆ. ಯುಪಿಐನಲ್ಲಿ ಬಳಸುವ ತಂತ್ರಜ್ಞಾನವನ್ನು ಪ್ರಥಮವಾಗಿ ಕಂಡುಹಿಡಿದದ್ದು ಭಾರತೀಯರೇನೂ ಅಲ್ಲ. ಅಮೆರಿಕ ಮತ್ತು ಚೀನಾ ಮ್ಯಾಗ್ನೆಟಿಕ್ ಸ್ಟ್ರಿ ಮತ್ತು ಕ್ಯೂಆರ್ ಕೋಡ್‌ಗಳನ್ನು ಆಗಲೇ ಬಳಸುತ್ತಿದ್ದವು. ಯುಪಿಐನಲ್ಲಿ ನಾವು ಅದನ್ನು ಸಶಕ್ತವಾಗಿ ಬಳಸಿಕೊಂಡೆವು.


ಇವತ್ತಿಗೆ ಡಿಜಿಟಲ್ ಪೇಮೆಂಟ್ ಸಿಸ್ಟಮ್ ಅನ್ನು ಭಾರತದಷ್ಟು ಉತ್ತಮವಾಗಿ ಅಪ್ಪಿ ಕೊಂಡಿರುವ ದೇಶ ಜಗತ್ತಿನಲ್ಲಿ ಯಾವುದೂ ಇಲ್ಲ ಎನ್ನುವ ಮಟ್ಟಕ್ಕೆ ನಾವು ಅದನ್ನು ಬಳಸಿಕೊಂಡಿದ್ದೇವೆ. ಈಗಾಗಲೇ ಲಭ್ಯವಿದ್ದ ತಂತ್ರಜ್ಞಾನವನ್ನು ಸರಳಗೊಳಿಸಿ, ಸಾಮಾನ್ಯರಲ್ಲಿ ಸಾಮಾನ್ಯರು ಕೂಡ ಬಳಸುವ ಮಟ್ಟಕ್ಕೆ ಅದನ್ನು ತಂದದ್ದು ಮಾತ್ರ ಭಾರತೀಯರು.

ಎಐನಲ್ಲಿ ಕೂಡ ಇದೆ ಕಥೆ ರಿಪೀಟ್ ಆಗುವ ಎಲ್ಲಾ ಸಾಧ್ಯತೆಗಳನ್ನೂ ನಾವು ಈಗಾಗಲೇ ನೋಡುತ್ತಿದ್ದೇವೆ. ನಾವು ಆರ್ಟಿಫಿಷಿಯಲ್ ಇಂಟೆಲಿಜೆನ್ಸ್‌ನ ಜನಕರೇನೂ ಅಲ್ಲ. ಅಮೆರಿಕ, ಚೀನಾ ಸೇರಿದಂತೆ ಬಹಳಷ್ಟು ದೇಶಗಳು ಈ ರೇಸಿನಲ್ಲಿ ನಮಗಿಂತ ಮುಂದಿವೆ ಎನ್ನುವುದು ಕೂಡ ನಿರ್ವಿವಾದ. ಆದರೆ ಇವತ್ತಿನ ಸಮಯದಲ್ಲಿ ಕೇವಲ ತಂತ್ರಜ್ಞಾನವಿದ್ದರೆ ಸಾಲದು, ರೇಸಿನಲ್ಲಿ ಮುಂದಿದ್ದರೂ ಸಾಲದು.

ಅವುಗಳನ್ನು ಸರಿಯಾಗಿ ಬಳಸಿಕೊಳ್ಳುವ, ಅದರಲ್ಲೂ ಜನರ ಅವಶ್ಯಕತೆಗೆ ತಕ್ಕಂತೆ ಬಳಸಿ ಕೊಳ್ಳುವ ಕ್ಷಮತೆ ಇರಬೇಕು. ಅಂಥ ಒಂದು ಅವಕಾಶ, ಕ್ಷಮತೆ ಎರಡೂ ಇರುವುದು ಭಾರತದಲ್ಲಿ ಎನ್ನುವುದು ಇವತ್ತಿಗೆ ಜಗತ್ತಿನ ಎಲ್ಲಾ ದೇಶಗಳಿಗೂ ತಿಳಿದುಹೋಗಿದೆ. ಈ ಕಾರಣಕ್ಕೆ, ದೆಹಲಿಯಲ್ಲಿ ನಡೆದ ಎಐ ಶೃಂಗಸಭೆಗೆ ವಿಶ್ವದ ಎಲ್ಲಾ ಪ್ರಮುಖ ದೇಶಗಳೂ ಬಂದಿವೆ.



ಭಾರತವನ್ನು ಉದಾಸೀನ ಮಾಡಿ ಇವತ್ತಿನ ಸಮಯದಲ್ಲಿ ಜಗತ್ತು ನಡೆಯಲು ಸಾಧ್ಯವಿಲ್ಲ. - ದೇಶದ ಅಧ್ಯಕ್ಷರು ಭಾರತದ ಬಗ್ಗೆ ಅದೆಷ್ಟು ವಿಶ್ವಾಸ ಹೊಂದಿದ್ದಾರೆ ಎನ್ನುವುದನ್ನು ಅವರ ಮಾತುಗಳಲ್ಲಿ ಕೇಳುವುದೇ ಖುಷಿ. ವಿತ್ತ ಜಗತ್ತಿನ ಪ್ರಮುಖ ಹೆಸರು ಬ್ಲಾಕ್ ರಾಕ್ ಸಂಸ್ಥೆಯು ಮುಂದಿನ ಇಪ್ಪತ್ತೈದು ವರ್ಷ ಭಾರತಕ್ಕೆ ಸೇರಿದ್ದು ಎನ್ನುವ ಮಾತುಗಳನ್ನು ಯಾವುದೇ ಸಂಕೋಚವಿಲ್ಲದೆ ಹೇಳುತ್ತದೆ.



ಟ್ರಂಪ್ ಭಾರತವನ್ನು ಡೆಡ್ ಇಕಾನಮಿ ಎಂದ ಆಸುಪಾಸಿನ ದಿನಗಳಲ್ಲಿ ಗೂಗಲ್ ಸಂಸ್ಥೆಯು ಭಾರತದಲ್ಲಿ ಮುಂದಿನ ಐದು ವರ್ಷದಲ್ಲಿ 15 ಬಿಲಿಯನ್ ಅಮೆರಿಕನ್ ಡಾಲರ್ ಹಣವನ್ನು ಹೂಡಿಕೆ ಮಾಡುವುದಾಗಿ ಹೇಳಿಕೆ ನೀಡುತ್ತದೆ.

ಜಗತ್ತಿನ ಎಲ್ಲಾ ಪ್ರಮುಖ ಆರ್ಥಿಕತೆಗಳು ಕೂಡ ಭಾರತದೊಂದಿಗೆ ವಾಣಿಜ್ಯ ಒಪ್ಪಂದವನ್ನು ಮಾಡಿಕೊಂಡಿವೆ. 2030ರ ವೇಳೆಗೆ ಜಗತ್ತು ಆರ್ಥಿಕವಾಗಿ, ರಾಜಕೀಯವಾಗಿ, ತಂತ್ರಜ್ಞಾನದಲ್ಲಿ, ಎಲ್ಲಾ ಮಜಲುಗಳಲ್ಲೂ ಹೊಸ ನಾಯಕತ್ವವನ್ನು ಹುಡುಕಿ ಕೊಂಡಿರುತ್ತದೆ. ಜಗತ್ತು ಹಿಂದಿನಂತೆ ಅಮೆರಿಕ-ಕೇಂದ್ರಿತವಾಗಿ ಉಳಿದುಕೊಳ್ಳುವುದಿಲ್ಲ.

ಬದಲಿಗೆ ಐದಾರು ದೇಶಗಳು ಜಗತ್ತಿನ ಹೊಸ ಶಕ್ತಿಕೇಂದ್ರಗಳಾಗಿ ಹೊರಹೊಮ್ಮಿರುತ್ತವೆ. ಭಾರತವು ನಿಸ್ಸಂದೇಹವಾಗಿ ಅವುಗಳಲ್ಲಿ ಒಂದಾಗಿರುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಕ್ಷೇತ್ರವನ್ನು ಆಳುವ ನಿಜವಾದ ರಾಜನಾಗಿ ಹೊರ ಹೊಮ್ಮುತ್ತದೆ.

ಇವತ್ತಿಗೆ ಭಾರತ ಎಂದರೆ ಸ್ವಚ್ಛತೆಯಿಲ್ಲದ ನಗರಗಳು ಎನ್ನುವಂತಾಗಿದೆ. ಹೊಸ ಎಐ ತಂತ್ರಜ್ಞಾನದ ಮೂಲಕ ಆ ಕಳಂಕವನ್ನು ನಾವು ತೊಡೆದುಕೊಳ್ಳಲಿದ್ದೇವೆ. ದೆಹಲಿಯ ಎಐ ಸಮ್ಮಿಟ್‌ನಲ್ಲಿ ಈ ಬಗ್ಗೆ ಆಶಾಭಾವನೆ ಉಂಟುಮಾಡುವ ಪ್ರೋಟೋಟೈಪ್ ಅನಾವರಣವಾಗಿದೆ. ಅದಕ್ಕೆ ಸರಕಾರದ ಅನುಮೋದನೆ ಸಿಕ್ಕರೆ ಭಾರತವು ಸ್ವಚ್ಛ ಭಾರತ ಮಾತ್ರವಲ್ಲ, ಸ್ವಚ್ಛತೆಯಲ್ಲಿ ಜಪಾನ್ ದೇಶವನ್ನು ಕೂಡ ಹಿಂದಿಕ್ಕಬಲ್ಲದು.

ಇಂಥ ಹಲವಾರು ಸಾಧ್ಯತೆಗಳನ್ನು ಜಾಗತಿಕ ಎಐ ಸಮ್ಮಿಟ್ ತೆರೆದಿಟ್ಟಿದೆ. ನಾಳಿನ ಬದುಕು ಹೇಗಿರಬಹುದು? ಏನೆಲ್ಲಾ ಬದಲಾವಣೆಯಾಗಬಹುದು? ಎನ್ನುವುದನ್ನು ಪುಟಾಣಿ ಕಿಂಡಿಯ ಮೂಲಕ ತೋರಿಸುವ ಪ್ರಯತ್ನವನ್ನು ಮಾಡಲಾಗಿದೆ.

ಒಂದಷ್ಟು ಜನ ಮಾತ್ರ ತಮ್ಮ ಹಳೆಯ ಚಾಳಿಯನ್ನು ಮುಂದುವರಿಸಿದ್ದಾರೆ. ಎಐ ಸಮ್ಮಿಟ್ ಅನ್ನು ವಿಫಲಗೊಳಿಸಲು ಹೋಗಿ, ಸಾರ್ವಜನಿಕರಿಂದ ಛೀಮಾರಿ ಹಾಕಿಸಿಕೊಂಡು ಹೊರ ಹೋಗಿದ್ದಾರೆ. ಇನ್ನೊಂದಷ್ಟು ಜನರು ಬದಲಾಗುತ್ತಿರುವ ಭಾರತ, ಬದಲಾಗುತ್ತಿರುವ ಸಮಯದ ಅರಿವಿಲ್ಲದೆ, ಭಾರತ ಕೇವಲ ಎಐ ಕನ್ಸೂಮ್ ಮಾಡುವ ದೇಶವಾಗಿ ಉಳಿದು ಕೊಳ್ಳುತ್ತದೆ ಎನ್ನುವ ಬಡಬಡಿಕೆಯಲ್ಲಿ ಸಮಯವನ್ನು ಕಳೆಯುತ್ತಿದ್ದಾರೆ.

ತಂತ್ರಜ್ಞಾನದ ವಿಚಾರಗಳಲ್ಲಿ ಪರಿಣತರು ಎನ್ನಿಸಿಕೊಂಡವರು ಆಲ್ ಇಸ್ ವೆಲ್ ಮಂತ್ರ ಪಠನೆಯಲ್ಲಿ ಕುಳಿತಿರೆ. ಆದರೆ ವಾಸ್ತವ ಬೇರೆಯೇ ಇದೆ. ಭಾರತ ಎಐ ಕ್ಷೇತ್ರವನ್ನು ಮುಂದೆ ನಿಂತು ನಡೆಸಲಿದೆ. ಸಮಯದ ಜತೆಗೆ ಹೊಸ ಸವಾಲು, ಅವಕಾಶ ಎರಡನ್ನೂ ಹೊತ್ತು ತರಲಿದೆ. ಸಮಸ್ಯೆ, ಸವಾಲು ಎಂದುಕೊಂಡವರಿಗೆ ಅದು ಎದುರಾಗುತ್ತದೆ. ಅವಕಾಶ ಎಂದುಕೊಂಡವರಿಗೆ ಹೊಸ ಅವಕಾಶಗಳ ಜಗತ್ತು ತೆರೆದುಕೊಳ್ಳಲಿದೆ. ಆಯ್ಕೆ ನಮಗೆ ಬಿಟ್ಟದ್ದು.


**- ರಂಗಸ್ವಾಮಿ** ಎಂ

### ಡಿಜಿಟಲ್ ಪೇಮೆಂಟ್ ಸಿಸ್ಟಮ್ ಉತ್ತಮವಾಗಿ ಅಪ್ಪಿ ಕೊಂಡಿರುವ ದೇಶ

- ಯುಪಿಐನಲ್ಲಿ ಬಳಸುವ ತಂತ್ರಜ್ಞಾನವನ್ನು ಪ್ರಥಮವಾಗಿ ಕಂಡುಹಿಡಿದದ್ದು ಭಾರತೀಯರೇನೂ ಅಲ್ಲ.
- ಅಮೆರಿಕ ಮತ್ತು ಚೀನಾ ಮ್ಯಾಗ್ನೆಟಿಕ್ ಸ್ಟ್ರಿ ಮತ್ತು ಕ್ಯೂಆರ್ ಕೋಡ್‌ಗಳನ್ನು ಆಗಲೇ ಬಳಸುತ್ತಿದ್ದವು.
- ಯುಪಿಐನಲ್ಲಿ ನಾವು ಅದನ್ನು ಸಶಕ್ತವಾಗಿ ಬಳಸಿಕೊಂಡೆವು.
- ಇವತ್ತಿಗೆ ಡಿಜಿಟಲ್ ಪೇಮೆಂಟ್ ಸಿಸ್ಟಮ್ ಅನ್ನು ಭಾರತದಷ್ಟು ಉತ್ತಮವಾಗಿ ಅಪ್ಪಿ ಕೊಂಡಿರುವ ದೇಶ ಜಗತ್ತಿನಲ್ಲಿ ಯಾವುದೂ ಇಲ್ಲ ಎನ್ನುವ ಮಟ್ಟಕ್ಕೆ ನಾವು ಅದನ್ನು ಬಳಸಿಕೊಂಡಿದ್ದೇವೆ.
- ಈಗಾಗಲೇ ಲಭ್ಯವಿದ್ದ ತಂತ್ರಜ್ಞಾನವನ್ನು ಸರಳಗೊಳಿಸಿ, ಸಾಮಾನ್ಯರಲ್ಲಿ ಸಾಮಾನ್ಯರು ಕೂಡ ಬಳಸುವ ಮಟ್ಟಕ್ಕೆ ಅದನ್ನು ತಂದದ್ದು ಮಾತ್ರ ಭಾರತೀಯರು.
- ಎಐನಲ್ಲಿ ಕೂಡ ಇದೆ ಕಥೆ ರಿಪೀಟ್ ಆಗುವ ಎಲ್ಲಾ ಸಾಧ್ಯತೆಗಳನ್ನೂ ನಾವು ಈಗಾಗಲೇ ನೋಡುತ್ತಿದ್ದೇವೆ.
- ನಾವು ಆರ್ಟಿಫಿಷಿಯಲ್ ಇಂಟೆಲಿಜೆನ್ಸ್‌ನ ಜನಕರೇನೂ ಅಲ್ಲ. ಅಮೆರಿಕ, ಚೀನಾ ಸೇರಿದಂತೆ ಬಹಳಷ್ಟು ದೇಶಗಳು ಈ ರೇಸಿನಲ್ಲಿ ನಮಗಿಂತ ಮುಂದಿವೆ ಎನ್ನುವುದು ಕೂಡ ನಿರ್ವಿವಾದ.
- ಇವತ್ತಿನ ಸಮಯದಲ್ಲಿ ಕೇವಲ ತಂತ್ರಜ್ಞಾನವಿದ್ದರೆ ಸಾಲದು, ರೇಸಿನಲ್ಲಿ ಮುಂದಿದ್ದರೂ ಸಾಲದು.
- ಅವುಗಳನ್ನು ಸರಿಯಾಗಿ ಬಳಸಿಕೊಳ್ಳುವ, ಅದರಲ್ಲೂ ಜನರ ಅವಶ್ಯಕತೆಗೆ ತಕ್ಕಂತೆ ಬಳಸಿ ಕೊಳ್ಳುವ ಕ್ಷಮತೆ ಇರಬೇಕು.
- ಅಂಥ ಒಂದು ಅವಕಾಶ, ಕ್ಷಮತೆ ಎರಡೂ ಇರುವುದು ಭಾರತದಲ್ಲಿ ಎನ್ನುವುದು ಇವತ್ತಿಗೆ ಜಗತ್ತಿನ ಎಲ್ಲಾ ದೇಶಗಳಿಗೂ ತಿಳಿದುಹೋಗಿದೆ.
- ಈ ಕಾರಣಕ್ಕೆ, ದೆಹಲಿಯಲ್ಲಿ ನಡೆದ ಎಐ ಶೃಂಗಸಭೆಗೆ ವಿಶ್ವದ ಎಲ್ಲಾ ಪ್ರಮುಖ ದೇಶಗಳೂ ಬಂದಿವೆ.
- ಭಾರತವನ್ನು ಉದಾಸೀನ ಮಾಡಿ ಇವತ್ತಿನ ಸಮಯದಲ್ಲಿ ಜಗತ್ತು ನಡೆಯಲು ಸಾಧ್ಯವಿಲ್ಲ.

# ಅಗತ್ಯ ನೋಡಿ ಖರ್ಚು ಮಾಡಿ

ಮೊನ್ನೆ ನಮ್ಮ ಫ್ರೆಂಡ್ ಹೇಳುತ್ತಿದ್ದಾರೆಂದು ನಾನು 20 ವರ್ಷದ ಹಿಂದೆ ಒಂದು 30 40 ಸೈಟ್ ಎಂಬತ್ತು ಸಾವಿರಕ್ಕೆ ತೊಗೊಂಡಿದ್ದೆ, ಈಗ ಇಪ್ಪತ್ತೈದು ಲಕ್ಷಕ್ಕೆ ಮಾರಾಟ ಮಾಡಿದ್ಯಾ ಅಂತ ಹಿಂಗ ಇನ್ನೊಬ್ಬರು ಮಾತಾಡುತಿದ್ರು. ಐದು ವರ್ಷದ ಹಿಂದೆ ಎಸ್ ಜಿ ಬಿ ಅಂದ್ರ ಕೇಂದ್ರ ಸರ್ಕಾರದ ಸಾವರಿನ ಗೋಲ್ಡ್ ಬಾಂಡ್ ಸ್ಕೀಮ್‌ಲ್ಲಿ ಅಥವಾ ಬಂಗಾರದ ಅಂಗಡಿಯಲ್ಲಿ ಸುಮಾರು 46 ಸಾವಿರಕ್ಕೆ 10 ಗ್ರಾಂ ಬಂಗಾರ ತೊಗೊಂಡಿದ್ವಿ. ಈಗ 10 ಗ್ರಾಂ ಬಂಗಾರಕ್ಕೆ ಒಂದು ಲಕ್ಷಕ್ಕೂ ಹೆಚ್ಚಿಗೆ ಆಗೇತಿ ಅಂತ. ಹೀಗೆ ನಾವು ಬಹಳಷ್ಟು ಜನರಿಂದ ಇಂತಹ ಮಾತುಗಳನ್ನ ಕೇಳತಿರತೀವಿ ಇದಕ್ಕೆ ನಾವು ಸಾಮಾನ್ಯವಾಗಿ ದುಡ್ಡಿನ ಮೋಡಿ ಅನ್ನಬಹುದು. ಅಂದರೆ ಈಗಿನ ದಿನಗಳಲ್ಲಿ ನಾವು ತೊಡಗಿಸಿದ ಹಣ ಬಹಳಷ್ಟು ಬೆಳೆದಿದೆ. ಎನ್ನುವ ಭ್ರಮೆಯಲ್ಲಿರುತ್ತೇವೆ.



ಆದರೆ ಈ ಎರಡೂ ಮೇಲಿನ ಉದಾಹರಣೆಗಳನ್ನು ನಾವು ನೋಡಿದಾಗ ಅ ಸಮಯದಲ್ಲಿ ಆ ಹಣದ ಮೌಲ್ಯ ಅಷ್ಟೇ ಇತ್ತು. ಈಗಲೂ ಆ ಮೊತ್ತಕ್ಕೆ ಅವರು ಏನು ಖರೀದಿಸಿದನೋ ಅಷ್ಟೇ ಪ್ರಮಾಣದ ವಸ್ತು ಅಥವಾ ಆಸ್ತಿಯನ್ನು ಖರೀದಿಸಬಹುದು. ಯಾಕೆಂದರೆ ಸೈಟ್ ಮಾರಿದ ವ್ಯಕ್ತಿ. ಅದೇ ಆಳತೆಯ ಸೈಟ್ ಖರೀದಿಸಬೇಕಾದರೆ, ಈಗ ಎಪ್ಪಕ್ಕೆ ಮಾರಿದ್ದಾನೆಯೋ ಅಷ್ಟೇ ಮೊತ್ತವನ್ನು ನೀಡಬೇಕಾಗುತ್ತದೆ. ಅಲ್ಲದೇ 10 ಗ್ರಾಂ ಬಂಗಾರ ಖರೀದಿಗೆ ಅಷ್ಟೇ ಹಣ ನೀಡಿ ಖರೀದಿಸಬೇಕಾಗುತ್ತದೆ. ನಾವು ನಮ್ಮ ಹೂಡಿಕೆಗೆ ಹೆಚ್ಚು ಮೊತ್ತ ಪಡೆದಿದ್ದೇವೆ ಎಂದು ಮೋಡಿಗೆ ಒಳಗಾಗುತ್ತೇವೆ ವಿನಃ ಇಲ್ಲಿ ಏನೂ ಬದಲಾವಣೆ ಕಾಣುವುದಿಲ್ಲ, ಇದಕ್ಕೆ ಅರ್ಥಶಾಸ್ತ್ರದಲ್ಲಿ ಹಣದುಬ್ಬರ ಎನ್ನುತ್ತೇವೆ. ಅಲ್ಲದೇ ಆವಾಗಲೇ ಇನ್ನೂ ಒಂದೋ ಅಥವಾ ಎರಡು ಸೈಟ್ ಹೆಚ್ಚಿಗೆ ಖರೀದಿಸಬೇಕಾಗಿತ್ತು ಅಥವಾ 20 ಅಥವಾ 30 ಗ್ರಾಂ ಹೆಚ್ಚು ಖರೀದಿಸಬೇಕಾಗಿತ್ತು ಅಂತ ಬಹಳಷ್ಟು ಜನ ಪೇಚಾಡುವುದನ್ನು ನೋಡಿರಬಹುದು. ಆದರೆ ಆ ಸಮಯದಲ್ಲಿ ಅಷ್ಟೇ ಹಣ ವಿನಿಯೋಗಿಸುವಷ್ಟು ಸಾಮರ್ಥ್ಯ ಅಥವಾ ವರಮಾನ ಇರುತ್ತೆ ಅನ್ನುವುದು ಗಮನಿಸಬೇಕಾದ ಸಂಗತಿ.

ಯಾವಾಗಲೂ ಜನಸಾಮಾನ್ಯರ ಅದರಲ್ಲೂ ಮಧ್ಯಮ ವರ್ಗದವರ ವರಮಾನ ಹಾಗೂ ಪ್ರಸ್ತುತ ವಿದ್ಯಮಾನಗಳ ಮೇಲೆ ದೇಶದ ಅಥವಾ ಜಾಗತಿಕ ಅರ್ಥ ವ್ಯವಸ್ಥೆಯು ರೂಪುಗೊಳ್ಳುತ್ತದೆ ಎನ್ನುವುದನ್ನು ಮರೆಯಬಾರದು. ಈ ಹಣದುಬ್ಬರವು ನಮ್ಮ ದಿನ ಬಳಕೆಯ ವಸ್ತುಗಳ ಮತ್ತು ಸೇವೆಗಳ ಬೆಲೆ ಏರಿಕೆಯ ಮೂಲಕ ನಾವು ತಿಳಿಯಬಹುದು. ಹಣದುಬ್ಬರವನ್ನು ಆಯಾ ದೇಶಗಳ ಸರ್ಕಾರ ಮತ್ತು ಕೇಂದ್ರಿಯ ಬ್ಯಾಂಕ್‌ಗಳ ವಿತ್ತೀಯ ನೀತಿ ಮತ್ತು ಹಣಕಾಸಿನ ನೀತಿ ಮೂಲಕ ನಿಯಂತ್ರಣಕ್ಕೆ ತರುತ್ತಾರೆ.

ವಿತ್ತೀಯ ನೀತಿ ಸಮಿತಿ ನಮ್ಮ ದೇಶದಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ 2 ತಿಂಗಳಿಗೊಮ್ಮೆ ವಿತ್ತೀಯ ನೀತಿ ಸಮಿತಿಯ ಸಭೆಯ ನಿರ್ಧಾರದ ಆಧಾರದಿಂದ ಈ ರೀತಿಯ ನಿರ್ಣಯಗಳನ್ನು ಕೈಗೊಳ್ಳುತ್ತದೆ.

**1) ಬಡ್ಡಿ ದರ ಹೊಂದಾಣಿಕೆ**

**2) ಮೀಸಲು ನಿಧಿಯ ಬೇಡಿಕೆ**

**3) ಮುಕ್ತ ಮಾರುಕಟ್ಟೆ**

ಬಡ್ಡಿದರ ಹೊಂದಾಣಿಕೆಗಳು ಸಾಲ ಮತ್ತು ಬಡ್ಡಿ ವರಗಳನ್ನು ಹೆಚ್ಚಿಸುವುದಾಂತ ಮಾರುಕಟ್ಟೆಯಲ್ಲಿ ಹಣದ ಪೂರೈಕೆಯು ಕಡಿಮೆಯಾಗಿ ಹೆಚ್ಚು ಖರ್ಚು ಕಮ್ಮಿ ಮಾಡಲು ಬ್ಯಾಂಕ್‌ಗಳು ಬಡ್ಡಿ ದರಗಳನ್ನು ಹೆಚ್ಚಿಸುವುದರಿಂದ ಮಾರುಕಟ್ಟೆಯಲ್ಲಿ ಹಣದ ಪೂರೈಕೆಯು ಕಡಿಮೆಯಾಗಿ ಹೆಚ್ಚು ಖರ್ಚು ಮಾಡುವುದನ್ನು ತಡೆಯುವ ಮೂಲಕ ಹಣದುಬ್ಬರವನ್ನು ನಿಯಂತ್ರಣಕ್ಕೆ ತರುತ್ತದೆ.

**ಮೀಸಲು ಅಗತ್ಯತೆಗಳು:** ಬ್ಯಾಂಕುಗಳ ಮೀಸಲು ನಿಧಿಯನ್ನು ಹೆಚ್ಚಳ ಮಾಡಿ ಸಾಲ ನೀಡಲು ಲಭ್ಯವಿರುವ ಹಣದ ಪ್ರಮಾಣವನ್ನು ಕಡಿಮೆ ಮಾಡುತ್ತವೆ. ಇದು ಹಣದುಬ್ಬರವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ.

**ಮುಕ್ತ ಮಾರುಕಟ್ಟೆ ಕಾರ್ಯಾಚರಣೆ:** ಆರ್ ಬಿ ಐ ಹಣದ ಪೂರೈಕೆಯನ್ನು ನಿಯಂತ್ರಿಸಲು ಸರ್ಕಾರದ ಭದ್ರತಾ ಪತ್ರಗಳನ್ನು ಖರೀದಿಸುತ್ತವೆ ಅಥವಾ ಮಾರಾಟ ಮಾಡುತ್ತವೆ.

ಸರಕಾರಿ ಖರ್ಚುಗಳನ್ನು ಕಡಿಮೆ ಮಾಡುವುದರ ಮೂಲಕ ಒಟ್ಟಾರೆ ಬೇಡಿಕೆಯನ್ನು ಕಡಿಮೆ ಮಾಡಿ ಹಣದುಬ್ಬರವನ್ನು ನಿಯಂತ್ರಣಕ್ಕೆ ತರುತ್ತದೆ. ತೆರಿಗೆಗಳನ್ನು ಹೆಚ್ಚಿಸುವುದರಿಂದ ಖರ್ಚು ಮಾಡುವುದನ್ನು ತಡೆಯುವ ಜೊತೆಗೆ, ಬೇಡಿಕೆಯನ್ನು ತಗ್ಗಿಸುವ ಮೂಲಕ ಹಣದುಬ್ಬರವನ್ನು ನಿಯಂತ್ರಿಸುತ್ತದೆ. ಇನ್ನು ನಾವು ವೈಯಕ್ತಿಕವಾಗಿ ಹಣದುಬ್ಬರವನ್ನು ಈ ರೀತಿ ನಿಯಂತ್ರಿಸಿಕೊಳ್ಳಬಹುದು.

ನಮ್ಮ ಅವಶ್ಯಕತೆಗಳಲ್ಲಿ ಆದ್ಯತೆಯ ಮೇರೆಗೆ ಖರ್ಚು ಮಾಡುವುದನ್ನು ರೂಢಿಸಿಕೊಳ್ಳುವುದು ಅಗತ್ಯ ನಮ್ಮ ಹೂಡಿಕೆ ಅಥವಾ ಉಳಿತಾಯ ಮುಂದಿನ ದಿನಗಳ ಹಣದುಬ್ಬರವನ್ನು ನಿಭಾಯಿಸುವಷ್ಟು ಮತ್ತು ಸುರಕ್ಷಿತವಾಗಿರುವಂತೆ ನೋಡಿಕೊಳ್ಳಬೇಕು. ನಮಗೆ ಏನಾದರೂ ಒಂದಿಡೀ ಮೊತ್ತ ಬಂದರೆ ಅದನ್ನು ನಮ್ಮ ಮುಂದಿನ ಜೀವನೋಪಾಯಕ್ಕೆ ಸಹಕಾರಿಯಾಗುವಂತೆ ಉಳಿತಾಯ ಮಾಡಬೇಕು. ಉದಾಹರಣೆಗೆ ನಮ್ಮ ವಯಸ್ಸಾದ ಕಾಲಕ್ಕೆ ವರಮಾನ ನೀಡುವಂತಹ ಖಚಿತ ಹಾಗೂ ನಿರಂತರವಾಗಿ ನೀಡುವ ಪಿಂಚಣಿ ಯೋಜನೆಗಳಲ್ಲಿ ತೊಡಗಿಸುವುದು. ಜೊತೆಗೆ ಚಿನ್ನದಲ್ಲಿ ಉಳಿತಾಯ ಮಾಡುವುದು. ಕಡಿಮೆ ದರದಲ್ಲಿ ದೊರೆಯುವ ಹಾಗೂ ಮುಂದಿನ ದಿನಗಳಲ್ಲಿ ಬೇಡಿಕೆ ಬರುವ ಸ್ಥಳಗಳಲ್ಲಿ ಸೈಟ್ ಖರೀದಿಸುವ ಯೋಜನೆ ಯುಲಿಪ್ ಪಾಲಿಸಿಗಳು ಜೀವ ವಿಮಾ ರಕ್ಷಣೆಯೊಂದಿಗೆ ಹೆಚ್ಚಿನ ನಿವ್ವಳ ಲಾಭವನ್ನು ನೀಡುತ್ತವೆ. ದೀರ್ಘ ಕಾಲದ ಸಾಂಪ್ರದಾಯಿಕ ಜೀವ ವಿಮಾ ಪಾಲಿಸಿಗಳು ಅದರಲ್ಲೂ ಖಚಿತ ಸೇರ್ಪಡೆಯೊಂದಿಗೆ ಆದಾಯ ಹಾಗೂ ಇಡೀ ಮೊತ್ತವನ್ನು ನೀಡುವುದರಿಂದ ಆಯಾ ಸಮಯದ ಹಣಕಾಸಿನ ಜವಾಬ್ದಾರಿಗಳನ್ನು ಮತ್ತು ಹಣದುಬ್ಬರವನ್ನು ನಿಭಾಯಿಸಲು ಸಹಕಾರಿಯಾಗಲಿವೆ ಭಾರತೀಯ ಜೀವ ವಿಮಾ ನಿಗಮದ ಜೀವನ್ ಉತ್ಸವ್ ಪಾಲಿಸಿ ಪರ್ಯಂತ ವಿಮಾ ರಕ್ಷಣೆ ನೀಡುವುದರ ಜೊತೆಗೆ ವಾರ್ಷಿಕವಾಗಿ ನಿರಂತರ ಮತ್ತು ಖಚಿತ ಆದಾಯ ನೀಡುತ್ತದೆ. ಇನ್ನೂ ಎಲ್ಲಾ ವಿಧದ ಉಳಿತಾಯ ಹಾಗೂ ಹೂಡಿಕೆಗಳಲ್ಲಿ ಹಣ ತೊಡಗಿಸಿದರೆ ಒಳ್ಳೆಯದು. ಇದರಿಂದ ಹಣದುಬ್ಬರವನ್ನು ನಿಯಂತ್ರಿಸಿಕೊಳ್ಳಬಹುದು.

**- ಜೆ.ಸಿ.ಜಾಧವ,** ಬಾಗಲಕೋಟಿ




# ನಿಂಬೆ ಹಣ್ಣು ಬಳಸಿ ಎಸೆಯುವ ಮುನ್ನ

ನಿಂಬೆ ಹಣ್ಣಿನಿಂದ ರಸ ಹಿಂಡಿದ ಬಳಿಕ ನಾವು ಅದರ ಸಿಪ್ಪೆಯನ್ನು ಬಿಸಾಡುತ್ತೇವೆ. ಆದರೆ ನಿಂಬೆ ಹಣ್ಣಿನಿಂದ ಹಲವು ಉಪಯೋಗಗಳಿವೆ. ರಸ ಹಿಂಡಿದ ನಂತರ ಸಿಪ್ಪೆಗಳನ್ನು ಎಸೆಯುವ ಬದಲು ಮನೆಯ ವಿವಿಧ ಕೆಲಸಗಳಿಗೆ ಪರಿಹಾರವಾಗಿ ಬಳಸಬಹುದು.

ಇತ್ತೀಚಿಗೆ ನಿಂಬೆ ಸಿಪ್ಪೆಗಳು ಮರುಬಳಕೆಯೊಂದಿಗೆ ಹೊಸ ರೂಪ ಪಡೆಯುತ್ತಿವೆ. ಅವುಗಳನ್ನು ಅನೇಕ ಉಪಯುಕ್ತ ವಸ್ತುಗಳನ್ನಾಗಿ ಮಾಡಲಾಗುತ್ತಿದೆ. ಈ ಪ್ರಕ್ರಿಯೆ ದುಡ್ಡು ಉಳಿಸುವುದಲ್ಲದೇ, ಮಾಲಿನ್ಯವನ್ನೂ ಕಡಿಮೆ ಮಾಡುತ್ತದೆ, ಜೀವವೈವಿಧ್ಯತೆಯನ್ನು ಹೆಚ್ಚಿಸುತ್ತದೆ. ನಿಂಬೆ ಸಿಪ್ಪೆಗಳನ್ನು ಒಣಗಿಸಿ. ಸಣ್ಣ ಚೀಲಗಳಲ್ಲಿ ಇರಿಸಿ ಹಾಗೂ ಕಪಾಟು ಇಲ್ಲವೇ ಶೂ ಶೆಲ್ಫ್ ನ ಮೂಲೆಗಳಲ್ಲಿ ಇರಿಸಿದರೆ ಸುವಾಸನೆ ಹರಡುತ್ತದೆ. ಫ್ರಿಜ್ ವಾಸನೆ ಬರುತ್ತಿದ್ದರೆ, ನಿಂಬೆ ಸಿಪ್ಪೆಗಳನ್ನು ತುಂಡುಗಳಾಗಿ ಕತ್ತರಿಸಿ ಒಳಗಿಡಿ. ಅವು ಬ್ಯಾಕ್ಟೀರಿಯಾ ವಿರೋಧಿ ಗುಣಗಳನ್ನು ಹೊಂದಿವೆ. ನಿಂಬೆ ಸಿಪ್ಪೆಗಳನ್ನು ಗಾಜಿನ ಬಾಟಲಿಯಲ್ಲಿ ಹಾಕಿ, ಅವು ಮುಳುಗುವಂತೆ ವಿನೆಗರ್ ಸೇರಿಸಿ ಮತ್ತು ಎರಡು ವಾರಗಳ ಕಾಲ ನೆನೆಯಲು ಬಿಡಿ. ಬಳಿಕ ಸೋಸಿ ಸ್ಪ್ರೇ ಬಾಟಲಿಗೆ ಸುರಿಯಿರಿ ಹಾಗೂ ಬಳಸಿ. ಅಡುಗೆ ಮನೆಯ ಕೌಂಟರ್‌ಗಳು, ಸಿಂಕ್‌ಗಳು ಹಾಗೂ ಗಾಜಿನ ಸಾಮಾಗ್ರಿಗಳನ್ನು ಸ್ವಚ್ಛಗೊಳಿಸಲು ಉಪಯುಕ್ತ. ಇದಕ್ಕೆ ಸ್ವಲ್ಪ ಅಡುಗೆ ಸೋಡಾ ಸೇರಿಸಿ ಸ್ವಚ್ಛಗೊಳಿಸುವುದರಿಂದ ಪಾತ್ರೆಗಳು ಹೊಸದರಂತೆ ಹೊಳೆಯುತ್ತವೆ. ನಿಂಬೆ ಸಿಪ್ಪೆಗಳನ್ನು ಅಡುಗೆಯಲ್ಲಿಯೂ ಬಳಸಬಹುದು. ನೀವು ಅವುಗಳನ್ನು ಒಣಗಿಸಿ ಪುಡಿ ಮಾಡಿ ಚಹಾ, ಪದಾರ್ಥ ಹಾಗೂ ಸಲಾಡ್‌ಗಳಿಗೆ ಸೇರಿಸಿದರೆ, ರುಚಿ ದ್ವಿಗುಣಗೊಳ್ಳುತ್ತದೆ. ನೀವು ಅವುಗಳನ್ನು ಸಿಹಿತಿಂಡಿ ಹಾಗೂ ಕೇಕ್‌ಗಳಲ್ಲೂ ಸೇರಿಸಬಹುದು. ತರಕಾರಿಗಳನ್ನು ಕತ್ತರಿಸುವ ಕಟಿಂಗ್ ಬೋರ್ಡ್‌ಗಳನ್ನು ಸ್ವಚ್ಛಗೊಳಿಸಲು ನಿಂಬೆ ಸಿಪ್ಪೆಗಳನ್ನು ಸಹ ಬಳಸಬಹುದು. ಇದು ನೈಸರ್ಗಿಕ ನಂಜು ನಿರೋಧಕವಾಗಿ ಕಾರ್ಯನಿರ್ವಹಿಸುತ್ತದೆ. ತಿಂಗಳಿಗೊಮ್ಮೆ ನಿಂಬೆ ಬಳಸುವ ಸಿಪ್ಪೆಗಳನ್ನು ತುರಿ ಮಾಡಿ. ಆರಂಭದಲ್ಲಿ ಗುಲಾಬಿ ಗಿಡವನ್ನು ನೆಡುವುದು ಒಳ್ಳೆಯದು. ಹೂವುಗಳು ಚೆನ್ನಾಗಿ ಅರಳುತ್ತವೆ. ಮನೆಯಲ್ಲಿ ಬಲವಾದ ವಾಸನೆ ಇದ್ದರೆ, ನಿಂಬೆ ಸಿಪ್ಪೆಗಳನ್ನು ನೀರಿನಲ್ಲಿ ಕುದಿಸಿ ಹಾಗೂ ಮನೆಯಾದ್ಯಂತ ಹಬೆ ಹರಡಲು ಬಿಡಿ. ಅದು ತಾಜಾತನ ನೀಡುತ್ತದೆ. ಸೆರಾಮಿಕ್ ಸಿಂಕ್‌ಗಳನ್ನು ಸ್ವಚ್ಛಗೊಳಿಸಲು, ನಿಂಬೆ ಸಿಪ್ಪೆಗೆ ಸ್ವಲ್ಪ ಸರ್ಫ್ ದ್ರವವನ್ನು ಸೇರಿಸಿ ಮತ್ತು ಅದನ್ನು ಉಜ್ಜಿಕೊಳ್ಳಿ. ವಿವಿಧ ಬಣ್ಣಗಳು ಮತ್ತೆ ಹೊಸದಾಗಿ ಹೊಳೆಯುತ್ತವೆ. ಇತ್ತೀಚೆಗೆ ಓವನ್‌ಗಳ ಬಳಕೆ ಹೆಚ್ಚಾಗಿದ್ದು, ಇವುಗಳ ಒಳಗೆ ಆಹಾರ ತ್ಯಾಜ್ಯ ಸಂಗ್ರಹವಾಗುತ್ತದೆ ಹಾಗೂ ಕೊಳಕಾಗುತ್ತದೆ. ಇವುಗಳನ್ನು ತ್ವರಿತವಾಗಿ ತೊಡೆಯಲು ಒಂದು ಬಟ್ಟಲಿಗೆ ನೀರನ್ನು ಸುರಿಯಿರಿ ನಾಲ್ಕು ನಿಂಬೆ ಸಿಪ್ಪೆಗಳನ್ನು ಸೇರಿಸಿ ಹಾಗೂ ಅದನ್ನು ಬಿಸಿ ಮಾಡಿ. ಹಬೆ ಎಲ್ಲೆಡೆ ಹರಡುತ್ತದೆ. ಇದು ಸ್ವಚ್ಛಗೊಳಿಸುವಿಕೆಯನ್ನು ಸುಲಭಗೊಳಿಸುತ್ತದೆ ಎಂದು ತಜ್ಞರು ತಿಳಿಸುತ್ತಾರೆ.



# ಬಿಳಿಗಿರಿ ರಂಗನ ಬೆಟ್ಟಕ್ಕೆ ಪಯಣ

ದಟ್ಟವಾದ ಕಾಡಿನಿಂದ ಆವೃತವಾದ ಬಿಳಿಗಿರಿ ರಂಗನ ಬೆಟ್ಟದಲ್ಲಿ ವಾಸಿಸುವ ಸೋಲಿಗರ ಆರಾಧ್ಯ ದೈವವೇ ಬಿಳಿಗಿರಿ ರಂಗನಾಥ. ಸೋಲಿಗರು ಬಿಳಿಗಿರಿ ರಂಗವನ್ನು ಭಾವ ಎಂದು ಕರೆಯುತ್ತಾರೆ. ಹಚ್ಚ ಹಸಿರಿನ ವನರಾಶಿಯ ನಡುವೆ ಹಲವಾರು ವನ್ಯ ಪ್ರಾಣಿಗಳು ವಾಸವಾಗಿರುವ ಈ ಅರಣ್ಯದಲ್ಲಿ ಗುಡ್ಡದ ಮೇಲಿರುವ ರಂಗನಾಥನನ್ನು ಬಿಳಿಕಲ್ಲು ತಿರುವೆಂಗಡ ನಾಥ ಎಂದೂ ಕರೆಯುತ್ತಾರೆ.

ಪ್ರತಿ ವರ್ಷ ವೈಶಾಖದಲ್ಲಿ ಜರುಗುವ ರಥೋತ್ಸವಕ್ಕೆ ಸೋಲಿಗರ ಒಕ್ಕಲುಗಳಲ್ಲದೆ ಬೇರೆಯವರೂ ಆಗಮಿಸುವರು. ಶ್ರೀರಂಗನ ಆಲಯದಲ್ಲಿ ರಾಮಾನುಜಾಚಾರ್ಯ, ನಮ್ಮಾಳ್ವಾರ್, ವೇದಾಂತಾಚಾರ್ಯ, ಮಂಗಾಯಿ ಮೊದಲಾದವರ ವಿಗ್ರಹಗಳಿವೆ. ಯಳಂದೂರು ತಾಲ್ಲೂಕಿನ ಬಿಳಿಗಿರಿ ರಂಗನ ಬೆಟ್ಟ ಸದಾ ಕಾಲ ಹಸಿರಿನಿಂದ ಕಂಗೊಳಿಸುವ ಬಿಳಿಬಣ್ಣದ ಬೆಟ್ಟದಟ್ಟವಾದ ಕಾಡಿನಿಂದ ಆವೃತವಾದ ಬಿಳಿಗಿರಿ ರಂಗನ ಬೆಟ್ಟದಲ್ಲಿ ವಾಸಿಸುವ ಸೋಲಿಗರ ಆರಾಧ್ಯ ದೈವವೇ ಬಿಳಿಗಿರಿ ರಂಗನಾಥ.


ಯಳಂದೂರು ತಾಲ್ಲೂಕಿನ ಬಿಳಿಗಿರಿ ರಂಗನ ಬೆಟ್ಟ ಸದಾ ಕಾಲ ಹಸಿರಿನಿಂದ ಕಂಗೊಳಿಸುವ ಬಿಳಿಬಣ್ಣದ ಬೆಟ್ಟ. ಒಂದರಾಚೆ ಇನ್ನೊಂದು, ಅದರಾಚೆಗೆ ಮತ್ತೊಂದು, ಸಾಲು ಸಾಲು ಬೆಟ್ಟಗಳ ಶ್ರೇಣಿ. ಯಾವ ದಿಕ್ಕಿಗೆ ನೋಡಿದರೂ ಪರ್ವತ. ಭಯ ಹುಟ್ಟಿಸುವ ಕಾಡು ಮತ್ತು ಕಣಿವೆಗಳು. ಬಿಳಿಗಿರಿರಂಗನ ಬೆಟ್ಟವೆಂಬ 540 ಚ.ಕಿ.ಮೀ. ವಿಸ್ತಾರವುಳ್ಳ ವನ್ಯಜೀವಿ ಸಂರಕ್ಷಿತ ಪ್ರದೇಶ ನಿಜಕ್ಕೂ ಸಾವಿರ ಅಚ್ಚರಿಗಳ ತವರು. ಪಶ್ಚಿಮ ಘಟ್ಟ ಮತ್ತು ಪೂರ್ವ ಘಟ್ಟಗಳ ನಡುವಿನ ಕೊಂಡಿಯಂತಿರುವ ಇದು ಮುಂದೆ ಸತ್ಯಮಂಗಲ ರಕ್ಷಿತಾರಣ್ಯದೊಂದಿಗೆ ಬೆಸೆಯುತ್ತದೆ.

ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ಮತ್ತು ಯಳಂದೂರು ತಾಲ್ಲೂಕುಗಳಲ್ಲಿ ಹರಡಿಕೊಂಡಿರುವ ಈ ವನ ಪ್ರದೇಶದ ಮುಕುಟ ಮಣಿಯೇ ಬಿ.ಆರ್. ಹಿಲ್ಸ್ ಎಂಬ ಊರು. ಅದರ ಕಾವಲಿಗಿದ್ದಾನೆ ಬಿಳಿಗಿರಿ ರಂಗನಾಥ ದೇವರು. ಕೇವಲ ಏಳೆಂಟು ಎಕರೆಯಷ್ಟು ವಿಸ್ತಾರದ ನೆಲ. ಸಮುದ್ರಮಟ್ಟದಿಂದ 5091 ಅಡಿ ಎತ್ತರ. ಆ ನೆಲದ ಯಾವ ದಿಕ್ಕಿಗೆ ಹೋಗಿ ನೋಡಿದರೂ ಪ್ರಪಾತ. ಇಳಿಜಾರಿನ ತುಂಬಾ ದೊಡ್ಡ ಕಾನನ. ಅದನ್ನು ದಾಟಿ ಕಣ್ಣು ಹಾಯಿಸಿದರೆ ನೋಡಿದಷ್ಟೂ ಮುಗಿಯದ ಕಾಡು. ಬೆಟ್ಟ ಮತ್ತು ನೀಲಿ ನೀಲಿ ಅಂಬರ.

ವೇಗವಾಗಿ ಬೀಸೋ ಗಾಳಿ, ಮುತ್ತಿಕೊಳ್ಳುವ ಹಿಮ, ಅಲ್ಲಲ್ಲಿ ಹೆಪ್ಪುಗಟ್ಟಿ ತೇಲುತ್ತಿರುವ ಮಂಜುಗಡ್ಡೆ, ನೀಲಾಕಾಶದ ಹಿನ್ನಲೆಯಲ್ಲಿ ಕಣ್ಣಿಗೆ ಹಬ್ಬ ಮಾಡುವ ಮೋಹಕ ಮಾಯಾಜಾಲ ಎಲ್ಲರ ಮನಸಳೆಯುತ್ತದೆ. ಹಾಗಾಗಿಯೇ ಇದು ವರ್ಷದ ಬಹುಕಾಲ ಹಿಮಚ್ಛಾದಿತ ಶಿಖರದ ಮೇಲೆ ಕುಳಿತವನು ಬಿಳಿಗಿರಿ ರಂಗ. ಕೆಳಗಿನಿಂದ ನಿಂತು ನೋಡಿದರೆ ಎತ್ತರಕ್ಕೆ ತಲೆ ಎತ್ತಿ ನಿಂತ ಶಿಲೆಯಂತೆ ಕಾಣುವ ಜಾಗವಿದು. ಬಿಳಿ ಕಲ್ಲುಗಳೇ ಇಲ್ಲಿ ಹೆಚ್ಚು. ಹಾಗೆ ಬಿಳಿಗಿರಿ. ನಿಂತ ನಿಲುವಿನ ಐದಡಿ ಎತ್ತರದ ರಂಗನಾಥ ಪ್ರತಿಮೆ ಇಲ್ಲಿನ ಪ್ರಧಾನ ದೇವರು. ನವರಂಗ, ಮುಖ ಮಂಟಪದಿಂದ ಕೂಡಿದ ಈ ದೇವಳ ದ್ರಾವಿಡ ಶೈಲಿಯಲ್ಲಿದೆ. ಬ್ರಹ್ಮರ್ಷಿ ವಸಿಷ್ಠ ಪ್ರತಿಷ್ಠಾಪಿತ ಮೂರ್ತಿ ಎಂಬ ನಂಬಿಕೆ. ಲಕ್ಷ್ಮಿ ಇಲ್ಲಿ ರಂಗನಾಯಕಿ. ಜತೆಗೆ ಹನುಮಂತ, ಮಹಾಮುನಿ, ರಾಮಾನುಜಾಚಾರ್ಯ, ವೇದಾಂತಾಚಾರ್ಯರ ಪ್ರಭಾವ ಕಾಣಬಹುದಾಗಿದೆ.

ಬಿಳಿಗಿರಿ ರಂಗನ ಬೆಟ್ಟವು ಕರ್ನಾಟಕದ ಚಾಮರಾಜನಗರ ಜಿಲ್ಲೆಯಲ್ಲಿ ಇರುವ ಸುಂದರ ಪರ್ವತ ಪ್ರದೇಶವಾಗಿದೆ. ಇದನ್ನು ಸಂಕ್ಷಿಪ್ತವಾಗಿ ಬಿ.ಆರ್. ಹಿಲ್ಸ್ ಎಂದು ಕರೆಯುತ್ತಾರೆ. ಪ್ರಾಕೃತಿಕ ಸೌಂದರ್ಯದೊಂದಿಗೆ ಧಾರ್ಮಿಕ ನೆಲೆಯ ಅದ್ಭುತ ತಾಣವಾಗಿದೆ ಪ್ರವಾಸ ವ್ಯಕ್ತಿತ್ವ ವಿಕಸನಕ್ಕೆ ಸಹಾಯಕ. ಆತ್ಮವಿಶ್ವಾಸ ಮತ್ತು ಸ್ವಾವಲಂಬನೆ ಬೆಳೆಸುತ್ತದೆ. ಪ್ರವಾಸ ಜೀವನದ ಏಕತಾನತೆ ಮುರಿಯುತ್ತದೆ

**- ರಮೇಶ ನಾಯ್ಕ,** ಉಪ್ಪುಂದ, ಬೈಂದೂರು



# ಏಕಾಏಕಿ ತೆಂಗಿನ ಮರಗಳ ನಾಶ: ಕಿಡಿಗೇಡಿ ಕೃತ್ಯ ಶಂಕೆ

## ರೋಗಭಾದೆ ಇಲ್ಲದಿದ್ದರೂ ದಿನೇ ದಿನೇ ಒಣಗುತ್ತಿದೆ ಬೆಳೆ | ಸ್ಥಳಕ್ಕೆ ತೋಟಗಾರಿಕೆ ಅಧಿಕಾರಿಗಳ ಭೇಟಿ

• ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕಿನ ವಿಜಾಪುರ ಅರಣ್ಯ ಹೊಸಕೊಪ್ಪಲು ಗ್ರಾಮದ ತೋಟದಲ್ಲಿ ಫಸಲಿಗೆ ಬಂದಿರುವ ಹತ್ತಾರು ತೆಂಗಿನ ಮರಗಗಳು ಏಕಾಏಕಿ ನಾಶವಾಗಿದ್ದು, ಕಿಡಿಗೇಡಿಗಳು ವಿಷ ಹಾಕಿರುವ ಸಂಶಯ ವ್ಯಕ್ತವಾಗಿದೆ.

ಚಲುವರಾಜ್ ಎಂಬ ರೈತರಿಗೆ ಸೇರಿದ ತೆಂಗಿನ ಮರಗಳು ಅವನತಿಯ ಹಾದಿ ಹಿಡಿದಿವೆ. 102 ತೆಂಗು ಕೃಷಿಯನ್ನು ಚಲುವರಾಜ್ ಕೈಗೊಂಡಿದ್ದಾರೆ. ಸುಮಾರು 7 ವರ್ಷಗಳ ತೆಂಗು ಈಗಾಗಲೇ ಫಸಲು ಕೊಡುವ ಹಂತಕ್ಕೆ ಬಂದಿವೆ. ಈ ಬೆಳೆಯೊಂದಿಗೆ ಅಂತರ ಬೇಸಾಯವಾಗಿ ಬಾಳೆ, ಅಡಿಕೆ, ಹಣ್ಣಿನ ಮರ ಕೃಷಿಯನ್ನು ಕೈಗೊಳ್ಳಲಾಗಿದೆ. ಇದೊಂದು ರೀತಿಯಲ್ಲಿ ಸಮಗ್ರ ಕೃಷಿಯಾಗಿದೆ. ಈ ಜಮೀನಿನ ಅಕ್ಕಪಕ್ಕದಲ್ಲಿ ಇತರೆ ರೈತರ ಜಮೀನುಗಳು ಇದ್ದು, ಈ ರೈತನೊಬ್ಬನೇ ಈ ರೀತಿಯ ಸಮಗ್ರ ಕೃಷಿಯನ್ನು ಕೈಗೊಂಡಿದ್ದಾರೆ. ಆಧುನಿಕ ಕೃಷಿ ತಂತ್ರಜ್ಞಾನ ಅಳವಡಿಕೆ ಮಾಡಿಕೊಳ್ಳಲಾಗಿದೆ. ಈ ಜಮೀನಿನ ಸುತ್ತಲು ಕೂಡ ತೆಂಗು, ಅಡಿಕೆ ಇತರೆ ಕೃಷಿಗಳನ್ನು ರೈತರು ಕೈಗೊಂಡಿದ್ದಾರೆ. ಆದರೆ ಉಳಿದ ರೈತರ ತೆಂಗಿನ ಕೃಷಿಗೆ ಯಾವುದೇ ರೋಗ ಲಕ್ಷಣಗಳು ಕಂಡು ಬಂದಿಲ್ಲ.



ತೆಂಗಿನ ಕೃಷಿಯನ್ನು ಆಧುನಿಕವಾಗಿ ಕೈಗೊಂಡಿದ್ದೇನೆ, ಕಾಲ ಕಾಲಕ್ಕೆ ಕೊಟ್ಟಿಗೆ ಗೊಬ್ಬರ ಸೇರಿದಂತೆ ಇತರೆ ರಾಸಾಯನಿಕ ಗೊಬ್ಬರ, ಔಷಧ ಕೂಡ ಸಿಂಪಡಣೆ ಮಾಡಲಾಗಿದೆ. ನೀರಿನ ಅಭಾವವಿಲ್ಲ, ಆದರೂ ತೆಂಗು ಮಾತ್ರ ಸಾಯುತ್ತಿದೆ. ಇದು ಕಿಡಿಗೇಡಿಗಳ ವಿಷ ಹಾಕುವಿಕೆಯಿಂದ ನಡೆದಿರಬಹುದು.

ರೈತ ಚಲುವರಾಜ್ ತೋಟದಲ್ಲಿನ ತೆಂಗಿನ ಮರಗಳು ಮಾತ್ರ ಒಣಗತೊಡಗುತ್ತಿವೆ. ಬುಡದಲ್ಲಿ ಯಾವುದೇ ರೋಗ ಲಕ್ಷಣವಿಲ್ಲ. ಸುಳಿ ಮಾತ್ರ ಒಣಗುತ್ತಿದೆ. ಈಗಾಗಲೇ ತೋಟಗಾರಿಕೆ ಇಲಾಖೆ ಅಧಿಕಾರಿಗಳ ಸಲಹೆ ಮೇರೆಗೆ ಮರಗಳಿಗೆ ಔಷಧ ಸಿಂಪಡಣೆ ಮಾಡಲಾಗುತ್ತಿದೆ. ಆದರೂ ತೆಂಗಿನ ಮರಗಳ ಒಣಗುವಿಕೆ ಮುಂದುವರಿದಿದೆ. ಕಳೆದ ಎರಡು ತಿಂಗಳಿಂದಲೂ ಕೂಡ ಈ ಸಮಸ್ಯೆ ಮುಂದುವರಿದಿದೆ ಎನ್ನಲಾಗಿದೆ.

### ಹೆಚ್ಚಿನ ಹಣ ಖರ್ಚು– ರೈತ ಒಪ್ಪಿದರೆ ಕ್ರಮ

ರೈತ ಚಲುವರಾಜ್ ಅವರ ತೋಟಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಲಾಗಿದೆ. ಸಾಕಷ್ಟು ತೆಂಗಿನ ಮರಗಳು ಒಣಗುತ್ತಿರುವುದು ಕಂಡು ಬಂದಿದೆ. ಪ್ರಮುಖವಾಗಿ ಸುಳಿ ನಾಶವಾಗುತ್ತಿದೆ. ಇದು ಕೊಳವೆ ರೋಗದಿಂದ ಲಕ್ಷಣ ಎಂದು ಔಷಧ ಸಿಂಪಡಣೆ ಮಾಡಲಾಗಿದೆ. ಆದರೂ ಕೂಡ ಗಿಡಗಳ ಸಾಯುವಿಕೆ ನಿಯಂತ್ರಣಕ್ಕೆ ಬಂದಿಲ್ಲ, ಇದಕ್ಕೆ ಬೇರೆ ರೀತಿಯಲ್ಲಿನ ಸಮಸ್ಯೆ ಎದುರಾಗಿರುವ ಸಾಧ್ಯತೆ ಇದೆ. ನಾವು ಸಾಯುತ್ತಿರುವ ಮರಗಳ ಬುಡದ ಮಣ್ಣು, ಗಿಡಗಳ ಅವಶೇಷಗಳನ್ನು ತಪಾಸಣೆಗೆ ಒಳಪಡಿಸಬೇಕಿದೆ. ಅದಕ್ಕೆ ಹೆಚ್ಚಿನ ಹಣ ಖರ್ಚಾಗುತ್ತದೆ. ರೈತ ಒಪ್ಪಿದರೇ ಕಾರ್ಯವನ್ನು ಕೈಗೊಳ್ಳಲಾಗುವುದು.

– ರಾಜೇಶ್, ಹಿರಿಯ ತೋಟಗಾರಿಕೆ ನಿರ್ದೇಶಕ.

ತೋಟಗಾರಿಕೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ತಪಾಸಣೆ ನಡೆಸಿ ಕೆಲವೊಂದು ಔಷಧ ಶಿಫಾರಸು ಮಾಡಿದ ಪರಿಣಾಮ ಅದನ್ನು ಸಹ ಮರಗಳ ಸುಳಿಗೆ ಸಿಂಪಡಿಸಲಾಗಿದೆ. ಈಗಾಗಲೇ 25ಕ್ಕೂ ಹೆಚ್ಚು ತೆಂಗಿನ ಮರಗಳು ಒಣಗಿವೆ. ಮುಂದಿನ ದಿನಗಳಲ್ಲಿ ಇಡೀ ತೆಂಗಿನ ತೋಟ ಒಣಗಿ ನನ್ನನ್ನು ಸಂಪೂರ್ಣವಾಗಿ ಮುಳುಗಿಸುತ್ತದೋ ಎಂಬ ಚಿಂತೆ ನಿತ್ಯವೂ ಕಾಡುತ್ತಿದೆ. ತೋಟಗಾರಿಕೆ ಇಲಾಖೆ ಹಿರಿಯ ಅಧಿಕಾರಿಗಳು, ವಿಜ್ಞಾನಿಗಳು ತೋಟಕ್ಕೆ ಭೇಟಿ ನೀಡಿ ಬೆಳೆ ಉಳಿಸಿಕೊಡಬೇಕು. ಕಿಡಿಗೇಡಿಗಳನ್ನು ಪತ್ತೆ ಹಚ್ಚಿ ಕಾನೂನು ಕ್ರಮ ಕೈಗೊಂಡು ನನಗೆ ನ್ಯಾಯ ಕೊಡಿಸುವ ನಿಟ್ಟಿನಲ್ಲಿ ಪೊಲೀಸರು ಕೂಡಲೇ ಕ್ರಮ ವಹಿಸಬೇಕೆಂದು ಅವರು ಮನವಿ ಮಾಡಿದರು.

# ಏಕೀಕೃತ ಭೂ ನಿರ್ವಹಣಾ ವ್ಯವಸ್ಥೆ ಯೋಜನೆ ಜಾರಿ

## ಅನೇಕ ಸೇವೆಗಳು ಒಂದೇ ಆನ್‌ಲೈನ್ ವೇದಿಕೆಯಲ್ಲಿ ಲಭ್ಯ

• ಪ್ರಜೋದಯ ವರದಿ

**ಬೆಂಗಳೂರು:** ಭೂಮಿಗೆ ಸಂಬಂಧಿಸಿದ ಸರ್ಕಾರದ ಎಲ್ಲ ಸೇವೆಗಳನ್ನು ಒಂದೇ ವ್ಯವಸ್ಥೆಯ ಅಡಿಯಲ್ಲಿ ತರಲು ಉದ್ದೇಶಿಸಿರುವ ಮಹತ್ವಾಕಾಂಕ್ಷಿ ಏಕೀಕೃತ ಭೂ ನಿರ್ವಹಣಾ ವ್ಯವಸ್ಥೆ ಯೋಜನೆ ಜಾರಿಗೆ ಸರ್ಕಾರ ಕ್ರಮ ಕೈಗೊಂಡಿದೆ.

ಈ ಸಂಬಂಧ ಮಂಗಳವಾರ ಕಂದಾಯ ಸಚಿವ ಕೃಷ್ಣಬೈರೇಗೌಡ ಅವರ ಅಧ್ಯಕ್ಷತೆಯಲ್ಲಿ ಕಂದಾಯ, ನಗರಾಭಿವೃದ್ಧಿ, ನೋಂದಣಿ, ಲೋಕೋಪಯೋಗಿ, ನೀರಾವರಿ, ವಸತಿ, ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸೇರಿದಂತೆ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳ ಸಭೆ ನಡೆಯಿತು.

ಯುಎಲ್‌ಎಂಎಸ್ ಎಂದರೇನು? ಯುಎಲ್‌ಎಂಎಸ್ ಎನ್ನುವುದು ಗಣಕೀಕೃತ ಏಕೀಕೃತ ವ್ಯವಸ್ಥೆಯಾಗಿದ್ದು, ಭೂಮಿಗೆ ಸಂಬಂಧಿಸಿದ ಸರ್ವೆ, ಭೂ ಪರಿವರ್ತನೆ, ಬಡಾವಣೆ ಪ್ಲಾನ್ ಮಂಜೂರಾತಿ, ಮನೆ ಪ್ಲಾನ್ ಅನುಮೋದನೆ, ನಿವೇಶನ ಮಾರಾಟ, ಇ-ಖಾತಾ ಸೃಜನೆ, ಆಸ್ತಿ ತೆರಿಗೆ ಸಂಗ್ರಹ, ಭೂಸ್ವಾಧೀನ ಸೇರಿದಂತೆ ಅನೇಕ ಸೇವೆಗಳನ್ನು ಒಂದೇ ಆನ್‌ಲೈನ್ ವೇದಿಕೆಯಲ್ಲಿ ಲಭ್ಯವಾಗುವಂತೆ ಮಾಡಲಿದೆ.



ಇದರಿಂದ ಜನರು ಬೇರೆ ಬೇರೆ ಕಚೇರಿಗಳಿಗೆ ಅಲೆದಾಡುವ ಅವಶ್ಯಕತೆ ಇಲ್ಲದೆ, ಒಂದೇ ಪೋರ್ಟಲ್ ಮೂಲಕ ಭೂ ಸೇವೆಗಳನ್ನು ಪಡೆಯಬಹುದಾಗಿದೆ. ಇದು ಮಹತ್ವದ ಆಡಳಿತ ಸುಧಾರಣಾ ಕ್ರಮವಾಗಿ ಪರಿಗಣಿಸ ಲಾಗಿದೆ. ಯುಎಲ್‌ಎಂಎಸ್ ಅಡಿಯಲ್ಲಿ ಭೂ ಮಾಲೀಕತ್ವದ ಮೂಲ ದಾಖಲೆಗಳ ದೃಢೀಕರಣ, ಸರ್ವೆ ನಕ್ಷೆಗಳ ಡಿಜಿಟಲ್ ಒದಗಿಸುವುದು, ಭೂ ಪರಿವರ್ತನೆ, ಕಟ್ಟಡ ನಕ್ಷೆ ಅನುಮೋದನೆ, ಖಾತೆ ಪಡೆಯುವ ಪ್ರಕ್ರಿಯೆಗಳು ನೇರ ಆನ್‌ಲೈನ್ ವ್ಯವಸ್ಥೆಗೆ ತರಲಾಗುತ್ತದೆ.

ಒಂದು ಹಂತದಿಂದ ಮತ್ತೊಂದು ಹಂತಕ್ಕೆ ಕಡತಗಳು ಸ್ವಯಂಚಾಲಿತವಾಗಿ ಸಾಗುವ ವ್ಯವಸ್ಥೆ ಇರುತ್ತದೆ. ಪ್ರತ್ಯೇಕ ಇಲಾಖೆಗೆ ಪ್ರತ್ಯೇಕ ಅರ್ಜಿ ಸಲ್ಲಿಸುವ ಅಗತ್ಯವಿರುವುದಿಲ್ಲ. ಕಾಲಮಿತಿಯೊಳಗೆ ತೀರ್ಮಾನ ಕೈಗೊಳ್ಳುವ ವ್ಯವಸ್ಥೆ ಇರುವುದರಿಂದ ವಿಳಂಬಕ್ಕೆ ಕಡಿವಾಣ ಬೀಳಲಿದೆ. ನಕಲಿ ದಾಖಲೆಗಳಿಗೆ ಕಡಿವಾಣ ಹಾಲಿ ವ್ಯವಸ್ಥೆಯಲ್ಲಿ ಕಾಗದ ಆಧಾರಿತ ದೃಢೀಕರಣದಿಂದ ದಾಖಲೆಗಳ ನೈಜತೆಯಲ್ಲಿ ಅನುಮಾನಗಳಿವೆ.

ಆದರೆ, ಯುಎಲ್‌ಎಂಎಸ್‌ನಲ್ಲಿ ಮೂಲ ದಾಖಲೆಗಳನ್ನು ನೇರವಾಗಿ ಅಧಿಕೃತ ಮೂಲಗಳಿಂದ ಪಡೆಯಲಾಗುತ್ತದೆ. ಸರ್ವೆ ನಕ್ಷೆ ಸೇರಿದಂತೆ ಎಲ್ಲಾ ದಾಖಲೆಗಳಿಗೆ ಸ್ಪಷ್ಟ ಜವಾಬ್ದಾರಿ ನಿಗದಿಯಾಗುತ್ತದೆ. ಇದರಿಂದ ನಕಲಿ, ಅಕ್ರಮ ಭೂ ವ್ಯವಹಾರಗಳು, ಮಾಲೀಕತ್ವದ ಗೊಂದಲಗಳು ಹಾಗೂ ವ್ಯಾಜ್ಯಗಳು ಕಡಿಮೆಯಾಗುವ ಸಾಧ್ಯತೆ ಇದೆ. ಅಮಾಯಕ ಜನರನ್ನು ವಂಚನೆಗಳಿಂದ ರಕ್ಷಿಸಲು ಪರಿಣಾಮಕಾರಿ ಹೆಜ್ಜೆಯಾಗಲಿದೆ.

# ಥ್ರೋಬಾಲ್ ಪಂದ್ಯಾವಳಿ: ಕೊಣನೂರು ಪ್ರಥಮ



• ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಮತ್ತು ವೃಂದ ಸಂಘಗಳು ಹಾಗೂ ಸ್ನೇಹಕೂಟ ವತಿಯಿಂದ ಮೊದಲನೇ ವರ್ಷದ ಶಿಕ್ಷಕಿಯರ ಥ್ರೋಬಾಲ್ ಲೀಗ್–2026 ಪಂದ್ಯಾವಳಿಯನ್ನು ಪಟ್ಟಣದ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜು ಮೈದಾನದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಪಂದ್ಯಾವಳಿಯಲ್ಲಿ ಅತ್ಯುತ್ತಮವಾಗಿ ಆಟವಾಡಿ ಪ್ರಥಮ ಬಹುಮಾನವಾಗಿ 5 ಸಾವಿರ ರೂ. ನಗದು, ಪ್ರಶಸ್ತಿಯೊಂದಿಗೆ ಕೊಣನೂರು ಹೋಬಳಿ ತಂಡ ಪಡೆದುಕೊಂಡಿತು. ದ್ವಿತೀಯ ಸ್ಥಾನವು 4 ಸಾವಿರ ನಗದು ಬಹುಮಾನ ಕಸಬಾ 2 ತಂಡಕ್ಕೆ ದೊರೆಯಿತು. ತೃತೀಯ ಬಹುಮಾನ 3 ಸಾವಿರ ನಗದು, ಪ್ರಶಸ್ತಿಯೊಂದಿಗೆ ದೊಡ್ಡ ಮಗ್ಗೆ ಹೋಬಳಿ ತಂಡದ ಮಹಿಳಾ ಶಿಕ್ಷಕಿಯರು ಪಡೆದುಕೊಂಡರು.

ತಾಲ್ಲೂಕು ಶಿಕ್ಷಕರ ಸಂಘದ ಅಧ್ಯಕ್ಷ ಮಲ್ಲಿಕಾರ್ಜುನ್ ಅವರ ನೇತೃತ್ವದಲ್ಲಿ ಆಯೋಜನೆಗೊಂಡಿದ್ದ ಪಂದ್ಯಾವಳಿಯಲ್ಲಿ ನೌಕರ ಸಂಘದ ಅಧ್ಯಕ್ಷ ಪುಟ್ಟರಾಜು ಅವರು ವಿಜೇತ ತಂಡಗಳಿಗೆ ಬಹುಮಾನ ವಿತರಣೆ ಮಾಡಿ ಶುಭಾಶಯ ಕೋರಿದರು.

ದೈಹಿಕ ಶಿಕ್ಷಕ ಬಸವರಾಜು, ನೌಕರರ ಸಂಘದ ಖಜಾಂಚಿ ಸದಾಶಿವ, ಶಿಕ್ಷಕರ ಸಂಘಟನೆಗಳ ಪದಾಧಿಕಾರಿಗಳಾದ ಅಶೋಕ್, ಕೇಶವಮೂರ್ತಿ, ಪರಮೇಶ್, ಕೀರ್ತಿರಾಜ್, ನಿರ್ವಾಣಪ್ಪ. ರಾಜೇಶ್, ಸೋಮಶೇಖರ, ಪ್ರಕಾಶ್, ಪ್ರೇಮಾ, ಲೋಕೇಶ್, ಮಹೇಶ್ ಇತರರಿದ್ದರು.

# ಪರಿಸರ ನಾಶಕ್ಕೆ ದುರಾಸೆ, ಕೊಳ್ಳುಬಾಕತನ ಸಂಸ್ಕೃತಿ ಕಾರಣ

## ಮಕ್ಕಳೇ ಪರಿಸರ ಸಂರಕ್ಷಣೆಯ ನಿಜವಾದ ಶಕ್ತಿ: ಡಾ.ಮಂಜುನಾಥ್

• ಪ್ರಜೋದಯ ವರದಿ

**ಹಾಸನ:** ಪರಿಸರ ನಾಶಕ್ಕೆ ಮುಖ್ಯ ಕಾರಣ ಪರಿಸರ ಶಿಕ್ಷಣದ ಕೊರತೆ, ಆಲಸ್ಯ, ಜಲ ಅನಕ್ಷರತೆ, ಸ್ವಾರ್ಥ, ದುರಾಸೆ ಹಾಗೂ ಕೊಳ್ಳುಬಾಕತನದ ಸಂಸ್ಕೃತಿ ಎಂದು ನಿಟ್ಟೂರು ಗ್ರಾಮದ ವೈದ್ಯಾಧಿಕಾರಿ ಹಾಗೂ ಬಿಜಿವಿಎಸ್ ಹಾಸನ ತಾಲ್ಲೂಕು ಅಧ್ಯಕ್ಷ ಡಾ. ಮಂಜುನಾಥ್ ಅಭಿಪ್ರಾಯಪಟ್ಟರು.

ನಗರದ ಹೌಸಿಂಗ್ ಬೋರ್ಡ್‌ನಲ್ಲಿರುವ ಸರ್ಕಾರಿ ಪ್ರೌಢಶಾಲೆಯಲ್ಲಿ ಹಾಸನ ತಾಲ್ಲೂಕು ಬಿಜಿವಿಎಸ್ ಮತ್ತು ಶಾಲೆಯ ಇಕೋ ಕ್ಲಬ್ ಸಹಯೋಗದಲ್ಲಿ ಆಯೋಜಿಸಿದ್ದ ಪರಿಸರ ಶಿಕ್ಷಣ ಮತ್ತು ಕಸದ ನಿರ್ವಹಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಕ್ಕಳೇ ಪರಿಸರ ಸಂರಕ್ಷಣೆಯ ನಿಜವಾದ ಶಕ್ತಿ, ಬಾಲ ಪರಿಸರ ಹೋರಾಟಗಾರ್ತಿ ಗ್ರೇಟಾ ತನ್ಬರ್ಗ್ ಅವರನ್ನು ಉದಾಹರಣೆಯಾಗಿ ಉಲ್ಲೇಖಿಸಿದರು. ಒಬ್ಬ ವ್ಯಕ್ತಿಗೆ ಸರಾಸರಿ 400 ಮರಗಳು ಬೇಕಾಗಿದ್ದರೆ, ಭಾರತದಲ್ಲಿ ಕೇವಲ 28 ಮರಗಳಷ್ಟೇ ಲಭ್ಯವಿವೆ. ಮರಗಳು ಇಂಗಾಲವನ್ನು ಶೋಷಿಸಿ ಆಮ್ಲಜನಕವನ್ನು ನೀಡುತ್ತವೆ, ವಾತಾವರಣವನ್ನು ತಂಪಾಗಿಸುತ್ತವೆ ಹಾಗೂ ಆಹಾರವನ್ನು ಒದಗಿಸುತ್ತವೆ. ಒಂದು ಪೂರ್ಣ ಬೆಳೆದ ಮರವು ಸುಮಾರು 27 ರಿಂದ 30 ಲಕ್ಷ ರೂ. ಮೌಲ್ಯದ ಆಮ್ಲಜನಕ ನೀಡುತ್ತದೆ ಎಂದು ತಿಳಿಸಿದರು.



ಕಸದ ನಿರ್ವಹಣೆ ಕುರಿತು ಮಾತನಾಡಿದ ಅವರು, ಕಸವೆಂದರೆ ಸಂಪೂರ್ಣ ವ್ಯರ್ಥವಲ್ಲ, ಸರಿಯಾದ ವಿಂಗಡಣೆ ಮಾಡಿದರೆ ಅದು ಮತ್ತೊಬ್ಬರಿಗೆ ಉಪಯುಕ್ತವಾಗಬಹುದು. ಕೇವಲ ಜೂನ್ 5ರ ಪರಿಸರ ದಿನದಂದು ಗಿಡ ನೆಡುವುದರಿಂದ ಮಾತ್ರ ಸಾಲದು; ನೆಟ್ಟ ಗಿಡಗಳನ್ನು ಕಾಪಾಡಿಕೊಳ್ಳುವುದು ಅಗತ್ಯ ಎಂದರು.

ನಗರದ ಸುಶಿಕ್ಷಿತರೂ ಕಸವನ್ನು ಎಲ್ಲೆಂದರಲ್ಲಿ ಎಸೆಯುವುದು, ಸುಡುವುದು ಹಾಗೂ ವಿಂಗಡಣೆ ಮಾಡದಿರುವುದು ಬೇಸರದ ಸಂಗತಿ ಎಂದು ಹೇಳಿದರು. ''ಜನರಿಗೆ ಸಾಮಾನ್ಯ ಶಿಕ್ಷಣವಿದೆ, ಆದರೆ ಪರಿಸರ ಶಿಕ್ಷಣದ ಅರಿವು ಕಡಿಮೆ'' ಎಂದು ಅವರು ವಿಷಾದ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದ ಬಿಜಿವಿಎಸ್ ಸದಸ್ಯೆ ಮೋನಿಕಾ ಅವರು ಪ್ಲಾಸ್ಟಿಕ್ ಬಂಧನ ಮತ್ತು ಪರಿಸರ ಸ್ಪಂದನ ಕುರಿತು ಮಾತನಾಡಿ, ಪ್ಲಾಸ್ಟಿಕ್ ವಿಂಗಡಣೆ ಹಾಗೂ ಪುನರ್ ಬಳಕೆ ಕುರಿತು ಪ್ರಾತ್ಯಕ್ಷಿಕೆ ನೀಡಿದರು.

ಅಗಸ್ತ್ಯ ಸಂಸ್ಥೆಯ ರಾಮಜಿ ಅವರು ಪ್ಲಾಸ್ಟಿಕ್ ಕುರಿತು ಅರಿವು ಮೂಡಿಸುವ ಅಭ್ಯಾಸ ಪುಸ್ತಕವನ್ನು ವಿದ್ಯಾರ್ಥಿಗಳಿಗೆ ವಿತರಿಸಿದರು.

ಶಾಲೆಯ ಮುಖ್ಯ ಶಿಕ್ಷಕಿ ರಾಧಾ ಎನ್.ಎಸ್., ಶಿಕ್ಷಕಿ ಹಾಗೂ ಬಿಜಿವಿಎಸ್ ತಾಲ್ಲೂಕು ಕಾರ್ಯದರ್ಶಿ ಲೋಲಾಕ್ಷಿ, ಶಿಕ್ಷಕರಾದ ರವೀಂದ್ರ, ಮೀನಾಕ್ಷಿ, ವಸಂತ, ಮೀನಾಕ್ಷಿ, ಬೋರಮ್ಮ, ಚಂದ್ರಕಲಾ ಇದ್ದರು.

# ಕೈ ಪಕ್ಷದ ಬಲವರ್ಧನೆಗೆ ಕಾರ್ಯಕರ್ತರ ಸಂಘಟನೆ

• ಪ್ರಜೋದಯ ವರದಿ

**ಹಳೇಬೀಡು:** ಮುಂಬರುವ ಪಂಚಾಯಿತಿ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷವನ್ನು ಬಲಪಡಿಸುವ ನಿಟ್ಟಿನಲ್ಲಿ ಕಾರ್ಯಕರ್ತರ ಸಂಘಟನೆ ಮಾಡಲಾಗುತ್ತಿದ್ದು, ಬೇಲೂರು ವಿಧಾನ ಸಭಾ ಕ್ಷೇತ್ರದಲ್ಲಿ ಬೂತ್ ಮಟ್ಟದಿಂದಲೇ ಕಾರ್ಯಕರ್ತರಿಗೆ ಶಕ್ತಿ ತುಂಬಲಾಗುತ್ತಿದೆ ಎಂದು ಮಾಜಿ ಸಚಿವ ಬಿ.ಶಿವರಾಂ ಹೇಳಿದರು.

ಹಳೇಬೀಡಿನ ಖಾಸಗಿ ಹೋಟೇಲ್ ಬಳಿ ನಡೆದ ಜಾವಗಲ್, ಹಳೇಬೀಡು ಹೋಬಳಿ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಪಕ್ಷದ ಬಲವರ್ಧನೆಗಾಗಿ ಬೂತ್ ಏಜೆಂಟರುಗಳನ್ನು ನೇಮಕ ಮಾಡಲಾಗುತ್ತಿದೆ. ಬೇಲೂರು ವಿಧಾನ ಸಭಾ ಕ್ಷೇತ್ರದಲ್ಲಿ ನಿರಂತರ ಪ್ರವಾಸ ನಡೆಸುತ್ತಿದ್ದೇವೆ. ಕಾರ್ಯಕರ್ತರಿಗೆ ಹತ್ತಿರದವರಾಗಿದ್ದು, ಅವರೊಂದಿಗೆ ಅಭಿವೃದ್ಧಿಯ ಕುರಿತು ಮಾತುಕತೆ ನಡೆಸುತ್ತಿದ್ದೇವೆ ಎಂದರು.



ಮುಂದಿನ ಪಂಚಾಯಿತಿ ಚುನಾವಣೆಯಲ್ಲಿ ಕಾಂಗ್ರೆಸ್ಸಿನಿಂದ ಸ್ಪರ್ಧಿಸಲು ಸಾಕಷ್ಟು ಮಂದಿ ಆಸಕ್ತರಾಗಿದ್ದಾರೆ. ಈ ಎಲ್ಲ ಬೆಳವಣಿಗೆಯಿಂದ ಕಾಂಗ್ರೆಸ್ ಪಕ್ಷ ಲೋಕಸಭಾ ಹಾಗೂ ವಿಧಾನಸಭಾ ಚುನಾವಣೆಯಲ್ಲಿ ಜಯಭೇರಿ ಬಾರಿಸುವ ಲಕ್ಷಣ ಕಂಡು ಬಂದಿದೆ. ಬೇಲೂರು ವಿಧಾನಸಭಾ ಕ್ಷೇತ್ರದಲ್ಲಿ ವಿದ್ಯುತ್ ಪೂರೈಕೆಯ ಉನ್ನತೀಕರಣಕ್ಕಾಗಿ 133 ಕೋಟಿ ರೂ. ಅನುದಾನ ಮಂಜೂರು ಮಾಡಿಸಿದ್ದೇವೆ. ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. ಅಡಗೂರಿನಲ್ಲಿ ವಿದ್ಯುತ್ ವಿತರಣಾ ಕೇಂದ್ರ ಆರಂಭಿಸಲು 20 ಎಕರೆ ಜಾಗದ ಸರ್ವೆ ಕೆಲಸ ನಡೆಯುತ್ತಿದೆ ಎಂದರು.

ಹೆಬ್ಬಾಳು ಜಿಲ್ಲಾ ಪಂಚಾಯಿತಿ ಮುಖಂಡ ಎಚ್.ಬಿ.ಚಂದ್ರಶೇಖರ್ ಅವರು ಮಾತನಾಡಿ, ಸಂಸದ ಶ್ರೇಯಸ್ ಪಟೇಲ್ ಹಾಗೂ ಮಾಜಿ ಸಚಿವ ಬಿ.ಶಿವರಾಂ ಬೇಲೂರು ವಿಧಾನಸಭಾ ಕ್ಷೇತ್ರದ ಅಭಿವೃದ್ದಿಯಲ್ಲಿ ಹೆಚ್ಚಿನ ಆಸಕ್ತಿ ವಹಿಸಿದ್ದಾರೆ. ಇಬ್ಬರು ನಾಯಕರು ಜನರಿಗೆ ಹತ್ತಿರದಲ್ಲಿದ್ದು ಕೆಲಸ ಮಾಡುತ್ತಿರುವುದರಿಂದ ನಾವು ಕೇಳುವ ಅಭಿವೃದ್ಧಿ ಕೆಲಸ ಸರಾಗವಾಗಿ ಸಾಗುತ್ತಿವೆ ಎಂದು ಹೇಳಿದರು.

ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ದೇಶಾಣಿ ಆನಂದ್, ತಾಲ್ಲೂಕು ಯುವ ಕಾಂಗ್ರೆಸ್ ಅಧ್ಯಕ್ಷ ಎಚ್.ಎನ್.ಶರತ್, ಕಾಂಗ್ರೆಸ್ ವೀಕ್ಷಕ ವಿಜಯ್ ಕುಮಾರ್, ಮುಖಂಡರಾದ ಬಿ.ಎಂ.ಸಂತೋಷ್, ಶಶಿಧರ, ಕೆ.ಎಂ. ವೀರಣ್ಣ ಭಾಗವಹಿಸಿದ್ದರು.

### ವಿವಿಧ ಯೋಜನೆಗಳಿಗೆ ಅರ್ಜಿ ಆಹ್ವಾನ

**ಹಾಸನ:** ಸಕಲೇಶಪುರ ಪುರಸಭಾ ವತಿಯಿಂದ ರಾಜ್ಯ ಹಣಕಾಸು ಯೋಜನೆಯ ಶೇ.24.10, ಶೇ.7.25% ಮತ್ತು ಶೇ.5.00 ರ ನಿಧಿಯಡಿ ವಿವಿಧ ಕಾರ್ಯಕ್ರಮಗಳಿಗೆ ಅರ್ಹ ಅಭ್ಯರ್ಥಿಗಳಿಂದ ಸೂಕ್ತ ದಾಖಲೆಗಳೊಂದಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಪರಿಶಿಷ್ಟ ಜಾತಿಯ ಫಲಾನುಭವಿಗಳಿಗೆ ಸ್ವಯಂ ಉದ್ಯೋಗಕ್ಕಾಗಿ ಸಹಾಯಧನ, ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಸ್ವಯಂ ಉದ್ಯೋಗಕ್ಕಾಗಿ ಸಹಾಯಧನ, ಶೇ.7.5% ರ ನಿಧಿಯಡಿ ಹಿಂದುಳಿದ ಇತರೆ ಜನಾಂಗದವರ ಸ್ವಯಂ ಉದ್ಯೋಗಕ್ಕಾಗಿ ಸಹಾಯಧನ, ಶೇ.5% ರ ನಿಧಿಯಡಿ ಫಲಾನುಭವಿಗಳಿಗೆ ಸ್ವಯಂ ಉದ್ಯೋಗಕ್ಕಾಗಿ ಸಹಾಯಧನಕ್ಕಾಗಿ ಅರ್ಜಿಗಳನ್ನು ಆಸಕ್ತರು ಮಾ.10ರೊಳಗೆ ಅರ್ಜಿ ಸಲ್ಲಿಸಬಹುದು.

# ಕಾರು ಕದ್ದು ಪರಾರಿಯಾಗುವ ವೇಳೆ ವಾಹನಕ್ಕೆ ಡಿಕ್ಕಿ

## ಮಗುಚಿ ಬಿದ್ದ ಹಾಲಿನ ವಾಹನ: ಇಬ್ಬರಿಗೆ ತೀವ್ರ ಪೆಟ್ಟು

• ಪ್ರಜೋದಯ ವರದಿ

**ಬಾಣಾವರ:** ಕಾರು ಕಳವು ಮಾಡಿಕೊಂಡು ಹೋಗುತ್ತಿದ್ದ ವ್ಯಕ್ತಿ, ಹಾಲು ಸಾಗಿರುವ ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ ವಾಹನದಲ್ಲಿದ್ದ ಇಬ್ಬರು ಗಂಭೀರವಾಗಿ ಗಾಯಗೊಂಡಿರುವ ಘಟನೆ ಪಟ್ಟಣದ ರಾಷ್ಟ್ರೀಯ ಹೆದ್ದಾರಿ –206ರ ಗವಿಮಠ ಮುಂಭಾಗದ ಮೇಲ್ಸೇತುವೆ ಬಳಿ ಮಂಗಳವಾರ ನಡೆದಿದೆ.

ತೆಲಂಗಾಣ ಮೂಲದ ಮುದಾಸಿರ್ ದಾವುದ್ ಎಂಬಾತನೇ ಕಾರು ಕಳವು ಮಾಡಿಕೊಂಡು ಹೋಗುತ್ತಿದ್ದ ಆರೋಪಿ. ಸ್ಥಳೀಯರಾದ ಕುಮಾರ ಸ್ವಾಮಿ, ತೇಜು ಗಾಯಾಳುಗಳು. ಬಾಣಾವರ ಹೋಬಳಿ ಬಸವನಹಳ್ಳಿ ಗೇಟ್ ಸಮೀಪದಲ್ಲಿರುವ ಮಲೆನಾಡು ಚಹಾ ಅಂಗಡಿ ಮಾಲೀಕ ಶ್ರೀಧರ್ ಅವರು ತಮ್ಮ ಅಂಗಡಿ ಬಳಿ ಕಾರು ನಿಲ್ಲಿಸಿ ಕೀ ಅಲ್ಲೇ ಬಿಟ್ಟು ಹೋಗಿದ್ದರು. ಇದನ್ನು ಗಮನಿಸಿದ ಆರೋಪಿ ಮುದಾಸಿರ್ ದಾವುದ್, ಕಾರನ್ನು ಕಳವು ಮಾಡಿಕೊಂಡು ಪರಾರಿಯಾಗುತ್ತಿದ್ದ. ಈ ವೇಳೆ ವೇಗವಾಗಿ ಹೋಗುತ್ತಿದ್ದ ವೇಳೆ ಗವಿಮಠ ಮುಂಭಾಗದ ಮೇಲ್ಸೇತುವೆ ಕೆಳಗೆ ಬರುತ್ತಿದ್ದ ಹಾಲು ಸಾಗಿಸುತ್ತಿದ್ದ ವಾಹನಕ್ಕೆ ಡಿಕ್ಕಿ ಹೊಡೆದಿದ್ದಾನೆ.



ವಾಹನ ಮಗುಚಿ ಬಿದ್ದ ಪರಿಣಾಮ ಕುಮಾರ ಸ್ವಾಮಿ, ತೇಜು ಗಂಭೀರವಾಗಿ ಗಾಯಗೊಂಡಿದ್ದು, ಹಾಸನದ ಹಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಡಿಕ್ಕಿಯ ರಭಸಕ್ಕೆ ಕಾರು ನಜ್ಜುಗುಜ್ಜಾಗಿದೆ. ಈ ಸಂಬಂಧ ಬಾಣಾವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಸ್ಕೌಟ್ಸ್- ಗೈಡ್ಸ್‌ನಿಂದ ಯುವಕರಲ್ಲಿ ದೇಶಾಭಿಮಾನ

• ಪ್ರಜೋದಯ ವರದಿ

**ಅರಸೀಕೆರೆ:** ಶಿಸ್ತು, ಸಂಯಮವನ್ನು ಕಾಯ್ದುಕೊಳ್ಳುವ ಜೊತೆಗೆ ಯುವಕರಲ್ಲಿ ದೇಶ ಅಭಿಮಾನ ಹಾಗೂ ಸೇವಾ ಮನೋಭಾವವನ್ನು ಬೆಳೆಸುವ ನಿಟ್ಟಿನಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಶ್ರಮಿಸುತ್ತಾ ಬಂದಿದೆ ಎಂದು ಸ್ಕೌಟ್ ಮಾಸ್ಟರ್ ಸತೀಶ್ ಕಲ್ಯಾಣಿ ಅವರು ಹೇಳಿದರು.

ತಾಲ್ಲೂಕಿನ ಬಾಣಾವರ ಪೇಟೆ ಸರ್ಕಾರಿ ಶಾಲೆಯಲ್ಲಿ ಆಯೋಜಿಸಿದ್ದ ಸ್ಕೌಟ್ ಅಂಡ್ ಗೈಡ್ಸ್‌ನ ಸಂಸ್ಥಾಪನ ದಿನ ಮತ್ತು ಚಿಂತಕರ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಪಠ್ಯ ಪುಸ್ತಕದ ಶಿಕ್ಷಣ ತಮ್ಮ ಜ್ಞಾನಾರ್ಜನೆಯನ್ನು ಹೆಚ್ಚಿಸಿದರೆ, ಸ್ಕೌಟ್ ಅಂಡ್ ಗೈಡ್ಸ್ ವತಿಯಿಂದ ದೊರೆಯುವ ಶಿಕ್ಷಣ ನಿಮ್ಮ ಬದುಕನ್ನು ವಿಕಾಸ ಗೊಳಿಸುತ್ತದೆ ಎಂದು ಅವರು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.



ಶಾಲೆಯ ಮುಖ್ಯ ಶಿಕ್ಷಕಿ ಗಿರಿಜಮ್ಮ ಅವರು ಮಾತನಾಡಿ, ವಿದ್ಯಾರ್ಥಿಗಳು ಬಾಲ್ಯದಿಂದಲೇ ವಿದ್ಯಾಭ್ಯಾಸದ ಜೊತೆಗೆ ಗುರು– ಹಿರಿಯರನ್ನು ಗೌರವಿಸುವ ಸಮಾಜಮುಖಿ ಸೇವೆಯಲ್ಲಿ ತೊಡಗಿಸಿಕೊಳ್ಳುವ ಮನಸ್ಥಿತಿಯನ್ನು ಬೆಳೆಸಿಕೊಳ್ಳಬೇಕು. ಆಗ ಮಾತ್ರ ತಮ್ಮ ಬದುಕು ಸಾರ್ಥಕವೆನಿಸಿಕೊಳ್ಳುತ್ತದೆ ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಗೈಡ್ ಕ್ಯಾಪ್ಟನ್ ರಾಧಾಮಣಿ ಅವರು ಕಾರ್ಯಕ್ರಮ ನಿರೂಪಿಸಿದರು. ಶಿಕ್ಷಕಿ ಆರ್.ಯಶೋಧ, ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳು ಹಾಗೂ ಇನ್ನಿತರರು ಉಪಸ್ಥಿತರಿದ್ದರು.

# ಸಹಕಾರ ಸಂಘಗಳಲ್ಲಿ ಅಧ್ಯಕ್ಷರು– ಸಿಇಓಗಳ ಪಾತ್ರ ಮುಖ್ಯ

## ಒಬ್ಬರು ಎಲ್ಲರಿಗಾಗಿ, ಎಲ್ಲರೂ ಒಬ್ಬರಿಗಾಗಿ ಸಹಕಾರ ಸಂಘಗಳ ಮೂಲ ಧ್ಯೇಯ

• ಪ್ರಜೋದಯ ವರದಿ

**ಹಾಸನ:** ಸಹಕಾರ ಸಂಘಗಳಲ್ಲಿ ಅಧ್ಯಕ್ಷರು ಮತ್ತು ಸಿಇಓ ಪಾತ್ರ ಮುಖ್ಯವಾಗಿದ್ದು, ಸಂಘಗಳ ಅಭಿವೃದ್ಧಿಗೆ ಸರ್ಕಾರದಿಂದ ಜಾರಿಗೊಳಿಸಿರುವ ವಿವಿಧ ಯೋಜನೆಗಳ ಮಾಹಿತಿ ಪಡೆದು ಅದನ್ನು ಸಂಘಗಳ ಸದಸ್ಯರುಗಳಿಗೆ ಜಾರಿಗೊಳಿಸಿ ಸಹಕಾರ ಸಂಘಗಳ ಅಭಿವೃದ್ಧಿ ಶ್ರಮಿಸಬೇಕು ಎಂದು ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಎಸ್.ಎನ್. ಪ್ರಕಾಶ್ ತಿಳಿಸಿದರು.

ಆಲೂರು ಮತ್ತು ಸಕಲೇಶಪುರ ತಾಲ್ಲೂಕಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಏರ್ಪಡಿಸಿದ್ದ ಒಂದು ದಿನದ ವಿಶೇಷ ತರಬೇತಿ ಶಿಬಿರದ ಅಧ್ಯಕ್ಷತೆಯನ್ನು ವಹಿಸಿ ಅವರು ಮಾತನಾಡಿ, ಸಹಕಾರ ಸಂಘಗಳ ಮೂಲ ಧ್ಯೆಯವೆಂದರೆ ಒಬ್ಬರು ಎಲ್ಲರಿಗಾಗಿ, ಎಲ್ಲರೂ ಒಬ್ಬರಿಗಾಗಿ ಎಂಬುದಾಗಿದೆ. ರಾಜಕೀಯ ಪ್ರೇರಿತರಾಗಿ ಕಾರ್ಯ ನಿರ್ವಹಿಸದೆ ಸೇವಾ ಮನೋಭಾವನೆಯಿಂದ ಕೆಲಸ ನಿರ್ವಹಿಸಬೇಕೆಂದು ಮನವಿ ಮಾಡಿದರು.



ಜಿಲ್ಲಾ, ಸಹಕಾರ ಕೇಂದ್ರ ಬ್ಯಾಂಕಿನ ನಿರ್ದೇಶಕ ಕಬ್ಬಿನಹಳ್ಳಿ ಜಗದೀಶ್ ಅವರು ಮಾತನಾಡಿ, ಸಹಕಾರ ಕ್ಷೇತ್ರ ವಿಸ್ತಾರವಾದದ್ದು, ಕೇಂದ್ರದಲ್ಲಿ ಸಹಕಾರ ಕ್ಷೇತ್ರವು ತನ್ನದೇ ಆದ ಖಾತೆಯನ್ನು ಅಮಿತ್‌ಷಾರಂತಹ ಸಹಕಾರಿ ನಾಯಕರನ್ನು ಹೊಂದಿರುವಂತಹ ಸಹಕಾರ ಕ್ಷೇತ್ರ ಇಂದು ಸಹಕಾರಿಗಳು ಸಕ್ರಿಯವಾಗಿ ತನ್ನದೇ ಆದಂತಹ ಕರ್ತವ್ಯಗಳನ್ನು ನಿರ್ವಹಿಸುವುದು ಅಗತ್ಯವೆಂದರು.

ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ಮತ್ತೋರ್ವ ನಿರ್ದೇಶಕ ಕೆ.ಎಸ್. ಮಂಜೇಗೌಡ ಅವರು ಮಾತನಾಡುತ್ತಾ, ಸಹಕಾರ ಕ್ಷೇತ್ರದಲ್ಲಿ ನಾನಾ ರೀತಿಯಾದ ಸಹಕಾರ ಸಂಘಗಳು ತನ್ನದೇ ಆದಂತಹ ಸೇವೆಗಳನ್ನು ನೀಡುತ್ತಾ ಬರುತ್ತಿವೆ. ಅದರ ಸದುಪಯೋಗ ಸಹಕಾರ ಸಂಘಗಳ ಸದಸ್ಯರುಗಳಿಗೆ ದೊರಕುವಲ್ಲಿ ಸಂಘದ ಅಧ್ಯಕ್ಷರು ಮತ್ತು ಸಿಇಓಗಳು ಸಕ್ರಿಯವಾಗಿ ಪಾಲ್ಗೊಂಡು ಕಾರ್ಯಗತ ಗೊಳಿಸಬೇಕೆಂದು ಅವರು ಮನವಿ ಮಾಡಿದರು.

ಹಾಸನ ಜಿಲ್ಲಾ ಸಹಕಾರ ಒಕ್ಕೂಟದ ನಿರ್ದೇಶಕರಾದ ವಿ.ಎನ್. ರಾಜಣ್ಣ, ಉಪಾಧ್ಯಕ್ಷ ಡಿ.ಪಿ.ಸೋಮೇಗೌಡ, ನಿರ್ದೇಶಕರುಗಳಾದ ಪ್ರವೀಣ್, ಸೋಮಣ್ಣ, ಹಾಲು ಒಕ್ಕೂಟದ ನಿಂಗರಾಜು ಇದ್ದರು.

### ಪರೀಕ್ಷಾ ಕೇಂದ್ರದ ಸುತ್ತ ನಿಷೇದಾಜ್ಞೆ

**ಹಾಸನ:** 2026 ನೇ ಸಾಲಿನಲ್ಲಿ ದ್ವಿತೀಯ ಪಿ.ಯು.ಸಿ ಪರೀಕ್ಷೆಗಳು ಫೆ.28 ರಿಂದ ಮಾ.17 ರವರೆಗೆ ಹಾಸನ ವ್ಯಾಪ್ತಿಯಲ್ಲಿ 33 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದ್ದು, ಸದರಿ ಪರೀಕ್ಷೆ ನಡೆಯುವ ದಿನದಂದು ಪರೀಕ್ಷಾ ಕೇಂದ್ರಗಳ 200 ಮೀಟರ್ ವ್ಯಾಪ್ತಿಯಲ್ಲಿನ ಜೆರಾಕ್ಸ್ /ಸೈಬರ್/ಕಂಪ್ಯೂಟರ್ ಅಂಗಡಿಗಳನ್ನು ಮುಚ್ಚುವಂತೆ ಮತ್ತು ಪರೀಕ್ಷಾರ್ಥಿಗಳು ಹಾಗೂ ಪರೀಕ್ಷೆ ಕಾರ್ಯಕ್ಕೆ ನೇಮಕಗೊಂಡ ಅಧಿಕಾರಿಗಳು/ಸಿಬ್ಬಂದಿಗಳು ಹೊರತುಪಡಿಸಿ ಇತರರು ಯಾರು ನಿಷೇಧಿತ ಪ್ರದೇಶದೊಳಗೆ ಪ್ರವೇಶಿಸುವನ್ನು ನಿರ್ಬಂಧಿಸಿ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ 2023ರ ಸೆಕ್ಷನ್ 163 ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಜಿಲ್ಲಾಧಿಕಾರಿ ಕೆ.ಎಸ್ ಲತಾ ಕುಮಾರಿ ಅವರು ನಿಷೇದಾಜ್ಞೆ ಜಾರಿಗೊಳಿಸಿ ಆದೇಶಿಸಿದ್ದಾರೆ.

## ಮಕ್ಕಳಿಗೆ ಶಿಕ್ಷಣ ಕೊಡಿಸುವಲ್ಲಿ ಪೋಷಕರು ಹೆಚ್ಚು ಆಸಕ್ತಿ ವಹಿಸಬೇಕು: ಕುಸುಮಾ ಬಾಲಕೃಷ್ಣ

# ಉತ್ತಮ ಶಿಕ್ಷಣದಿಂದ ಮಕ್ಕಳ ಬದುಕು ಸದೃಢ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ಶಿಕ್ಷಣ ಮಕ್ಕಳ ಮೂಲಭೂತ ಹಕ್ಕು, ಯಾವುದೇ ಮಗುವೂ ಶಿಕ್ಷಣದಿಂದ ವಂಚಿತವಾಗಬಾರದು, ಉತ್ತಮ ಶಿಕ್ಷಣದಿಂದ ಮಾತ್ರ ಮಕ್ಕಳು ಮುಂದೆ ಸದೃಢವಾದ ಬದುಕು ಕಟ್ಟಿಕೊಳ್ಳಲು ಸಾಧ್ಯವೆಂದು ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಕುಸುಮಾ ಬಾಲಕೃಷ್ಣ ಹೇಳಿದರು.

ತಾಲ್ಲೂಕಿನ ನುಗ್ಗೇಹಳ್ಳಿ ಹೋಬಳಿ ಕೇಂದ್ರದಲ್ಲಿರುವ ಶ್ರೀ ಗೋಕುಲ ವಿದ್ಯಾ ಸಂಸ್ಥೆ ಹಾಗೂ ಗೋಕುಲ ಅಕಾಡೆಮಿ ವತಿಯಿಂದ ಗೋಧೂಳಿ ಪ್ರತಿಭಾ ಪಯಣ 2025–26 ನೇ ಸಾಲಿನ 30ನೇ ವರ್ಷದ ಶಾಲಾ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿ ಮಗುವು ಶಿಕ್ಷಣ ಪಡೆಯುವಂತಾಗಬೇಕು. ಮಕ್ಕಳಿಗೆ ಶಿಕ್ಷಣ ಕೊಡಿಸುವಲ್ಲಿ ಪೋಷಕರು ಹೆಚ್ಚು ಆಸಕ್ತಿ ವಹಿಸಬೇಕು. ಕೇಂದ್ರ ಹಾಗೂ ರಾಜ್ಯ ಸರ್ಕಾರ ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆ ತರಲು ಹಾಗೂ ಗುಣಮಟ್ಟದ ಶಿಕ್ಷಣ ನೀಡಲು ಅನೇಕ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ ಎಂದು ತಿಳಿಸಿದರು.

ಈ ಭಾಗದಲ್ಲಿ ಕಳೆದ 30 ವರ್ಷಗಳಿಂದ ಶ್ರೀ ಗೋಕುಲ ವಿದ್ಯಾ ಸಂಸ್ಥೆ ಕಡಿಮೆ ಶುಲ್ಕ ಪಡೆದು ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುತ್ತಿದೆ. ಶಾಲೆಗೆ ಉತ್ತಮ ರಸ್ತೆಯ ಅವಶ್ಯಕತೆ ಇದ್ದು, ಜೊತೆಗೆ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸುವಂತೆ ಸಂಸ್ಥೆಯ ಕಾರ್ಯದರ್ಶಿಗಳು ಮನವಿ ಮಾಡಿದ್ದು, ಈ ಬಗ್ಗೆ ಶಾಸಕರಿಗೆ ತಿಳಿಸಿ ಅನುದಾನ ಕೊಡಿಸುವುದಾಗಿ ಅವರು ಭರವಸೆ ನೀಡಿದರು.

ರಾಜ್ಯ ಸಹಕಾರ ಸಂಘಗಳ ಸಹಾಯಕ ನಿವೃತ್ತ ನಿಬಂಧಕರಾದ ನರಸಿಂಹಮೂರ್ತಿ ಮಾತನಾಡಿ, ಕಳೆದ 30 ವರ್ಷಗಳಿಂದ ಗೋಕುಲ ವಿದ್ಯಾ ಸಂಸ್ಥೆ ವತಿಯಿಂದ ಗುಣಮಟ್ಟದ ಆಂಗ್ಲ ಮಾಧ್ಯಮ ಶಿಕ್ಷಣ ನೀಡಲಾಗುತ್ತಿದೆ. ಮಕ್ಕಳಿಗೆ ಕಲಿಕೆಯ ಜೊತೆಗೆ ವಿಭಿನ್ನ ಕಾರ್ಯಕ್ರಮಗಳನ್ನು ಸಂಸ್ಥೆ ಆಯೋಜಿಸುವ ಮೂಲಕ ಮಕ್ಕಳಲ್ಲಿರುವ ಪ್ರತಿಭೆಯನ್ನು ಹೊರತೆಗೆಯುವ ಕೆಲಸವನ್ನು ಮಾಡಲಾಗುತ್ತಿದೆ. ಈ ಶಾಲೆಯಲ್ಲಿ ಓದಿದ ಅನೇಕ ಹಳೆಯ ವಿದ್ಯಾರ್ಥಿಗಳು ಇಂದು ಭಾರತ ದೇಶವಲ್ಲದೆ ಜರ್ಮನಿ, ಅಮೆರಿಕ, ಇಂಗ್ಲೆಂಡ್ ದೇಶಗಳಲ್ಲಿ ಕೆಲ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯುತ್ತಿದ್ದಾರೆ. ಇನ್ನು ಕೆಲವು ಪ್ರತಿಭಾವಂತ ವಿದ್ಯಾರ್ಥಿಗಳು ಪ್ರತಿಷ್ಠಿತ ಕಂಪನಿಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಐಎಎಸ್, ಐಪಿಎಸ್ ನಂತಹ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಗ್ರಾಮೀಣ ಪ್ರದೇಶದ ಮಕ್ಕಳು ಹೆಚ್ಚು ಗಮನ ಹರಿಸಿದರೆ ಯಶಸ್ಸು ಸಾಧಿಸಬಹುದು ಎಂದರು.



ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ನಾರಾಯಣ್ ಮಾತನಾಡಿ, ನವೋದಯ ಕೇಂದ್ರೀಯ ಪರೀಕ್ಷೆಯಲ್ಲಿ ನಮ್ಮ ವಿದ್ಯಾ ಸಂಸ್ಥೆಯ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ತೇರ್ಗಡೆ ಹೊಂದುತ್ತಿದ್ದಾರೆ. ಹಲವು ಖಾಸಗಿ ಶಾಲೆಗಳ ಪೈಪೋಟಿ ನಡುವೆಯೂ ಶಾಲೆಯ ಶೈಕ್ಷಣಿಕ ಗುಣಮಟ್ಟ ಎಂದಿಗೂ ಕುಸಿದಿಲ್ಲ, ಈ ಭಾಗದ ಜನರಿಗೆ ಗೋಕುಲ ವಿದ್ಯಾ ಸಂಸ್ಥೆಯ ಬಗ್ಗೆ ಹೆಚ್ಚು ನಂಬಿಕೆ ಇರುವ ಕಾರಣದಿಂದಲೇ ಪ್ರತಿ ವರ್ಷವೂ ಮಕ್ಕಳ ದಾಖಲಾತಿ ಹೆಚ್ಚಳವಾಗುತ್ತಿದೆ ಎಂದರು.

ಎಪಿಎಂಸಿ ಮಾಜಿ ಅಧ್ಯಕ್ಷ ದೊರೆಸ್ವಾಮಿ, ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಪಟೇಲ್‌ಕುಮಾರ್, ನಿರ್ದೇಶಕ ಹುಲಿಕೆರೆ ಸಂಪತ್ ಕುಮಾರ್, ತಾಪಂ ಮಾಜಿ ಸದಸ್ಯ ಬೆಳಗಿಹಳ್ಳಿ ಪುಟ್ಟಸ್ವಾಮಿ, ಹೋಬಳಿ ಶಿಕ್ಷಣ ಸಂಯೋಜಕ ಕರಿಯಪ್ಪಗೌಡ, ಸಿಆರ್‌ಪಿಗಳಾದ ಮಂಜೇಗೌಡ, ಅಶೋಕ್ ಸುಂದರನ್, ಶ್ರೀಕಾಂತ್, ಮಾಜಿ ಗ್ರಾಪಂ ಅಧ್ಯಕ್ಷರಾದ ಕುಳ್ಳೇಗೌಡ, ನಟರಾಜ್ ಯಾದವ್, ಹೊನ್ನೇಗೌಡ, ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎನ್.ಬಿ. ಉಮೇಶ್, ಗೌರವಾಧ್ಯಕ್ಷ ಎಚ್. ಎಂ.ಗೋಪಾಲ್ ಇನ್ನಿತರರಿದ್ದರು.

# ಬೀದಿನಾಟಕ ಪ್ರದರ್ಶನಕ್ಕೆ ದರಪಟ್ಟಿ ಅರ್ಜಿ ಆಹ್ವಾನ

• ಪ್ರಜೋದಯ ವರದಿ

**ಹಾಸನ:** ಎಸ್.ಸಿ.ಎಸ್.ಪಿ ಟಿ.ಸಿ.ಪಿ ಯೋಜನೆಯಡಿ ಬಾಲ್ಯಾವಸ್ಥೆ ಮತ್ತು ಕಿಶೋರಾವಸ್ಥೆ ಕಾರ್ಮಿಕ ಪದ್ದತಿ ನಿಷೇಧದ ಬಗ್ಗೆ ಅರಿವು ಮೂಡಿಸುವ ಬೀದಿನಾಟಕ ಪ್ರದರ್ಶನ ಮಾಡಲು ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ, ಕಾರ್ಮಿಕ ಇಲಾಖೆ, ಹಾಸನ ವತಿಯಿಂದ ದರಪಟ್ಟಿಯನ್ನು ಆಹ್ವಾನಿಸಲಾಗಿದೆ.

ದರಪಟ್ಟಿಯನ್ನು ಮಾರ್ಚ್ 2 ರಂದು ಸಂಜೆ 5 ಗಂಟೆಯೊಳಗಾಗಿ ಜಿಲ್ಲಾ ಬಾಲ ಕಾರ್ಮಿಕ ಯೋಜನಾ ಸೊಸೈಟಿ, ಕಾರ್ಮಿಕ ಇಲಾಖೆ, ಸುಪ್ರಜಾ ಬಿಲ್ಡಿಂಗ್, ಅರಳಿಕಟ್ಟೆ ಸರ್ಕಲ್, ಹಾಸನ ಕಚೇರಿಗೆ ಸಲ್ಲಿಸಲು ಕಾರ್ಮಿಕ ಅಧಿಕಾರಿ ಹಾಗೂ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ, ಕಾರ್ಮಿಕ ಇಲಾಖೆಯ ಸದಸ್ಯ ಕಾರ್ಯದರ್ಶಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪುರಸಭಾ ಕಾರ್ಯಾಲಯ, ಚನ್ನರಾಯಪಟ್ಟಣ, ಹಾಸನ ಜಿಲ್ಲೆ.
Email:itstaff_ulb_channarayapatna@yahoo.co.in, Phone:08176-255411
ಸಂ:ಮುಅ/ಪುಸಚ/ಇಂ.ವಿ/15ನೇಹಣಉಳಿತಾಯ/2025–26 ದಿನಾಂಕ:21/02/2026
:ಟೆಂಡರ್ ಪ್ರಕಟಣೆ: : ಇ ಪ್ರೊಕ್ಯೂರ್‌ಮೆಂಟ್ ಮೂಲಕ :
ಚನ್ನರಾಯಪಟ್ಟಣ ಪುರಸಭೆ ವ್ಯಾಪ್ತಿಯಲ್ಲಿ 2021–23ನೇ ಸಾಲಿನ 15ನೇ ಹಣಕಾಸು ಉಳಿತಾಯ ಅನುದಾನದಡಿ ಅರ್ಹ ಗುತ್ತಿಗೆದಾರರುಗಳಿಂದ ಪಾರದರ್ಶಕತೆ ಆಧ್ಯಾದೇಶ 2000ದ ಅನ್ವಯ ಟೆಂಡರನ್ನು ಕರೆಯಲಾಗಿದ್ದು ಗುತ್ತಿಗೆದಾರರು ಇ–ಪ್ರೊಕ್ಯೂರಮೆಂಟ್‌ನಲ್ಲಿ ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ ದಿನಾಂಕ:07/03/2026 ಸಂಜೆ 5.30 ಗಂಟೆಯಾಗಿದ್ದು ಕಾಮಗಾರಿಗಳು ಟೆಂಡರ್ ದಸ್ತಾವೇಜಿನ ನಿಯಮಾವಳಿಗಳಿಗೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರಕ್ಕಾಗಿ ಪುರಸಭೆ ಟೆಂಡರ್ ಶಾಖೆ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿಕೋಶ ಹಾಸನ ಇವರಿಂದ ಕಛೇರಿಯ ವೇಳೆಯಲ್ಲಿ ಮತ್ತು https://kppp.karnataka.gov.in ಪಡೆಯಬಹುದು ದೂರವಾಣಿ:08176–254544. ಕಾಮಗಾರಿಗಳ ಇಡೆಂಟ್ ವಿವರ ಕೆಳಕಂಡತಿದೆ:– ಕ್ರ.ಸಂ.ಕಾಮಗಾರಿ ಹೆಸರು 2021–23ನೇ ಸಾಲಿನ 15ನೇ ಹಣಕಾಸು ಉಳಿತಾಯ ನಿಧಿ 1.ಚನ್ನರಾಯಪಟ್ಟಣ ಪುರಸಭಾ ವ್ಯಾಪ್ತಿಯ ವಾರ್ಡ ನಂ.08 ರ ವಿವಿಧ ಸ್ಥಳಗಳಲ್ಲಿ ಚರಂಡಿ ನಿರ್ಮಾಣ ಕಾಮಗಾರಿ. (DMA/2025-26/OW/WORK_INDENT55469) ಅಂದಾಜು ಮೊತ್ತ 01.90 ಕಾಲಾವಧಿ 6 ತಿಂಗಳು ಅನ್ವಯಿಸುವ ಟೆಂಡರ್ ದಸ್ತಾವೇಜು ಕೆ.ಡಬ್ಲ್ಯೂ–1 ಸೂಚನೆ:– ಮೇಲ್ಕಾಣಿಸಿದ ದಿನಾಂಕಗಳಲ್ಲಿ ಸಾರ್ವತ್ರಿಕ ರಜೆ ಎಂದು ಘೋಷಣೆ ಮಾಡಿದ್ದಲ್ಲಿ ರಜಾ ದಿನದ ಮುಂದಿನ ದಿನಾಂಕವನ್ನು ಪರಿಗಣಿಸತಕ್ಕದ್ದು.
ಸಹಿ/– ಮುಖ್ಯಾಧಿಕಾರಿ.
ಪುರಸಭೆ ಚನ್ನರಾಯಪಟ್ಟಣ
ವಾಸಾಸಂಇ/ಓಸನಿ/ಹಾಸನ/1102/ಕೆಎಸ್‌ಎಂಸಿಎ/2025–26

## ನಗರದಲ್ಲಿ ಹೆಚ್ಚುತ್ತಿರುವ ಬೈಕ್ ವ್ಹೀಲಿಂಗ್ ಹಾವಳಿ



• ಪ್ರಜೋದಯ ವರದಿ

**ಹಾಸನ:** ನಗರದಲ್ಲಿ ವ್ಹೀಲಿಂಗ್ ಪುಂಡರ ಹಾವಳಿ ದಿನೇ ದಿನೇ ಹೆಚ್ಚುತ್ತಿರುವುದರಿಂದ ಸಾರ್ವಜನಿಕರ ಜೀವಕ್ಕೆ ಕುತ್ತು ತರುವಂತಹ ಆತಂಕಕಾರಿ ಪರಿಸ್ಥಿತಿ ನಿರ್ಮಾಣವಾಗಿದೆ. ವಾಹನ ದಟ್ಟಣೆ ಹೆಚ್ಚಾಗಿರುವ ಸಮಯದಲ್ಲೇ ನಿರ್ಭೀತಿಯಾಗಿ ವ್ಹೀಲಿಂಗ್ ಮಾಡುವವರ ವಿರುದ್ಧ ಪೊಲೀಸರು ಕಠಿಣ ಕ್ರಮ ತೆಗೆದುಕೊಳ್ಳುವಂತೆ ಆಗ್ರಹಿಸಿದ್ದಾರೆ.

ನಗರದ ಎಂ.ಜಿ.ರಸ್ತೆಯಲ್ಲೇ ಅತೀ ವೇಗದಲ್ಲಿ ವ್ಹೀಲಿಂಗ್ ನಡೆಸುತ್ತಿರುವ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಪುಂಡರು ಬೈಕ್ ನೋಂದಣಿ ಸಂಖ್ಯೆ ಮರೆಮಾಚಿಕೊಂಡು ವ್ಹೀಲಿಂಗ್ ಮಾಡುವುದರಿಂದ ಅಪಘಾತದ ಭೀತಿ ಮತ್ತಷ್ಟು ಹೆಚ್ಚಿದೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಹಿಂದೆ 80 ಫೀಟ್ ರಸ್ತೆ ಸೇರಿ ವಿವಿಧ ಭಾಗಗಳಲ್ಲಿ ವ್ಹೀಲಿಂಗ್ ಹಾವಳಿ ತಡೆಯುವಂತೆ ಸ್ಥಳೀಯರು ಪೊಲೀಸರಿಗೆ ದೂರು ನೀಡಿದ್ದರೂ, ಪ್ರಕರಣಗಳು ಕಡಿಮೆಯಾಗಿಲ್ಲ. ಪ್ರಮುಖ ರಸ್ತೆಗಳಲ್ಲಿ ನಿಯಂತ್ರಣವಿಲ್ಲದೆ ವ್ಹೀಲಿಂಗ್ ನಡೆಯುತ್ತಿರುವುದು ಸಂಚಾರಕ್ಕೆ ಅಡ್ಡಿಯಾಗುವುದಲ್ಲದೆ, ಅಮಾಯಕರ ಜೀವಕ್ಕೂ ಅಪಾಯ ಉಂಟು ಮಾಡುತ್ತಿದೆ ಎಂಬ ಆರೋಪ ಕೇಳಿಬಂದಿದೆ.

ವ್ಹೀಲಿಂಗ್ ನಿಯಂತ್ರಣಕ್ಕೆ ಪೊಲೀಸ್ ಇಲಾಖೆ ಕ್ರಮ ಕೈಗೊಂಡಿದ್ದರೂ, ಪುಂಡರ ಅಟ್ಟಹಾಸ ತಡೆಯುವಲ್ಲಿ ಪರಿಣಾಮಕಾರಿ ನಿಯಂತ್ರಣ ಕಾಣುತ್ತಿಲ್ಲವೆಂಬ ಟೀಕೆ ವ್ಯಕ್ತವಾಗಿದೆ. ಪೋಷಕರು ತಮ್ಮ ಮಕ್ಕಳಿಗೆ ದುಬಾರಿ ಬೈಕ್‌ಗಳನ್ನು ಒದಗಿಸುವ ಮೂಲಕ ಸಂಚಾರಿ ನಿಯಮ ಉಲ್ಲಂಘನೆಗೆ ಪರೋಕ್ಷವಾಗಿ ಕಾರಣರಾಗುತ್ತಿದ್ದಾರೆಂಬ ಆಕ್ರೋಶವೂ ವ್ಯಕ್ತವಾಗಿದೆ.

ನಗರದಲ್ಲಿ ಹೆಚ್ಚುತ್ತಿರುವ ವ್ಹೀಲಿಂಗ್ ಹಾವಳಿಗೆ ತಕ್ಷಣ ಕಡಿವಾಣ ಹಾಕಿ, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಪೋಷಕರು ಸಹ ತಮ್ಮ ಮಕ್ಕಳಿಗೆ ಜವಾಬ್ದಾರಿ ಮತ್ತು ಸಂಚಾರಿ ನಿಯಮಗಳ ಅರಿವು ಮೂಡಿಸಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

# ಹೆಣ್ಣು ಮಕ್ಕಳು ವಿದ್ಯಾವಂತರಾಗಿ ಮೌಢ್ಯತೆ ಹಿಮ್ಮೆಟ್ಟಿಸಿ

### ಕಾನೂನು ಅರಿವು ಕಾರ್ಯಕ್ರಮದಲ್ಲಿ ನ್ಯಾ.ದಾಕ್ಷಾಯಿಣಿ ಕರೆ

• ಪ್ರಜೋದಯ ವರದಿ

**ಅರಸೀಕೆರೆ:** ಸಂಪ್ರದಾಯ, ದೈವಿಕತೆ ಹೆಸರಿನಲ್ಲಿ ಹೆಣ್ಣು ಮಕ್ಕಳ ಮೇಲೆ ನಿರಂತರವಾಗಿ ಮೌಢ್ಯಾಚರಣೆ ನಡೆಸಿಕೊಂಡು ಬರುತ್ತಿರುವುದು ಹೆಣ್ಣು ಮಕ್ಕಳ ಮನಸ್ಸಿನ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ. ಪ್ರತಿಯೊಬ್ಬ ಹೆಣ್ಣು ಮಕ್ಕಳು ವಿದ್ಯಾವಂತರಾಗುವ ಮೂಲಕ ಸಮಾಜದ ಮೌಢ್ಯತೆಗಳನ್ನು ಮೆಟ್ಟಿ ನಿಲ್ಲಬೇಕಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ, ನ್ಯಾಯಾಧೀಶರಾದ ಜಿ.ಕೆ.ದಾಕ್ಷಾಯಿಣಿ ಅವರು ಕರೆ ನೀಡಿದರು.

ತಾಲ್ಲೂಕಿನ ಕಣಕಟ್ಟೆ ಹೋಬಳಿ ಗೋಪಾಲಪುರ ಗ್ರಾಮ ಕೆ.ಗೊಲ್ಲರಹಟ್ಟಿಯಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಿಂದಹಮ್ಮಿಕೊಂಡಿದ್ದ ಬಾಲ್ಯ ವಿವಾಹ ನಿಷೇಧ, ಬೇಟಿ ಬಚಾವೋ ಬೇಟಿ ಪಡಾವೋ ಮತ್ತುಮೌಢ್ಯಾಚರಣೆ ನಿಷೇಧ ಕಾಯ್ದೆ ಹಾಗು ಸಾಮಾಜಿಕ ನ್ಯಾಯ ದಿನದ ಕುರಿತಾಗಿ ಕಾನೂನು ಅರಿವು ನೆರವು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಈ ನಿಟ್ಟಿನಲ್ಲಿ ಸರ್ಕಾರ ಸಾಮಾಜಿಕ ಬಹಿಷ್ಕಾರ, ಮೌಢ್ಯಾಚರಣೆಯ ನಿಷೇಧದಂತಹ ಕಾಯ್ದೆಗಳನ್ನು ಜಾರಿಗೆ ತಂದಿದ್ದರೂ ಗ್ರಾಮೀಣ ಭಾಗದಲ್ಲಿ ಅದರಲ್ಲಿಯೂ ಗೊಲ್ಲ ಸಮುದಾಯದಲ್ಲಿ ಇನ್ನೂ ಸಹ ಇಂತಹ ಆಚರಣೆಗಳು ನಡೆಯುತ್ತಿರುವುದು ವಿಷಾದನೀಯ ಎಂದರು.



ಸರ್ಕಾರವು ಹೆಣ್ಣು ಮಕ್ಕಳ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಜಾರಿಗೊಳಿಸಿದ್ದರು ಅದನ್ನು ಕಟ್ಟುನಿಟ್ಟಾಗಿ ಪರಿಣಾಮಕಾರಿಯಾಗಿ ಆಚರಣೆಗೆ ತರಲು ಇನ್ನು ಸಾಧ್ಯವಾಗಿಲ್ಲ ಸಂಪ್ರದಾಯದ ಹೆಸರಿನಲ್ಲಿ ನಡೆಯುತ್ತಿರುವ ಮೂಢನಂಬಿಕೆಗಳ ಆಚರಣೆಯು ಕೇವಲ ಒಂದು ದಿನದಲ್ಲಿ ಬಗೆಹರಿಯುವ ಸಮಸ್ಯೆಯಲ್ಲ. ಹೆಣ್ಣು ಮಕ್ಕಳು ಶಿಕ್ಷಿತರಾದಂತೆ ಪುರುಷ ಪ್ರಧಾನ ಸಮಾಜದ ವಿರುದ್ಧ ಅಸಂಪ್ರಾಯದಾಯಿಕ ಆಚರಣೆಗಳ ವಿರುದ್ಧ, ಮೂಢನಂಬಿಕೆಗಳ ವಿರುದ್ಧ ಹೋರಾಡಲು ಬಲಬಂದಂತಾಗುತ್ತದೆ ಎಂದು ಹೇಳಿದರು.

ಋತುಚಕ್ರ ಸಮಯದಲ್ಲಿ, ಬಾಣಂತನದ ಸಮಯದಲ್ಲಿ ಹೆಣ್ಣು ಮಕ್ಕಳನ್ನು ಊರ ಹೊರಗೆ ಇಡುವಂತದ್ದು ಕಾನೂನು ಬಾಹಿರ. ಹೆಣ್ಣು ಮಕ್ಕಳ ಮೇಲೆ ದೇವರು, ಧರ್ಮ, ಸಂಪ್ರದಾಯ ಹಾಗು ವೈಯಕ್ತಿಕ ಹೆಸರಿನಲ್ಲಿ ದೌರ್ಜನ್ಯ ಸಲ್ಲದು. ಇಂತಹ ಅನಿಷ್ಠ ಪದ್ಧತಿಗಳಿಗೆ ಪ್ರೋತ್ಸಾಹ ನೀಡಿದವರು ಸಹ ಕಾನೂನು ರೀತಿಯ ಶಿಕ್ಷೆಗೆ ಅರ್ಹರಾಗಿರುತ್ತಾರೆ. ಹೆಣ್ಣು ಮಕ್ಕಳನ್ನು ಶಿಕ್ಷಿತರನ್ನಾಗಿ ಮಾಡುವ ಮೂಲಕ ಸಂರಕ್ಷಣೆ ಮಾಡಬೇಕೆಂದು ಹೇಳಿದರು.

ಅರಸೀಕೆರೆ ನ್ಯಾಯಾಲಯದ ಹಿರಿಯ ಸಿವಿಲ್ ನ್ಯಾಯಾಧೀಶರಾದ ಕಿರಣ್ ಕುಮಾರ್ ಡಿ.ವಡಿಗೇರಿ ಅವರು ಮಾತನಾಡಿ, ಸರ್ಕಾರಗಳು ಹೆಣ್ಣು ಮಕ್ಕಳ ಸುರಕ್ಷತೆ ಹಾಗು ಸ್ವಾವಲಂಬನೆಗಾಗಿ ಹಲವು ಯೋಜನೆ ಮತ್ತು ವಿಶೇಷ ಕಾಯ್ದೆಗಳನ್ನು ಜಾರಿಗೆ ತಂದಿದ್ದರೂ ಅವು ಸರಿಯಾದ ಕ್ರಮದಲ್ಲಿ ಜಾರಿಯಾಗುತ್ತಿಲ್ಲ. ಇದು ಹೆಣ್ಣುಮಕ್ಕಳ ಮಾನಸಿಕ, ದೈಹಿಕವಾಗಿ ಹಾಗು ಭವಿಷ್ಯಕ್ಕೆ ಅಡ್ಡಿ ಉಂಟು ಮಾಡುತ್ತದೆ. ಸುಶಿಕ್ಷಿತರಾದಲ್ಲಿ ಇಂತಹ ಸಮಸ್ಯೆಗಳನ್ನು ಬೇರು ಸಮೇತ ಕಿತ್ತೊಗೆಯಲುಸಾಧ್ಯವಾಗುತ್ತದೆಂದು ತಿಳಿಸಿದರು.

ತಹಶೀಲ್ದಾರ್ ಸಂತೋಷ್ ಕುಮಾರ್ ಅವರು ಮೌಢ್ಯತೆಯ ನಿರ್ಮೂಲನೆಯ ಕುರಿತು ಮಾತನಾಡಿ, ಈ ಹಿಂದೆ ಹಲವು ಬಾರಿ ಜಿಲ್ಲಾಡಳಿತ ತಾಲ್ಲೂಕು ಆಡಳಿತದ ವತಿಯಿಂದ ಕೆ. ಗೊಲ್ಲರಹಟ್ಟಿ ಗ್ರಾಮಕ್ಕೆ ಭೇಟಿ ಮಾಡಿ ಹಲವು ಜಾಗೃತಿ ಅರಿವು ಮೂಡಿಸಿದಾಗ್ಯೂ ಹೆಣ್ಣು ಮಕ್ಕಳ ಮೇಲೆ ಮೌಢ್ಯಾಚರಣೆ ನಡೆಯುತ್ತಿರುವುದು ಅಕ್ಷಮ್ಯ ಎಂದರು.

ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಮಂಜುಳಾ ಅವರು ಮಾತನಾಡಿ, ಹೆಣ್ಣು ಮಕ್ಕಳು ದೈವದತ್ತ ವರ. ಅವರನ್ನು ಗೌರವದಿಂದ ಕಾಣುವ ಮೂಲಕ ಅವರಿಗೆ ಸಮಾನತೆಯನ್ನು ಕಲ್ಪಿಸಿ ಕೊಡು ವಂತದ್ದು ಸಮಾಜದ ಸಮುದಾಯದ ಹೊಣೆಗಾರಿಕೆಯಾಗಿದೆ ಎಂದು ತಿಳಿಸಿದರು.

ಬಾಣಾವರ ಪೊಲೀಸ್ ಠಾಣೆ ಪೊಲೀಸ್ ನಿರೀಕ್ಷಕ ಸುರೇಶ್, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಎಸ್.ಪರಶಿವಮೂರ್ತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿ ಯೋಗೀಶ್, ಹಿಂದುಳಿದ ವರ್ಗಗಳ ವಸತಿ ಶಾಲೆಗಳ ವಿಸ್ತರಣಾಧಿಕಾರಿ ಯಶೋಧ ಉಪಸ್ಥಿತರಿದ್ದರು.

## ಹೊಸ ರಾಷ್ಟ್ರೀಯ ಹೆದ್ದಾರಿ ಘೋಷಣೆಗೆ ಮನವಿ

• ಪ್ರಜೋದಯ ವರದಿ



**ಹಾಸನ:** ಜಿಲ್ಲೆಯ ಪ್ರಮುಖ ರಸ್ತೆಗಳ ಅಭಿವೃದ್ಧಿ ಹಾಗು ಹೊಸ ರಾಷ್ಟ್ರೀಯ ಹೆದ್ದಾರಿ ಘೋಷಣೆಗೆ ಸಂಬಂಧಿಸಿದಂತೆ ಸಂಸದ ಶ್ರೇಯಸ್ ಪಟೇಲ್ ಅವರು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು.

ರಾಷ್ಟ್ರೀಯ ಹೆದ್ದಾರಿ-373ರ ಬೇಲೂರು-ಹಾಸನ ವಿಭಾಗದ 27.78 ಕಿ.ಮೀ ನಿಂದ 57.32 ಕಿ.ಮೀ ವರೆಗಿನ ರಸ್ತೆಯನ್ನು ಸುಸಜ್ಜಿತ ನಾಲ್ಕು ಪಥಗಳಾಗಿ ವಿಸ್ತರಣೆ ಮಾಡಲು ಒತ್ತಾಯಿಸಿದರು.

ಜೊತೆಗೆ ಚನ್ನರಾಯಪಟ್ಟಣದಿಂದ ಹೊಳೆನರಸೀಪುರ, ಅರಕಲಗೂಡು, ಮಡಿಕೇರಿ ಮೂಲಕ ಕೇರಳ ಗಡಿಯ ಮಾಕುಟ್ಟದವರೆಗಿನ ರಸ್ತೆಯನ್ನು ಹೊಸ ರಾಷ್ಟ್ರೀಯ ಹೆದ್ದಾರಿಯನ್ನಾಗಿ ಘೋಷಿಸಬೇಕೆಂದು ಕೋರಿದರು.

ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿಗಳ ನಿರ್ವಹಣೆಗಾಗಿ ಎಸ್‌ಟಿಎಂಸಿ ಹಾಗು ಪಿಬಿಎಂಸಿ ಕಾಮಗಾರಿಗಳಿಗೆ ಅಗತ್ಯವಿರುವ ನಿರ್ವಹಣಾ ನಿಧಿಯನ್ನು ತಕ್ಷಣ ಬಿಡುಗಡೆ ಮಾಡುವಂತೆ ಕೋರಿದರು. ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಸಚಿವರು, ಈ ಕುರಿತು ಪರಿಶೀಲಿಸುವುದಾಗಿ ಭರವಸೆ ನೀಡಿದ್ದಾರೆ.

## ಪಾಲಿಕೆ ಇಂಜಿನೀಯರ್ ವಿರುದ್ಧ ಪ್ರತಿಭಟನೆ

» ಮೊದಲನೇ ಪುಟದಿಂದ

ಇದರಿಂದ ಸಿಬ್ಬಂದಿಯಲ್ಲಿ ಭೀತಿ ಮತ್ತು ಅಸಮಾಧಾನ ಉಂಟಾಗಿದೆ ಎಂದು ದೂರಿದರು.

ಪೌರಕಾರ್ಮಿಕರಾದ ಮಂಗಳ ಪ್ರಕಾಶ್ ಅವರು ಮಾತನಾಡಿ, ನಗರದಲ್ಲಿ ಕೇವಲ 80 ಪೌರಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದು, ಅಗತ್ಯಕ್ಕೆ ಅನುಗುಣವಾಗಿ ಹೊಸ ನೇಮಕಾತಿ ಮಾಡಿಲ್ಲ. ನಾಲ್ಕು ಜನರು ಮಾಡುವ ಕೆಲಸವನ್ನು ಒಬ್ಬರಿಂದ ಮಾಡಿಸಲಾಗುತ್ತಿದೆ. ಈ ರೀತಿಯ ಒತ್ತಡದಿಂದ ಪೌರಕಾರ್ಮಿಕರ ಆರೋಗ್ಯ ಮತ್ತು ಜೀವನದ ಮೇಲೆ ಪರಿಣಾಮ ಬೀರುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಸಂಘದ ನಿಕಟಪೂರ್ವ ಮಾಜಿ ಅಧ್ಯಕ್ಷ ಎನ್.ಆರ್.ವೆಂಕಟೇಶ್, ಪರಶುರಾಮು, ಮಂಜಮ್ಮ, ರಾಮು, ಮಾರಪ್ಪ, ಸಂತೋಷ್, ಜಯಣ್ಣ, ಪೌರಕಾರ್ಮಿಕರು ಇತರರು ಇದ್ದರು.

## ಅಕ್ರಮ ಮರಳು ಅಡ್ಡೆ ಮೇಲೆ ತಹಶೀಲ್ದಾರ್ ದಾಳಿ

• ಪ್ರಜೋದಯ ವರದಿ



**ಸಕಲೇಶಪುರ:** ಅಕ್ರಮ ಮರಳು ಗಣಿಗಾರಿಕೆ ಅಡ್ಡೆ ಮೇಲೆ ಸೋಮವಾರ ರಾತ್ರಿ ದಿಢೀರ್ ದಾಳಿ ನಡೆಸಿದ ತಹಶೀಲ್ದಾರ್ ಸುಪ್ರಿತಾ ಹಾಗು ಅಧಿಕಾರಿಗಳು ಎರಡು ಟಿಪ್ಪರ್‌ಗಳೊಂದಿಗೆ ಮರಳನ್ನು ವಶಕ್ಕೆ ಪಡೆದಿದ್ದಾರೆ.

ತಾಲ್ಲೂಕಿನ ಮಳಲಿ ಸಮೀಪ ಖಚಿತ ಮಾಹಿತಿ ಮೇರೆಗೆ ದಾಳಿ ನಡೆ ಸಲಾಯಿತು. ಮರಳು ಸಾಗಿಸುತ್ತಿದ್ದ ಟಿಪ್ಪರ್ ವಾಹನಗಳಿಗೆ ಅಡ್ಡಲಾಗಿ ತಮ್ಮ ಅಧಿಕೃತ ವಾಹನ ನಿಲ್ಲಿಸಿದ ತಹಶೀಲ್ದಾರ್ ವಾಹನಗಳನ್ನು ವಶಕ್ಕೆ ಪಡೆದಿದ್ದಾರೆ. ತಾಲ್ಲೂಕಿನಲ್ಲಿ ಇತ್ತೀಚಿನ ದಿನಗ ಳಲ್ಲಿ ಅಕ್ರಮ ಮರಳು ದಂಧೆ ಹೆಚ್ಚಾ ಗುತ್ತಿರುವ ಹಿನ್ನೆಲೆ ತಾಲೂಕು ಆಡಳಿತ ಹಾಗು ರಾಜಸ್ವ ಇಲಾಖೆ ಅಧಿಕಾರಿಗಳು ನಿರಂತರವಾಗಿ ವಿಶೇಷ ದಾಳಿ ನಡೆಸುತ್ತಿದ್ದಾರೆ. ಅಧಿಕಾರಿಗಳು ಕಠಿಣ ಕ್ರಮ ಜಾರಿಗೊಳಿಸಿದ್ದರೂ ಮರಳು ಮಾಫಿಯಾ ವಿವಿಧ ಮಾರ್ಗ ಗಳನ್ನು ಬಳಸಿಕೊಂಡು ವಿಶೇಷವಾಗಿ ರಾತ್ರಿ ವೇಳೆಯಲ್ಲಿ ಅವ್ಯಾಹತವಾಗಿ ನಡೆಯುತ್ತಿದೆ.

ಕಳೆದ ಎರಡು ವಾರಗಳಿಂದ ಪಟ್ಟಣ ಸಮೀಪದ ಶ್ರೀನಿವಾಸ ಕನ್ವೆನ್ಷನ್ ಹಾಲ್ ಬಳಿ ಹರಿಯುವ ಹೇಮಾವತಿ ಹೊಳೆ ದಂಡೆಯಿಂದ ಟಿಪ್ಪರ್ ವಾಹನಗಳ ಮೂಲಕ ಅಧಿಕಾರಿಗಳಕಣ್ಣುತಪ್ಪಿಸಿ ಅಕ್ರಮವಾಗಿ ಮರಳು ಸಾಗಾಟ ನಡೆಸುತ್ತಿರುವ ಕುರಿತು ಸಾರ್ವಜನಿಕರಿಂದ ನಿರಂತರ ದೂರುಗಳು ಕೇಳಿಬರುತ್ತಿದೆ.

ಅಕ್ರಮ ಮರಳು ಗಣಿಗಾರಿಕೆಯಿಂದ ಪರಿಸರ ಹಾನಿ ಉಂಟಾಗುತ್ತಿರುವುದರ ಜೊತೆಗೆ ಸರ್ಕಾರಕ್ಕೆ ಆದಾಯ ನಷ್ಟವಾಗುತ್ತಿರುವ ಕಾರಣ ಇಂತಹ ಚಟುವಟಿಕೆಗಳಲ್ಲಿ ತೊಡಗಿರುವವರ ವಿರುದ್ಧ ಜಿಲ್ಲಾಡಳಿತ ಹಾಗು ತಾಲ್ಲೂಕು ಆಡಳಿತ ಇನ್ನಷ್ಟು ಕಠಿಣ ಕ್ರಮ ಕೈಗೊಳ್ಳಬೇಕೆಂದು ಸ್ಥಳೀಯರು ಒತ್ತಾಯಿಸಿದ್ದಾರೆ.

## ಸರ್ಕಾರಕ್ಕೆ ಬಿಸಿ ಮುಟ್ಟಿಸಿದ ಉದ್ಯೋಗಾಕಾಂಕ್ಷಿಗಳು

» ಮೊದಲನೇ ಪುಟದಿಂದ

ಯಾವುದೇ ಸೂಕ್ತ ಯೋಜನೆಯನ್ನು ರೂಪಿಸದಿರುವುದರಿಂದ ಇಷ್ಟು ದೊಡ್ಡ ಸಂಖ್ಯೆಯ ಸರ್ಕಾರಿ ಹುದ್ದೆಗಳು ಖಾಲಿ ಇದ್ದವು. ವಿರೋಧ ಪಕ್ಷದ ನಾಯಕರು ನಿರಪರಾಧಿ ವಿದ್ಯಾರ್ಥಿಗಳಿಗೆ ತಪ್ಪು ಮಾರ್ಗದರ್ಶನ ಮಾಡಿ ತಮ್ಮ ರಾಜಕೀಯ ಸ್ವಾರ್ಥದ ಈಡೇರಿಕೆಗಾಗಿ ಬಳಸಿಕೊಳ್ಳುತ್ತಿರುವುದು ವಿಷಾದನೀಯ ಎಂದಿದ್ದಾರೆ.

ಇಂದಿನ ಈ ದುಸ್ಥಿತಿಗೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ಅಂದರೆ 2019ರಿಂದ 2023 ರವರೆಗಿನ ನೇಮಕಾತಿಯಲ್ಲಿ ನಡೆದ ಅಕ್ರಮಗಳು ಮತ್ತು ಭ್ರಷ್ಟಾಚಾರಗಳು ಕಾರಣ. ಇದು ಯುವಜನರು ವ್ಯವಸ್ಥೆಯ ಮೇಲಿನ ನಂಬಿಕೆಯನ್ನು ಕಳೆದುಕೊಳ್ಳುವಂತೆ ಮಾಡಿದ್ದು ಮಾತ್ರವಲ್ಲ, ದೊಡ್ಡ ಪ್ರಮಾಣದ ಖಾಲಿ ಹುದ್ದೆಗಳ ಸೃಷ್ಟಿಗೆ ಕಾರಣವಾಯಿತು. ನಮ್ಮ ಸರ್ಕಾರ ನೇಮಕಾತಿ ಪ್ರಕ್ರಿಯೆಯಲ್ಲಿ ವಿಶ್ವಾಸಾರ್ಹತೆ, ಪಾರದರ್ಶಕತೆ ಮತ್ತು ಸ್ಥಿರತೆಯನ್ನು ಮರುಸ್ಥಾಪಿಸಲು ಬದ್ಧವಾಗಿದೆ ಎಂದು ಹೇಳಿದ್ದಾರೆ.

## ಬೆದರಿಕೆ ಆರೋಪ: ಆತ್ಮಹತ್ಯೆಗೆ ಯತ್ನಿಸಿದ ಮಹಿಳೆ

• ಪ್ರಜೋದಯ ವರದಿ



**ಹಾಸನ:** ಬಿಜೆಪಿ ಮುಖಂಡ, ವಕೀಲ ದೇವರಾಜೇಗೌಡ ಅವರು ಕೊಲೆ ಬೆದರಿಕೆ ಹಾಕಿ ಮಾನಸಿಕ ಹಿಂಸೆ ನೀಡುತ್ತಿದ್ದಾರೆಂದು ಆರೋಪಿಸಿ ಮಹಿಳೆಯೊಬ್ಬರು ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ನಡೆದಿದೆ.

ಹೊಳೆನರಸೀಪುರದ ಜ್ಯೋತಿ ಎಂಬುವವರು ಆತ್ಮಹತ್ಯೆಗೆ ಯತ್ನಿಸಿದ್ದಾರೆ. 2024ರಲ್ಲಿ ದೇವರಾಜೇಗೌಡ ಅವರ ವಿರುದ್ಧ ಮಾನಹಾನಿ ಪ್ರಕರಣ ದಾಖಲಿಸಿದ್ದೇನೆ. ಅದೇ ದ್ವೇಷದಿಂದ ನನಗೆ ಕೊಲೆ ಬೆದರಿಕೆ ಹಾಕಿದ್ದಾರೆಂದು ಜ್ಯೋತಿ ಆರೋಪಿಸಿದ್ದಾರೆ. ಫೆ.23 ರಂದು ಹೊಳೆನರಸೀಪುರ ಪೊಲೀಸ್ ಠಾಣೆ ಎದುರು ನಿಂತಿದ್ದಾಗ ಅಲ್ಲಿಗೆ ಬಂದ ದೇವರಾಜೇಗೌಡ, ನೀನು ಬದುಕಿದ್ದರೆ ನನ್ನ ವಿರುದ್ಧ ದಾಖಲಿಸಿ ರುವ ಪ್ರಕರಣಕ್ಕೆ ತೊಂದರೆಯಾಗುತ್ತದೆ. ನಿನ್ನನ್ನು ಮುಗಿಸುತ್ತೇನೆಂದು ಬೆದರಿಕೆ ಹಾಕಿದರು. 2025ರ ಸೆಪ್ಟೆಂಬ ರ್‌ನಲ್ಲೂ ಎಚ್ಚರಿಕೆ ನೀಡಿದ್ದರು. ಇಷ್ಟು ಮಾತ್ರವಲ್ಲದೆ ನನ್ನ ವಿರುದ್ಧ ಇಲ್ಲಸಲ್ಲದ ಆರೋಪ ಮಾಡು ತ್ತಲೇ ಇದ್ದಾರೆ. ಅದರಿಂದ ಮಾನಸಿಕವಾಗಿ ಹಿಂಸೆಯಾಗುತ್ತಿದ್ದು, ಸಾವಿನ ನಿರ್ಧಾರ ಕೈಗೊಂಡಿದ್ದೇನೆಂದು ಜ್ಯೋತಿ ಹೇಳಿದ್ದಾರೆ.

ಮನೆಯಲ್ಲೇ ಇದ್ದ ಗಿಡಕ್ಕೆ ಸಿಂಪಡಿಸುವ ಔಷಧಿ ಸೇವಿಸಿದ್ದ ಅವರನ್ನು ಲತಾ ಎಂಬುವವರು ಆಸ್ಪತ್ರೆಗೆ ದಾಖಲಿಸಿದ್ದಾರೆ. ಹೆಚ್ಚಿನ ಚಿಕಿತ್ಸೆಗಾಗಿ ಹಿಮ್ಸ್‌ಗೆ ದಾಖಲಿಸಲಾಗಿದೆ.

## ಹೆರಿಗೆ ಬಳಿಕ ಮಹಿಳೆ ಸಾವು: ವೈದ್ಯರ ನಿರ್ಲಕ್ಷ್ಯ ಆರೋಪ

» ಮೊದಲನೇ ಪುಟದಿಂದ

ಯಾದ ಸಮಯದಲ್ಲಿ ಚಿಕಿತ್ಸೆ ನೀಡದಿರುವುದರಿಂದಲೇ ಸಾವನ್ನಪ್ಪಿದ್ದಾರೆಂದು ಕುಟುಂಬಸ್ಥರು ಆಕ್ರೋಶ ವ್ಯಕ್ತಪಡಿಸಿದರು. ಈ ಹಿನ್ನಲೆ ಮೃತಳ ಪತಿ ಹಾಗು ಸಂಬಂಧಿಕರು ಆಸ್ಪತ್ರೆಗೆ ಎದುರು ಪ್ರತಿಭಟನೆ ನಡೆಸಿ, ವೈದ್ಯರ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು. ಪತ್ನಿಯನ್ನು ಕಳೆದುಕೊಂಡ ಪತಿ ಪುನೀತ್ ಆಸ್ಪತ್ರೆ ಆವರಣದಲ್ಲಿ ಕಣ್ಣೀರಿಟ್ಟು ಗೋಳಾಡಿದ ದೃಶ್ಯ ಮನಕಲಕುವಂತಿತ್ತು. ನವಜಾತ ಹೆಣ್ಣು ಮಗು ಹಿಮ್ಸ್‌ನ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಮಗುವಿನ ಸ್ಥಿತಿ ಸ್ಥಿರವಾಗಿದೆ. ಈ ಸಂಬಂಧ ನಗರ ಠಾಣೆ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ.

## ಅತಿವೃಷ್ಟಿ ಪರಿಹಾರ ಹಣವೂ ಬೇರೆ ಜಿಲ್ಲೆಗೆ ವರ್ಗ

» ಮೊದಲನೇ ಪುಟದಿಂದ

ಕೈಗೊಳ್ಳಬೇಕು. ಕ್ರಾಫರ್ಡ್ ಆಸ್ಪತ್ರೆಯಲ್ಲಿ ಸೋಮವಾರ ಮತ್ತು ಗುರುವಾರ ರೋಗಿಗಳು ಸರದಿ ಸಾಲಿನಲ್ಲಿ ನಿಲ್ಲುವ ಸಮಸ್ಯೆ ಉಂಟಾಗುತ್ತಿದೆ. ಹೀಗಾಗಿ ಹೆಚ್ಚುವರಿ ಕೌಂಟರ್ ತೆರೆಯಬೇಕೆಂದು ಆಸ್ಪತ್ರೆ ವೈದ್ಯಾಧಿಕಾರಿ ಡಾ|| ಅರುಣ್ ಕುಮಾರ್ ಅವರಿಗೆ ಸೂಚಿಸಿದರು.

12 ವರ್ಷ ಹಳೆಯ ಸ್ಕ್ಯಾನಿಂಗ್ ಯಂತ್ರ ತುಕ್ಕು ಹಿಡಿಯುವಂತಾಗಿದೆ. ಪರ್ಯಾಯ ಯಂತ್ರಕ್ಕೆ ವ್ಯವಸ್ಥೆ ಮಾಡಿಕೊಳ್ಳಬೇಕು. ಆಸ್ಪತ್ರೆಯಲ್ಲಿ ಸ್ವಚ್ಛತೆ, ದಾಖಲೆ ನಿರ್ವಹಣೆ ಹಾಗು ಕಸ ವಿಲೇವಾರಿ ಕ್ರಮಬದ್ಧವಾಗಿರಬೇಕೆಂದರು.

ಅಂಗನವಾಡಿ ಕೇಂದ್ರಗಳಿಗೆ ಹೋಗಿ ಸ್ಥಳ ಪರಿಶೀಲನೆ ಮಾಡಿ, ಉದ್ಘಾಟನೆ ಆಗದ ಕಟ್ಟಡಗಳ ಮಾಹಿತಿ ನೀಡಬೇಕು. ಹಲವಾರು ಅಂಗನವಾಡಿಗಳಲ್ಲಿ ವಿದ್ಯುತ್ ಕಡಿತ ಸಮಸ್ಯೆ ಇದೆ. ವಾಟರ್ ಫಿಲ್ಟರ್‌ಗಳು ಗೋದಾಮಿನಲ್ಲಿದ್ದು ಕೂಡಲೇ ವಿತರಿಸಬೇಕೆಂದರು.

ಪಟ್ಟಣದಲ್ಲಿ ಫ್ಲೆಕ್ಸ್ ಹಾವಳಿ ಮಿತಿ ಮೀರಿದೆ. ಕಾನೂನು ಪ್ರಕಾರ ಶುಲ್ಕ ಪಾವತಿಸಿಕೊಂಡು ಅನುಮತಿ ನೀಡಬೇಕು. ಯಾವುದೇ ರಾಜಕಾರಣಿ ಅಥವಾ ಸಂಸ್ಥೆಗಳ ಬ್ಯಾನರ್ ಆದರೂ ಒಂದು ವಾರವಷ್ಟೇ ಅವಕಾಶ ನೀಡಬೇಕು. ಪಟ್ಟಣ ವ್ಯಾಪ್ತಿಯಲ್ಲಿ ಪ್ರತಿ ವಿದ್ಯುತ್ ಕಂಬಗಳಿಗೂ ಬಲ್ಬ್ ಅಳವಡಿಸಿಕೊಳ್ಳಲು ಕ್ರಮ ಕೈಗೊಳ್ಳಬೇಕು. ಎಲ್ಲಾ ಸರ್ಕಾರಿ ಆಸ್ತಿಗಳಿಗೂ ದಾಖಲಾತಿ ಮಾಡಬೇಕೆಂದು ನಿರ್ದೇಶನ ನೀಡಿದರು.

**ದುಶ್ಚಟದಿಂದ ಯುವಕರ ಹೊರ ತನ್ನಿ**

ಹದಿಹರೆಯದ ಯುವಕರು ದುಶ್ಚಟಗಳಿಗೆ ದಾಸರಾಗುತ್ತಿದ್ದಾರೆ. ಮದ್ಯ ಸೇವಿಸಿ ಬೈಕ್, ಕಾರು ಚಾಲನೆ ಮಾಡುತ್ತಿರುವವರ ಸಂಖ್ಯೆ ಹೆಚ್ಚುತ್ತಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ದಿನಸಿ ಅಂಗಡಿಗಳಲ್ಲಿ ಮದ್ಯ ಮಾರಾಟವಾಗುತ್ತಿರುವ ಬಗ್ಗೆ ದೂರು ಬಂದಿದೆ. ಕೂಲಿ ಕಾರ್ಮಿಕರು ಮದ್ಯಪಾನದಿಂದ ಕೆಲಸಕ್ಕೆ ಸಿಗದ ಪರಿಸ್ಥಿತಿ ಉಂಟಾಗಿದೆ. ಅಕ್ರಮ ಮದ್ಯ ಮಾರಾಟಕ್ಕೆ ಕಡಿವಾಣ ಹಾಕಬೇಕೆಂದು ಅಧಿಕಾರಿಗಳಿಗೆ ಹೇಳಿದರು. ಉಪವಿಭಾಗಾಧಿಕಾರಿ ಮಂಜುನಾಥ್, ತಹಶೀಲ್ದಾರ್ ಸುಪ್ರೀತಾ, ಕಾರ್ಯನಿರ್ವಹಣಾಧಿಕಾರಿ ಗಂಗಾಧರ್, ಪುರಸಭೆ ಮುಖ್ಯಾಧಿಕಾರಿ ಮಹೇಶ್ವರಪ್ಪ, ಡಿವೈಎಸ್‌ಪಿ ಮಾಲತೇಶ್ ಮತ್ತಿತರರಿದ್ದರು.

## ಈ ಬಾರಿ ಉತ್ತಮ ಮಾವಿನ ಫಸಲು ನಿರೀಕ್ಷೆ

» ಮೊದಲನೇ ಪುಟದಿಂದ

ಮಾರುಕಟ್ಟೆಯಲ್ಲಿ ಬೆಲೆ ಕುಸಿತದ ಭೀತಿ ಇರುವ ಕಾರಣ ಸರ್ಕಾರ ಕೂಡಲೇ ಮಾವು ಬೆಳೆಗೆ ಬೆಂಬಲ ಬೆಲೆ ಘೋಷಿಸ ಬೇಕೆಂದು ಸಾವಯವ ಕೃಷಿಕ ವಗರಹಳ್ಳಿ ಪ್ರವೀಣ್ ಒತ್ತಾಯಿಸಿದ್ದಾರೆ.

**ತೋಟಗಾರಿಕೆ ಇಲಾಖೆ ಸಲಹೆ**

ತಾಲ್ಲೂಕಿನಾದ್ಯಂತ 170 ಎಕರೆ ಪ್ರದೇಶದಲ್ಲಿ 8,500 ಮಾವಿನ ಮರಗಳಿದ್ದು, ಹೂವಿನ ಹಂತದಲ್ಲಿ ಕೀಟನಾಶಕ ಸಿಂಪಡಿಸ ಬಾರದು. ಬೆಳೆ ಯಾವುದೇ ಇರಲಿ ಪರಾಗಸ್ಪರ್ಶ ಕ್ರಿಯೆ ನಡೆ ಯುವ ಹಂತದಲ್ಲಿ ಸಾಕಷ್ಟು ಜಾಗೃತಿ ವಹಿಸಬೇಕು. ಫಸಲು ಹಿಡಿಯುವ ಹಂತದಲ್ಲಿ ಅಧಿಕಾರಿಗಳು ಇಲ್ಲವೇ ತಜ್ಞರ ಸಲಹೆ ಅಗತ್ಯವೆಂದು ತೋಟಗಾರಿಕೆ ಅಧಿಕಾರಿ ತಿಳಿಸಿದ್ದಾರೆ.

ಸಾವಯವ ಕೃಷಿಕ ಪ್ರವೀಣ್ ಅವರು ಮಾತನಾಡಿ, ಈ ಬಾರಿ ಮಾವಿನ ಮರಗಳಲ್ಲಿ ಹೆಚ್ಚು ಹೂವುಗಳು ಪಸರಿಸಿದ್ದು, ನಿರೀಕ್ಷೆ ಮೀರಿ ಫಸಲು ದೊರೆಯುವ ಸಾಧ್ಯತೆ ಇದೆ. ಸರ್ಕಾರವು ಇತ್ತ ಗಮನಿಸಿ ಉತ್ತಮ ಮಾರುಕಟ್ಟೆ ಕಲ್ಪಿಸುವುದರ ಜೊತೆಗೆ ಬೆಂಬಲ ಬೆಲೆ ನಿಗದಿಪಡಿಸಬೇಕೆಂದು ಆಗ್ರಹಿಸಿದರು.

**ಮೈಮರೆತರೆ ಸಂಕಷ್ಟ ಖಚಿತ**

ಈ ಬಾರಿ ಉತ್ತಮ ಇಳುವರಿ ನಿರೀಕ್ಷೆಯಲ್ಲಿ ರೈತರು ಇದ್ದಾರಾದರೂ ಈ ಸಮಯದಲ್ಲಿ ಮೈಮರೆತರೆ ನಷ್ಟ ಅನುಭವಿಸ ಬೇಕಾಗುತ್ತದೆ. ಹಣ್ಣುಗಳು ಕೈಸೇರುವ ವರೆಗೆ ಜಾಗ್ರತೆಯಿಂದ ಕಾಪಾಡುವ ಹೊಣೆಗಾರಿಕೆ ನಿರ್ವಹಿಸಬೇಕಾಗಿದೆ. ಮಾವಿನ ಕಾಯಿಗೆ ಹುಳು, ತುರಿಕೆ ರೋಗ, ಪುಡಿ ಬಿಳಿ ರೋಗ ಬಾಧಿಸುವ ಸಾಧ್ಯತೆ ಹೆಚ್ಚಿರುತ್ತದೆ. ಸಮಯಕ್ಕೆ ಸರಿಯಾಗಿ ಜೈವಿಕ ಅಥವಾ ತಜ್ಞರು ಶಿಫಾರಸು ಮಾಡಿದ ಕೀಟನಾಶಕ ಬಳಕೆ ಮಾಡಬೇಕು. ತೋಟದಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳುವುದು ಅಷ್ಟೇ ಮುಖ್ಯವಾಗುತ್ತದೆ. ಮಾವು ಬೆಳೆಗೆ ವಾತಾವರಣವೂ ಪೂರಕವಾಗಿ ಇರಬೇಕಾಗುತ್ತದೆ. ಈ ನಿಟ್ಟಿನಲ್ಲಿ ರೈತರು ಮುಂದಿನ ದಿನಗಳಲ್ಲಿ ಸಾಕಷ್ಟು ಜಾಗೃತಿ ವಹಿಸಬೇಕಾಗುತ್ತದೆ.

## ಇಂದು ಕೆಡಿಪಿ ಪ್ರಗತಿ ಪರಿಶೀಲನಾ ಸಭೆ

• ಪ್ರಜೋದಯ ವರದಿ



**ಹಾಸನ:** ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರ ಅಧ್ಯಕ್ಷತೆಯಲ್ಲಿ ಬುಧವಾರ ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ಕೆಡಿಪಿ ಪ್ರಗತಿ ಪರಿಶೀಲನಾ ಸಭೆ ನಡೆಯಲಿದೆ. ಬೆಳಿಗ್ಗೆ 10.30ರಿಂದ ಸಂಜೆ 5ರ ವರೆಗೆ ಉಸ್ತು ವಾರಿ ಸಚಿವರು ಸಭೆ ನಡೆಸಲಿದ್ದಾರೆ. ಸಂಸದ, ಜಿಲ್ಲೆಯ ಶಾಸಕರು ಭಾಗವಹಿಸಲಿದ್ದಾರೆ.

## ಫೆ.28ಕ್ಕೆ ರಕ್ಷಿದಿಯಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ

• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನ ಬೆಳ್ಳೇಕೆರೆ ಜೈ ಕರ್ನಾಟಕ ಸಂಘದಿಂದ ಫೆ.28ರ ಶನಿವಾರ ಎಸ್.ಕೆ. ಕರೀಂಖಾನ್ ಸೌಹಾರ್ದ ಪ್ರಶಸ್ತಿ ಹಾಗು ಅಮೃತ ಕಾವ್ಯ ಪ್ರಶಸ್ತಿ ಪ್ರದಾನ ಸಮಾರಂಭ ಏರ್ಪಡಿಸಲಾಗಿದೆ.

ತಾಲ್ಲೂಕಿನ ರಕ್ಷಿದಿ ಗ್ರಾಮದಲ್ಲಿರುವ ಪೂರ್ಣಚಂದ್ರ ತೇಜಸ್ವಿ ರಂಗ ಮಂದಿರದಲ್ಲಿ ಶನಿವಾರ ಸಂಜೆ 6 ಗಂಟೆಗೆ ಸಮಾರಂಭ ಪ್ರಾರಂಭವಾಗಲಿದೆ. ಎಸ್.ಕೆ.ಕರೀಂಖಾನ್ ಸೌಹಾರ್ದ ಪ್ರಶಸ್ತಿಗೆಕೆ.ಜಿ.ಎಫ್.ಅಚ್ಯುತ, ಅಮೃತ ಕಾವ್ಯ ಪ್ರಶಸ್ತಿಗೆ ಮಧು ಕಾರಗಿ ಹಾಗು ವಿನಯ್ ಗುಂಟೆ ಭಾಜನರಾಗಿದ್ದಾರೆ.

ಕವಿತಾ ಸುಬ್ಬಯ್ಯ ಕಾರ್ಯಕ್ರಮ ಉದ್ಘಾಟಿಸುವರು. ಕ್ಯಾಮನಹಳ್ಳಿ ಗ್ರಾಮ ಪಂಚಾಯಿತಿ ನಿಕಟಪೂರ್ವ ಅಧ್ಯಕ್ಷ ಎಂ.ಜೆ.ಮಲ್ಲೇಶ್ ಅಧ್ಯಕ್ಷತೆ ವಹಿಸುವರು. ಶಾಸಕ ಸಿಮೆಂಟ್ ಮಂಜು, ಮಾಜಿ ಶಾಸಕ ಹೆಚ್.ಎಂ. ವಿಶ್ವನಾಥ್, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಪುರುಷೋತ್ತಮ್ ಬಿಳಿಮಲೆ, ಸಮಾಜ ಕಲ್ಯಾಣ ಇಲಾಖೆ ಅಪರ ನಿರ್ದೇಶಕ ಡಾ.ದೇವರಾಜ್, ರಂಗ ನಿರ್ದೇಶಕ ಕೆ.ಜಿ.ಮಹಾಬಲೇಶ್ವರ್ ಮತ್ತಿತರರು ಪಾಲ್ಗೊಳ್ಳುವರು. ತತ್ವಪದ ಗಾಯನ ಹಾಗು ರಂಗಗೀತೆ, ಜಾನಪದ ಗೀತೆ ಗಾಯನ ನೆರವೇರಲಿದೆ.

## ತಂಬಾಕಿಗೆ ನ್ಯಾಯಯುತ ಬೆಲೆ ದೊರಕಿಸಿಕೊಡಲು ಆಗ್ರಹ

» ಮೊದಲನೇ ಪುಟದಿಂದ

ಕೈಗೊಳ್ಳಬೇಕು. ಇಲ್ಲವಾದರೇ ಖರೀದಿಯನ್ನು ಸ್ಥಗಿತಗೊಳಿಸಿ ಪ್ರತಿಭಟನೆ ನಡೆಸಲಾಗುವುದೆಂದು ಎಚ್ಚರಿಕೆ ನೀಡಿದರು.

ತಂಬಾಕು ಮಂಡಳಿ ಇರುವುದು ಬೆಳೆಗಾರರ ಹಿತ ಕಾಪಾಡಲು. ಅದು ಇದುವರೆಗೂ ಸಾಧ್ಯವಾಗಿಲ್ಲ. ಇಲ್ಲಿ ವರ್ತಕರು, ಮಧ್ಯವರ್ತಿಗಳು ಹೇಳಿದಂತೆ ಬೆಲೆ ನಿಗದಿಗೊಳ್ಳುತ್ತಿದೆ. ಉಳ್ಳವರಿಗೆ ನಿರೀಕ್ಷಿತ ಬೆಲೆ ದೊರೆಯುತ್ತಿದ್ದರೇ ಬಡ ರೈತ ತಂಬಾಕು ಉತ್ಪಾದನೆ ಮಾಡಿ ಸಂಕಷ್ಟಕ್ಕೆ ಒಳಗಾಗುತ್ತಿದ್ದಾನೆ. ಕೆಜಿ ತಂಬಾಕು ಬೆಳೆಯಲು 280ರೂ. ವೆಚ್ಚ ಆಗುತ್ತದೆ. ಇಂದಿನ ಬೆಲೆಯನ್ನು ನೋಡಿದರೇ ಅಸಲು ಇಲ್ಲವಾಗಿದೆ ಎಂದು ದೂರಿದರು.

ತಂಬಾಕು ಮಂಡಳಿ ಅಧೀಕ್ಷಕಿ ಸವಿತಾ ಅವರಿಗೆ ಮನವಿ ಸಲ್ಲಿಸಿ ಸಭೆ ಕರೆಯುವಂತೆ ಒತ್ತಾಯಿಸಲಾಯಿತು.

ಈ ಸಂದರ್ಭದಲ್ಲಿ ರೈತ ಸಂಘಟನೆ ಮುಖಂಡರಾದ ಹಲಗಯ್ಯ, ಪುರುಷೋತ್ತಮಗೌಡ, ಮೋಹನ್, ಉಮಾಶಂಕರ್, ಹರೀಶ್, ಮಂಜಣ್ಣ, ಲೋಕೇಶ್, ತಂಬಾಕು ಬೆಳೆಗಾರರಾದ ಲೋಕಣ್ಣ,ಮಂಜೇಗೌಡ ಇತರರು ಇದ್ದರು.

## ವಿಜೃಂಭಣೆಯ ಕಾಲ ಭೈರವೇಶ್ವರಸ್ವಾಮಿ ರಥೋತ್ಸವ

• ಪ್ರಜೋದಯ ವರದಿ

**ಬಾಣಾವರ:** ರಾಜ್ಯದಲ್ಲೇ ಪ್ರಸಿದ್ಧಿ ಪಡೆದಿರುವ ಮನಕತ್ತೂರು ಗ್ರಾಮದಲ್ಲಿ ನೆಲೆಸಿರುವ ಶ್ರೀ ಕಾಲಭೈರವೇಶ್ವರಸ್ವಾಮಿ ರಥೋತ್ಸವ ಮಂಗಳವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಜರುಗಿತು.



ಲಕ್ಷಾಂತರ ಭಕ್ತರ ಆರಾಧ್ಯ ದೈವವಾಗಿರುವ ಕಾಲಭೈರವೇಶ್ವರ ಸ್ವಾಮಿ ರಥೋತ್ಸವ ಅಂಗವಾಗಿ ಫೆ.15ರಿಂದಲೇ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯುತ್ತಿವೆ. ಈ ಅವಧಿಯಲ್ಲಿ ಮುತ್ತಿನ ಪಲ್ಲಕ್ಕಿ ಉತ್ಸವ, ವೃಷಭ ವಾಹನೋತ್ಸವ, ಅಶ್ವವಾಹನೋತ್ಸವ, ಸಿಂಹ ವಾಹನೋತ್ಸವ, ಚಪ್ಪರ ಮಂಟಪೋತ್ಸವ, ಸರ್ಪ ವಾಹನೋತ್ಸವ, ಬಸವ ಪಲ್ಲಕ್ಕಿ ಉತ್ಸವ, ಹೂವಿನ ಅಷ್ಟಮಂಡಲೋತ್ಸವ ಸೇರಿ ಪ್ರತಿದಿನ ವಿಶೇಷ ಪೂಜೆ ಹಾಗು ಕೈಂಕರ್ಯಗಳು ಭಕ್ತಿಭಾವದಿಂದ ನೆರವೇರಿಸಲಾಯಿತು.

ಜಾತ್ರಾ ಅವಧಿಯಲ್ಲಿ ಭಕ್ತರಿಗೆ ಅಗತ್ಯ ಮೂಲಭೂತ ಸೌಲಭ್ಯಗಳೊಂದಿಗೆ ಪ್ರತಿದಿನ ಅನ್ನ ಸಂತರ್ಪಣೆ ವ್ಯವಸ್ಥೆ ಮಾಡಲಾಗಿತ್ತು. ದಿವ್ಯ ರಥೋತ್ಸವದಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ ಭಕ್ತರು ಸ್ವಾಮಿಯ ದರ್ಶನ ಪಡೆದು ಭಕ್ತಿ ಸಮರ್ಪಿಸಿದರು.

## ಫೆ.28 ರಂದು 3ನೇ ಜಿಲ್ಲಾ ರೈತ ಸಮ್ಮೇಳನ

• ಪ್ರಜೋದಯ ವರದಿ

**ಹಾಸನ:** ರೈತರ ಎಲ್ಲಾ ಬೆಳೆಗಳಿಗೂ ವೈಜ್ಞಾನಿಕ ಬೆಲೆ ನಿಗದಿಗೊಳಿಸಲು ಒತ್ತಾಯಿಸಿ, ಬಗರ್ ಹುಕುಂ ಮತ್ತು ಅರಣ್ಯ ಭೂಮಿ ಸಾಗುವಳಿದಾರರಿಗೆ ಹಕ್ಕುಪತ್ರ ನೀಡಬೇಕು, ಬಲವಂತದ ಭೂಸ್ವಾಧೀನ ಕೈಬಿಡಬೇಕೆಂದು ಆಗ್ರಹಿಸಿ ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) ಜಿಲ್ಲಾ 3ನೇ ರೈತ ಸಮ್ಮೇಳನವನ್ನು ಫೆ.28 ರಂದು ನಗರದ ಸ್ವಾಭಿಮಾನ ಭವನದಲ್ಲಿ ಏರ್ಪಡಿ ಸಲಾಗಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ಹೆಚ್.ಆರ್.ನವೀನ್ ಕುಮಾರ್ ತಿಳಿಸಿದ್ದಾರೆ.

ಕೃಷಿ ಪಂಪ್‌ಸೆಟ್‌ಗಳಿಗೆ ಡಿಜಿಟಲ್ ಮೀಟರ್ ಅಳವಡಿಸುವ ವಿದ್ಯುತ್ ಖಾಸಗೀಕರಣ ಮತ್ತು ಬೀಜ ಮಸೂದೆ ವಿರುದ್ಧ ರೈತಾಪಿ ಕೃಷಿ ಉಳಿಸಲು, ಕೃಷಿ ಕಾರ್ಪೊರೇಟೀಕರಣ ತಡೆಯಲು, ಜಿಲ್ಲೆಯ ಎಲ್ಲಾ ರೈತರ ಸಮಗ್ರ ಅಭಿವೃದ್ಧಿಗೆ ಆಗ್ರಹಿಸಿ ಪ್ರತಿನಿಧಿಗಳ ಅಧಿವೇಶನಕ್ಕೂ ಮೊದಲು ಅಂದು ಬೆಳಿಗ್ಗೆ 10.30ಕ್ಕೆ ನಗರದ ಹೇಮಾವತಿ ಪ್ರತಿಮೆ ಮುಂಭಾಗದಿಂದ ಮೆರವಣಿಗೆ ಹೊರಟು ನಗರದ ಪ್ರಮುಖ ಬೀದಿಗಳಲ್ಲಿ ಸಾಗಲಾಗುವುದೆಂದು ತಿಳಿಸಿದ್ದಾರೆ.

ಸಮ್ಮೇಳನದ ಉದ್ಘಾಟನೆಯನ್ನು ಕೆಪಿಆರ್‌ಎಸ್ ರಾಜ್ಯಾಧ್ಯಕ್ಷ ಯು. ಬಸವರಾಜ ಅವರು ನೆರವೇರಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಿಐಟಿಯು ಜಿಲ್ಲಾಧ್ಯಕ್ಷ ಧರ್ಮೇಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಬಿ.ಪುಷ್ಪ, ರೈತ ಮುಖಂಡರಾದ ಹೆಚ್.ಎಸ್.ಮಂಜುನಾಥ್, ದಲಿತ ಹಕ್ಕುಗಳ ಸಮಿತಿ ಜಿಲ್ಲಾ ಸಂಚಾಲಕ ಎಂ.ಜಿ.ಪೃಥ್ವಿ ಭಾಗವಹಿಸಲಿದ್ದಾರೆ. ಸಮಾರಂಭದ ಅಧ್ಯಕ್ಷತೆಯನ್ನು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷ ಹೆಚ್.ಆರ್.ನವೀನ್ ಕುಮಾರ್ ವಹಿಸಲಿದ್ದಾರೆ. ಜಿಲ್ಲೆಯ ರೈತರ ಸಮಸ್ಯೆಗಳ ಕುರಿತು ಸಮಗ್ರವಾಗಿ ಚರ್ಚಿಸಿ ಮುಂದಿನ ಹೋರಾಟ ರೂಪಿಸುವ ಉದ್ದೇಶದಿಂದ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಮ್ಮೇಳನ ನಡೆಸಲಾಗುತ್ತಿದೆಂದು ತಿಳಿಸಿದ್ದಾರೆ.

## ಮನೆ ಬೀಗ ಮುರಿದು ಚಿನ್ನಾಭರಣ ಕಳವು

• ಪ್ರಜೋದಯ ವರದಿ

**ಹಾಸನ:** ಮನೆ ಬೀಗ ಮುರಿದು ಚಿನ್ನಾಭರಣ ಹಾಗು ನಗದು ಕಳವು ಮಾಡಿರುವ ಘಟನೆ ತಾಲ್ಲೂಕಿನ ಕೆ. ಹೊಸಕೊಪ್ಪಲು ಗ್ರಾಮದಲ್ಲಿ ನಡೆದಿದೆ.

ಜವರಮ್ಮ ಎಂಬುವವರ ಮನೆಯಲ್ಲಿ ಫೆ.21 ರಿಂದ 22ರ ಮಧ್ಯದಲ್ಲಿ ಘಟನೆ ನಡೆದಿದೆ.ಮೊಮ್ಮಗಳ ಮುಡಿ ಕಾರ್ಯಕ್ಕಾಗಿ ಜವರಮ್ಮ ಅವರು ಮನೆಗೆ ಬೀಗ ಹಾಕಿಕೊಂಡು ಶಿವಗಂಗೆಗೆ ತೆರಳಿದ್ದರು. ಸೋಮವಾರ ಮನೆಗೆ ವಾಪಾಸ್ಸಾದಾಗ ವಿಷಯ ತಿಳಿದುಬಂದಿದೆ. ಮುಂಬಾಗಿಲು ಮುರಿದು ಒಳನುಗ್ಗಿರುವ ಕಳ್ಳರು ಬೀರುವಿನಲ್ಲಿಟ್ಟಿದ್ದ 40 ಗ್ರಾಂ ತೂಕದ ಬೆಳ್ಳಿ ದೀಪ, 20 ಗ್ರಾಂ ತೂಕದ ಬೆಳ್ಳಿ ಬಟ್ಟಲು, 5 ಗ್ರಾಂ ತೂಕದ ಚಿನ್ನದ ಮಾಂಗಲ್ಯ ಸರ ಮತ್ತು 20 ಸಾವಿರ ರೂ. ನಗದು ದೋಚಿದ್ದಾರೆ.

## ಚಿನ್ನದ ಸರ ಕಳವು

**ಹಾಸನ:** ವ್ಯಾನಿಟಿ ಬ್ಯಾಗ್‌ನಲ್ಲಿಟ್ಟಿದ್ದ 40 ಗ್ರಾಂ ತೂಕದ ಚಿನ್ನದ ಮಾಂಗಲ್ಯ ಸರ ಕಳವು ಮಾಡಿರುವ ಘಟನೆ ನಗರದ ಹೊಸ ಬಸ್ ನಿಲ್ದಾಣದಲ್ಲಿ ನಡೆದಿದೆ.

ಸಾಲಗಾಮೆ ಹೋಬಳಿ ಮಲ್ಲೇನಹಳ್ಳಿ ಗ್ರಾಮದ ಜಯಲಕ್ಷ್ಮೀ ಅವರು ಚಿಕ್ಕಮಗಳೂರಿನಿಂದ ಅಶ್ವಮೇಧ ಬಸ್‌ನಲ್ಲಿ ಹಾಸನಕ್ಕೆ ಬಂದಿದ್ದ ಅವರು ಬಸ್ ಇಳಿದು ಬ್ಯಾಗ್‌ಗಳನ್ನು ಆಸನದ ಮೇಲಿಟ್ಟು ಶೌಚಾಲಯಕ್ಕೆ ತೆರಳಿದ್ದರು. ನಂತರ ನಗರ ಸಾರಿಗೆ ಬಸ್ ಹತ್ತಲು ಹೋಗುತ್ತಿದ್ದಾಗ ವ್ಯಾನಿಟಿ ಬ್ಯಾಗ್‌ನಲ್ಲಿಟ್ಟಿದ್ದ ಚಿನ್ನದ ಸರ ಇಲ್ಲದೆ ಇರುವುದು ಗೊತ್ತಾಗಿದೆ.

## ಹುಣಸಿನಕೆರೆಯಲ್ಲಿ 20ಕ್ಕೂ ಅಧಿಕ ಮೃತ ನಾಟಿ ಕೋಳಿಗಳು ಪತ್ತೆ

• ಪ್ರಜೋದಯ ವರದಿ



**ಹಾಸನ:** ನಗರದ ಹುಣಸಿನಕೆರೆಯಲ್ಲಿ 20ಕ್ಕೂ ಅಧಿಕ ನಾಟಿಕೋಳಿಗಳು ಸತ್ತು ಬಿದ್ದಿದ್ದು ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ.

ಮಾಟ ಮಂತ್ರಕ್ಕಾಗಿ ಕೋಳಿಗಳನ್ನು ವಧೆ ಮಾಡಿರುವ, ಹಕ್ಕಿ ಜ್ವರದ ಭೀತಿಯಿಂದ ಕೋಳಿ ಅಂಗಡಿಯವರೇ ಬಿಸಾಡಿರಬಹುದೆಂಬ ಶಂಕೆ ವ್ಯಕ್ತವಾಗಿದೆ. ಹುಣಸಿನಕೆರೆಯ ಕಲ್ಲು ಬಂಡೆಯ ಸಮೀಪ ಮಂಗಳವಾರ ಚಿತ್ಕಲಾ ಫೌಂಡೇಶನ್ ಸಂಸ್ಥಾಪಕ ಬಿ.ಎಸ್.ದೇಸಾಯಿ ಹಾಗು ಸ್ನೇಹಿತರು ಆ ಕಡೆಗೆ ಹೋಗಿದ್ದಾಗ ಪ್ರಕರಣ ಬೆಳಕಿಗೆ ಬಂದಿದೆ.

ಕೆರೆ ದಂಡೆಯಲ್ಲಿ ಕೆಲವು ಕೋಳಿಗಳು ಸತ್ತು ಬಿದ್ದಿದ್ದರೆ ಮತ್ತೆ ಕೆಲವು ಜೀವನ್ಮರಣದ ಹೋರಾಟ ನಡೆಸುತ್ತಿದ್ದವು. ಕೆಲವು ಆರೋಗ್ಯವಾಗಿಯೇ ಓಡಾಡಿಕೊಂಡಿದ್ದವು. ಆದರೆ, ಇಷ್ಟೊಂದು ಸಂಖ್ಯೆಯ ಕೋಳಿಗಳು ಒಂದೇ ಕಡೆ ಇರುವುದು ಅನುಮಾನ ಮೂಡಿಸಿದೆ.

ಕೋಳಿಗಳಿಗೆ ರೋಗ ತಗುಲಿದ್ದರಿಂದ ಹೀಗೆ ಎಸೆದಿರಬಹುದು ಎನ್ನಲಾಗಿದೆ. ಅದೇ ನಿಜವಾಗಿದ್ದರೆ ಅದರಿಂದ ಉಂಟಾಗುವ ಅಡ್ಡಪರಿಣಾಮಗಳು ಹೆಚ್ಚಿವೆ. ಏನೂ ಗೊತ್ತಿಲ್ಲದೆ ಯಾರಾದರೂ ಮಾಂಸಹಾರ ಸೇವನೆಗಾಗಿ ಕೋಳಿಗಳನ್ನು ತೆಗೆದು ಕೊಂಡು ಹೋದರೆ ಅಥವಾ ಬೇರೆ ಪ್ರಾಣಿ ಪಕ್ಷಿಗಳು ಸೇವಿಸಿದರೆ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ. ಅದರಿಂದ ಜಲಚರ ಪ್ರಾಣಿಗಳಿಗೂ ಕಂಟಕ ಎದುರಾಗುತ್ತದೆಂಬ ಆತಂಕ ಸಾರ್ವಜನಿಕರನ್ನು ಕಾಡುತ್ತಿದೆ.

**ಪಾದಚಾರಿಗಳಿಗೆ ತೊಂದರೆ**

ಹುಣಸಿನಕೆರೆ ಏರಿ ಮೇಲೆ ನಿತ್ಯ ನೂರಾರು ಜನರು ವಾಕಿಂಗ್‌ಗೆ ಬರುತ್ತಾರೆ. ಬೆಳಿಗ್ಗೆ ಮತ್ತು ಸಂಜೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಬರುವುದರಿಂದ ಸತ್ತು ಬಿದ್ದಿರುವ ಕೋಳಿಗಳ ದುರ್ವಾಸನೆ ಹೆಚ್ಚಿದ್ದು ಮೂಗು ಮುಚ್ಚಿಕೊಂಡು ಓಡಾಡುವಂತಾಗಿದೆ. ಕೆರೆಯಲ್ಲಿ ಹಕ್ಕಿಗಳ ಕಲರವ, ಜಲ ಸೌಂದರ್ಯ ವೀಕ್ಷಣೆಗೆ ಬರುತ್ತಿರುವ ಜನರು ತೀವ್ರ ತೊಂದರೆ ಅನುಭವಿಸುವಂತಾಗಿದೆ. ಪಶುಪಾಲನಾ ಇಲಾಖೆ ಅಧಿಕಾರಿಗಳು ಪರಿಶೀಲಿಸಿ ಕೋಳಿ ಎಸೆದಿರುವ ಬಗ್ಗೆ ಸತ್ಯಾಸತ್ಯತೆ ಪರಿಶೀಲಿಸಬೇಕೆಂದು ಬಿ.ಎಸ್.ದೇಸಾಯಿ ಅವರು ಆಗ್ರಹಿಸಿದ್ದಾರೆ.

# ಚಿಕ್ಕನಾಳು ಕನ್ನಡ, ಉರ್ದು ಶಾಲೆ ಉಳಿಸಲು ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ನಗರದ ಚಿಕ್ಕನಾಳುವಿನಲ್ಲಿರುವ ಕನ್ನಡ ಹಾಗು ಉರ್ದು ಹಿರಿಯ ಪ್ರಾಥಮಿಕ ಶಾಲೆಯನ್ನು ಕೆಪಿಎಸ್ ಮ್ಯಾಗ್ನೆಟ್ ಹೆಸರಿನಲ್ಲಿ ಮುಚ್ಚಲು ಹೊರಟಿರುವುದನ್ನು ಖಂಡಿಸಿ ಎಐಡಿಎಸ್ಒ ನೇತೃತ್ವದಲ್ಲಿ ಮಂಗಳವಾರ ಪ್ರತಿಭಟನೆ ನಡೆಯಿತು.

ಪೋಷಕರಾದ ಸಲ್ಮಾಬಾನು ಅವರು ಮಾತನಾಡಿ, ಇಲ್ಲಿ ವಾಸವಾಗಿರುವುದು ಹಲವಾರು ಕಾರ್ಮಿಕರು, ಗಾರ್ಮೆಂಟ್ಸ್‌ನಲ್ಲಿ ದುಡಿಯುವ ಹೆಣ್ಣು ಮಕ್ಕಳು ಅವರ ಮಕ್ಕಳು ಸ್ವಲ್ಪವಾದರೂ ಶಿಕ್ಷಣ ಪಡೆದುಕೊಳ್ಳಬೇಕೆಂದರೆ ಸರ್ಕಾರಿ ಶಾಲೆ ಬೇಕೇ ಬೇಕು. ನಾವು ಸಹ ಇದೆ ಶಾಲೆಯಲ್ಲಿ ಓದಿ ಬೆಳೆದವರು. ಈ ಶಾಲೆಯನ್ನು ಮುಚ್ಚಲು ಬಿಡುವುದಿಲ್ಲವೆಂದು ಹೇಳಿದರು.

ಸಂಘಟನೆ ರಾಜ್ಯ ಖಜಾಂಚಿ ಸುಭಾಷ್ ಮಾತನಾಡಿ, ಸರ್ಕಾರ ಕೆಪಿಎಸ್ ಮ್ಯಾಗ್ನೆಟ್ ಹೆಸರಿನಲ್ಲಿ ಗ್ರಾಮ ಪಂಚಾಯಿತಿಗೊಂದು ಸರ್ಕಾರಿ ಶಾಲೆ ಮಾಡುತ್ತೇವೆಂದು ಹೇಳಿ 40,000 ಕ್ಕಿಂತ ಹೆಚ್ಚು ಸರ್ಕಾರಿ ಶಾಲೆಗಳನ್ನು ವಿಲೀನದ ಹೆಸರಿನಲ್ಲಿ ಮುಚ್ಚಲು ಹೊರಟಿದೆ. ಈ 2 ಶಾಲೆಗಳಲ್ಲಿ ಚಿಕ್ಕನಾಳು ಏರಿಯಾದ 30ಕ್ಕಿಂತ ಹೆಚ್ಚು ಮಕ್ಕಳು ಓದುತ್ತಿದ್ದಾರೆ. ಈ ಶಾಲೆಗಳು ಉಳಿದರೆ ಮಾತ್ರ ಅವರಿಗೆ ಶಿಕ್ಷಣ. ಸರ್ಕಾರ ಈ ಶಾಲೆಯನ್ನು ಮುಚ್ಚಿ ನಗರದ ಚಿಪ್ಪಿನ ಕಟ್ಟೆಯಲ್ಲಿರುವ ಪ್ರೌಢಶಾಲೆಗೆ ಇಲ್ಲಿನ ಮಕ್ಕಳು ಹೋಗಿ ಓದಬೇಕೆಂದು ಸರ್ಕಾರ ಆದೇಶ ಹೊರಡಿಸಿದೆ. ಈ ಶಾಲೆ ವಿಲೀನ ಮಾಡಲಾಗುತ್ತದೆಂದು ಹೇಳುತ್ತಿರುವುದು ಬಹಳ ಖಂಡನೀಯ ಎಂದರು.




ಸರ್ಕಾರ ವ್ಯವಸ್ಥಿತವಾಗಿ ಬಡವರ, ಕೂಲಿ ಕಾರ್ಮಿಕರ ಮಕ್ಕಳಿಂದ ಶಿಕ್ಷಣವನ್ನು ಕಸಿಯುವ ಹುನ್ನಾರ ಮಾಡುತ್ತಿದೆ. ಶಿಕ್ಷಣ ಸಚಿವರು ನಮ್ಮ ರಕ್ತದಲ್ಲಿ ಕನ್ನಡವಿದೆ ಒಂದೇ ಒಂದು ಸರ್ಕಾರಿ ಶಾಲೆಯನ್ನು ಕೂಡ ಮುಚ್ಚುವುದಿಲ್ಲ ಎಂದು ಸದನದಲ್ಲಿ ಹೇಳಿ ಹಿಂಬಾಗಿಲಿನಿಂದ ಆದೇಶವನ್ನು ಹೊರಡಿಸಿ ಸರ್ಕಾರಿ ಶಾಲೆಗಳನ್ನು ಮುಚ್ಚುತ್ತಿದ್ದಾರೆಂದು ಕಿಡಿಕಾರಿದರು.

ಕಳೆದ 8 ವರ್ಷಗಳಲ್ಲಿ ಎಲ್ಲಾ ರಾಜಕೀಯ ಪಕ್ಷಗಳು ಅಧಿಕಾರ ನಡೆಸಿವೆ. ಈ ಎಂಟು ವರ್ಷ ಗಳಲ್ಲಿ ಮೂರೂವರೆ ಸಾವಿರಕ್ಕೂ ಹೆಚ್ಚು ಖಾಸಗಿ ಶಾಲೆಗಳಿಗೆ ಅನುಮತಿ ನೀಡಿದ್ದಾರೆ. ಸರ್ಕಾರಿ ಶಾಲೆಗಳ ಅಭಿವೃದ್ಧಿ ಮಾಡದೆ ಖಾಸಗಿ ಶಾಲೆಗಳ ಪರ ಕೆಲಸ ಮಾಡಿದ್ದಾರೆ. 60,000ಕ್ಕೂ ಹೆಚ್ಚು ಶಿಕ್ಷಕರ ಹುದ್ದೆ ಖಾಲಿ ಇವೆ. 21,000ಕ್ಕೂ ಹೆಚ್ಚಿಗೆ ಕೊಠಡಿಗಳು ದುರಸ್ತಿಯಾಗಿಲ್ಲ. ಇನ್ನೂ ಹಲವಾರು ಸಮಸ್ಯೆಗಳು ಸರ್ಕಾರಿ ಶಾಲೆಗಳಲ್ಲಿ ಇವೆ. ಈ ಸಮಸ್ಯೆಗಳನ್ನು ಮೊದಲು ಪರಿಹರಿಸ ಬೇಕೆಂದು ಆಗ್ರಹಿಸಿದರು.

ಚಿಕ್ಕನಾಳು ಕನ್ನಡ ಹಾಗೂ ಉರ್ದು ಸರ್ಕಾರಿ ಶಾಲೆ ಉಳಿಸಲು ಏರಿಯಾದ ಸಮಿತಿ ರಚನೆ ಯಾಯಿತು. ಖಜಾಂಚಿ ಸುಭಾಷ್ ಬೆಟ್ಟದಕೊಪ್ಪ, ಜಿಲ್ಲಾಧ್ಯಕ್ಷರಾದ ಚೈತ್ರ, ಉಪಾಧ್ಯಕ್ಷ ಅಭಿಷೇಕ್, ಪೋಷಕರಾದ ಆಯಿಷಾ, ಸಲ್ಮಾಬಾನು, ಅಮೀರಬಾನು, ಫಾತಿಮಾ ಜಹಾರ, ಸಮೀನಾ, ಜಮೀರ್ ಹಾಗೂ ಶಾಲೆಯ ವಿದ್ಯಾರ್ಥಿಗಳು ಹಾಜರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK